ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 13 ಸೋಮವಾರ 2023

ಸಂಪುಟ: 44 | ಸಂಚಿಕೆ: 207 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರು ಜಿಲ್ಲೆಯಲ್ಲಿ ಜೆಡಿಎಸ್ ಬರ ಅಧ್ಯಯನ

ಬರ ಪರಿಹಾರ ಬಿಡುಗಡೆ ಮಾಡದಿದ್ದರೆ ಬೆಳಗಾವಿ ಅಧಿವೇಶನ ನಡೆಯಲು ಬಿಡಲ್ಲ: ಶಾಸಕ ಜಿ.ಟಿ.ದೇವೇಗೌಡರ ಎಚ್ಚರಿಕೆ

● ಬೆಳಗಾವಿ ವಿಧಾನಸೌಧಕ್ಕೆ ರೈತರು ಮುತ್ತಿಗೆ ಹಾಕುತ್ತಾರೆ ● ಕೇಂದ್ರದತ್ತ ಬೊಟ್ಟು ಮಾಡಬೇಡಿ ● ನಿಮ್ಮ ಬಾಬ್ತಾಗಿ ಎಷ್ಟು ಹಣ ಕೊಟ್ಟಿದ್ದೀರಿ

ಮೈಸೂರು,ನ.12(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆ ಮೈಸೂರಿನಲ್ಲಿ ಜೆಡಿಎಸ್ ಶಾಸಕರು ಹಾಗೂ ಮಾಜಿ ಶಾಸಕರು ಇಂದು ಬರ ಪೀಡಿತ ಪ್ರದೇಶಗಳಿಗೆ ಖುದ್ದು ಭೇಟಿ ನೀಡಿ, ಬರ ಅಧ್ಯಯನ ನಡೆಸಿದರು.

ಸಾಲ ಮಾಡಿ ಬೆಳೆದಿರುವ ಬೆಳೆ ಒಣಗಿ ನಷ್ಟಕ್ಕೊಳಗಾಗಿರುವ ರೈತರಿಗೆ ಈ ವೇಳೆ ಜೆಡಿಎಸ್ ನಾಯಕರು ಧೈರ್ಯ ತುಂಬಿದರು. ರಾಜ್ಯ ಸರ್ಕಾರ ಕೂಡಲೇ ಬರ ಪರಿಹಾರ ನೀಡದಿದ್ದರೆ ಡಿಸೆಂಬರ್ 4ರಿಂದ ಆರಂಭವಾಗುವ ಬೆಳಗಾವಿ ಅಧಿವೇಶನ ನಡೆಯಲು ಬಿಡುವುದಿಲ್ಲ ಎಂದು ಎಚ್ಚರಿಸಿದರು. ಕಳೆದ ವರ್ಷ ವಾಡಿಕೆಗೂ ಮೀರಿ ಮಳೆಯಾದ ಕಾರಣ ಅನ್ನದಾತ ಸಂತಸದಲ್ಲಿದ್ದ. ಆದರೆ ಈ ಬಾರಿ ಮುಂಗಾರು ಕೈಕೊಟ್ಟು ವಾಡಿಕೆಗಿಂತ ಕಡಿಮೆ ಮಳೆಯಾಗಿರುವ ಕಾರಣ ಬರಗಾಲ ಎದುರಾಗಿದೆ. ಮೈಸೂರು ಜಿಲ್ಲೆಯ 85 ಸಾವಿರ ಹೆಕ್ಟೇರ್ ಬೆಳೆ ಕೈಕೊಟ್ಟಿದ್ದು, ● 8ನೇ ಪುಟಕ್ಕೆ



ಜೆಡಿಎಸ್ ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕರಾದ ಸಾ.ರಾ.ಮಹೇಶ್, ಅಶ್ವಿನ್‌ಕುಮಾರ್, ಮಹದೇವ ಇನ್ನಿತರರು ಮೈಸೂರಲ್ಲಿ ಭಾನುವಾರ ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಬರ ಅಧ್ಯಯನ ನಡೆಸಿದರು.

ರೈತರು, ವಿಪಕ್ಷಗಳ ಹೋರಾಟಕ್ಕೆ ಕಾಂಗ್ರೆಸ್ ಶಾಸಕರೂ ಸಾಥ್ ನೀಡುತ್ತಾರೆ

ಬರ ಪರಿಹಾರ ಬಿಡುಗಡೆ ಮಾಡುವಂತೆ ವಿರೋಧ ಪಕ್ಷಗಳು ಹಾಗೂ ರೈತರು ನಡೆಸುವ ಹೋರಾಟಕ್ಕೆ ಕಾಂಗ್ರೆಸ್ ಶಾಸಕರೂ ಕೂಡ ಬೆಂಬಲಿಸುತ್ತಾರೆ ಎಂದು ಜಿ.ಟಿ.ದೇವೇಗೌಡರು ಹೇಳಿದರು. ಬರ ಪರಿಹಾರ ಬಿಡುಗಡೆ ಆಗದ ಕಾರಣ ರೈತರು ಕಷ್ಟಕ್ಕೆ ಸಿಲುಕಿದ್ದಾರೆ. ಇಂತಹ ಸ್ಥಿತಿಯಲ್ಲಿ ಶಾಸಕರು, ಅದರಲ್ಲೂ ಕಾಂಗ್ರೆಸ್ ಶಾಸಕರು ಹಳ್ಳಿಗಳಿಗೆ ಭೇಟಿ ನೀಡಿ ರೈತರಿಗೆ ಮುಖ ತೋರಿಸಲು ಸಾಧ್ಯವಾಗುತ್ತಿಲ್ಲ. ಆಡಳಿತ ಪಕ್ಷದವರಾಗಿ ನಮ್ಮ ಬೇಡಿಕೆ ಈಡೇರಿಸುತ್ತಿಲ್ಲ ಎಂದು ಜನರು ಅವರನ್ನು ಪ್ರಶ್ನೆ ಮಾಡುತ್ತಿದ್ದಾರೆ ಎಂದರು. ಈ ಹಿನ್ನೆಲೆ ರೈತರು ಹಾಗೂ ವಿರೋಧ ಪಕ್ಷದವರು ಮಾಡುವ ಹೋರಾಟವನ್ನು ಕಾಂಗ್ರೆಸ್ ಶಾಸಕರು ಬೆಂಬಲಿಸುತ್ತಾರೆ. ಬೆಳಗಾವಿಯ ವಿಧಾನಸೌಧಕ್ಕೆ ಮುತ್ತಿಗೆ ಹಾಕುವಾಗ ನಮ್ಮೊಡನೆ ಅವರು ಭಾಗಿಯಾಗುತ್ತಾರೆ ಎಂದು ತಿಳಿಸಿದರು.

ಕೋಟ್ಯಾಂತರ ರೂ. ಜಾಹೀರಾತು ಹಣ ರೈತರಿಗೆ ನೀಡಬಹುದಿತ್ತಲ್ಲವೆ?

ರಾಜ್ಯ ಕಾಂಗ್ರೆಸ್ ಸರ್ಕಾರ ಜಾಹೀರಾತಿಗೆ ನೀಡುವ ಹಣವನ್ನು ಬರಪೀಡಿತ ಪ್ರದೇಶದ ರೈತರಿಗೆ ನೀಡಬಹುದಿತ್ತು ಎಂದು ಮಾಜಿ ಶಾಸಕ ಸಾ.ರಾ.ಮಹೇಶ್ ಅಭಿಪ್ರಾಯಪಟ್ಟರು. ಗ್ಯಾರಂಟಿ ಯೋಜನೆಯ ಪ್ರಚಾರಕ್ಕಾಗಿ ಕೋಟ್ಯಾಂತರ ರೂ ವೆಚ್ಚ ಮಾಡುತ್ತಿದ್ದಾರೆ. ಅದೇ ಹಣವನ್ನು ಕಷ್ಟದಲ್ಲಿರುವ ರೈತರಿಗೆ ನೀಡಬಹುದಿತ್ತಲ್ಲವೆ ಎಂದು ಪ್ರಶ್ನಿಸಿದರು. ಸಿಎಂ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಲ್ಲೆ ಈ ಪರಿಸ್ಥಿತಿಯಾದರೆ, ಬೇರೆ ಜಿಲ್ಲೆಗಳಲ್ಲಿ ಪರಿಸ್ಥಿತಿ ಯಾವ ರೀತಿ ಇರುತ್ತದೆ ಎಂಬ ಪ್ರಶ್ನೆ ಎದುರಾಗಿದೆ ಎಂದರು. ಜಿಲ್ಲಾಧಿಕಾರಿಗಳ ಅಕೌಂಟ್‌ನಲ್ಲಿ ಹಣ ಇರುತ್ತದೆ. ಅದೇ ಹಣವನ್ನು ಬೆಳೆ ನಷ್ಟವಾದ ರೈತರಿಗೆ ನೀಡುವಂತೆ ಸರ್ಕಾರ ಸೂಚಿಸಬಹುದು. ಆದರೆ ರೈತ ಪರವಾದ ನಿರ್ಧಾರ ಮಾಡಲು ಈ ಸರ್ಕಾರಕ್ಕೆ ಬದ್ಧತೆ ಬೇಕಷ್ಟೆ ಎಂದರು. ಕೇಂದ್ರ ಸರ್ಕಾರದ ಕಡೆ ಬೊಟ್ಟು ಮಾಡಿ ತೋರಿಸುವುದಕ್ಕಿಂತ ನಿಮ್ಮ ಬಾಬ್ತಾಗಿ ಎಷ್ಟು ಹಣ ನೀಡಿದ್ದೀರಾ ಎಂದು ಸಾ.ರಾ.ಮಹೇಶ್ ಪ್ರಶ್ನಿಸಿದರು.

ಗ್ಯಾರಂಟಿ ಹೊಣೆ ಹೊರುವ ಕಾಂಗ್ರೆಸ್ ಸರ್ಕಾರ ರೈತರ ಹೊಣೆ ಏಕೆ ಹೊರುತ್ತಿಲ್ಲ?

ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಪ್ರಶ್ನೆ

● ಗ್ಯಾರಂಟಿ ಯೋಜನೆ ಜನರನ್ನು ತಲುಪುತ್ತಿಲ್ಲ
● ಅನುದಾನವಿಲ್ಲದೆ ಅಭಿವೃದ್ಧಿ ಶೂನ್ಯವಾಗಿದೆ

ಮೈಸೂರು, ನ.12(ಬಿಎಲ್‌ಯು) – ಗ್ಯಾರಂಟಿ ಯೋಜನೆಗಳ ಹೊಣೆ ಹೊತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ಸಂಕಷ್ಟದಲ್ಲಿರುವ ರೈತರ ಹೊಣೆ ಏಕೆ ಹೊರುತ್ತಿಲ್ಲ ಎಂದು ಹುಣಸೂರು ಕ್ಷೇತ್ರದ ಜೆಡಿಎಸ್ ಶಾಸಕ ಜಿ.ಡಿ.ಹರೀಶ್‌ಗೌಡ ಪ್ರಶ್ನಿಸಿದ್ದಾರೆ.

ಮೈಸೂರಿನಲ್ಲಿ ಇಂದು ಜೆಡಿಎಸ್ ಶಾಸಕರು ಹಾಗೂ ಮಾಜಿ ಶಾಸಕರ ಜೊತೆ ಬರ ಪೀಡಿತ ಪ್ರದೇಶಗಳಲ್ಲಿ ಬರ ಅಧ್ಯಯನ ಕೈಗೊಂಡ ವೇಳೆ ಪತ್ರಕರ್ತರ ಜೊತೆ ಮಾತನಾಡಿದ ಅವರು, ಬರ ಪರಿಹಾರ ನೀಡುವಂತೆ ಕೇಳಿದರೆ ಕೇಂದ್ರ ಸರ್ಕಾರದ ಕಡೆ ಬೊಟ್ಟು ಮಾಡಿ ತೋರಿಸುತ್ತಾರೆ. ಹಾಗಾದರೆ ಗ್ಯಾರಂಟಿ ಯೋಜನೆ ಹಣಕ್ಕೂ ಕೇಂದ್ರ ಸರ್ಕಾರದತ್ತ ಬೊಟ್ಟು ಮಾಡಿ ತೋರಿಸಲಿ ಎಂದು ತಿರುಗೇಟು ನೀಡಿದರು.


ಗ್ಯಾರಂಟಿ ಯೋಜನೆಗಳಿಗೆ ನಾವು ಹಣ ಕೊಡುತ್ತೇವೆ ಎಂದು ಅದರ ಹೊಣೆ ಹೊರುವ ಕಾಂಗ್ರೆಸ್ ಸರ್ಕಾರ, ಬೆಳೆ ನಷ್ಟದಿಂದ ಕಂಗಾಲಾಗಿರುವ ರೈತರ ಹೊಣೆ ಏಕೆ ಹೊರುತ್ತಿಲ್ಲ ಎಂದು ಹರೀಶ್‌ಗೌಡ ಮರು ಪ್ರಶ್ನಿಸಿದರು.

ಗ್ಯಾರಂಟಿ ಯೋಜನೆಗಳಿಗೆ 50ರಿಂದ 70 ಸಾವಿರ ಕೋಟಿ ರೂ. ಮೀಸಲಿಟ್ಟಿದ್ದೇವೆ ಎನ್ನುತ್ತಾರೆ. ಹಾಗಾದರೆ ಇನ್ನು ಹೆಚ್ಚುವರಿಯಾಗಿ 17 ಸಾವಿರ ಕೋಟಿ ರೂ. ಹಣ ಮೀಸಲಿಟ್ಟು, ಅದನ್ನು ಬರ ಪರಿಹಾರವಾಗಿ ರೈತರಿಗೆ ನೀಡಲಿ ಎಂದು ಸಲಹೆ ನೀಡಿದರು.

ಕರ್ನಾಟಕದ ಜನರು 135 ಶಾಸಕರನ್ನು ಗೆಲ್ಲಿಸುವ ಮೂಲಕ ಕಾಂಗ್ರೆಸ್ ಸರ್ಕಾರವನ್ನು ಭದ್ರಗೊಳಿಸಿದ್ದಾರೆ. ರಾಜ್ಯದ ಜನರಿಂದ ಮತ ಪಡೆದು ಈಗ ಬರ ಪರಿಹಾರದ ಹಣಕ್ಕೆ ಕೇಂದ್ರ ಸರ್ಕಾರದತ್ತ ಬೊಟ್ಟು ಮಾಡಿ ತೋರಿಸುವುದು ಯಾವ ನ್ಯಾಯ ಎಂದು ಕೇಳಿದರು.

ಗ್ಯಾರಂಟಿ ಯೋಜನೆ ನೀಡಿದ್ದೇವೆ ಎಂದು ಪ್ರಚಾರ ಮಾಡುತ್ತಾರೆ. ಆದರೆ ಗ್ಯಾರಂಟಿ ಯೋಜನೆ ಕೂಡ ಜನರನ್ನು ತಲುಪುತ್ತಿಲ್ಲ. ಗೃಹಲಕ್ಷ್ಮಿ ಯೋಜನೆಯ ಹಣ ಇನ್ನೂ ಬಹಳಷ್ಟು ಮಹಿಳೆಯರಿಗೆ ತಲುಪಿಲ್ಲ ಎಂದು ಆರೋಪಿಸಿದರು. ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದಾಗ 26 ಸಾವಿರ ಕೋಟಿ ರೂ. ● 8ನೇ ಪುಟಕ್ಕೆ

ಯೋಧರೊಂದಿಗೆ ಮೋದಿ ದೀಪಾವಳಿ



ಲೆಪ್ಚಾ (ಹಿಮಾಚಲ ಪ್ರದೇಶ), ನ.12– ಪ್ರತೀ ವರ್ಷ ದೀಪಾವಳಿ ಹಬ್ಬದ ವೇಳೆ ದೇಶದ ಗಡಿ ಕಾಯುವ ವೀರ ಯೋಧರ ಜೊತೆ ಹಬ್ಬ ಆಚರಿಸುವ ಪ್ರಧಾನಿ ಮೋದಿ, ಈ ಬಾರಿ ಕೂಡಾ ತಮ್ಮ ಪರಿಪಾಠವನ್ನು ಮುಂದುವರೆಸಿದ್ದಾರೆ. ಹಿಮಾಚಲ ಪ್ರದೇಶದ ಲೆಪ್ಚಾದಲ್ಲಿ ಪ್ರಧಾನಿ ಮೋದಿ ಭಾರತೀಯ ಸೇನೆಯ ಯೋಧರ ಜೊತೆ ದೀಪಾವಳಿ ಹಬ್ಬ ಆಚರಿಸಿದ್ದಾರೆ.

2022ರಲ್ಲಿ ಭಾರತ ಮತ್ತು ಪಾಕಿಸ್ತಾನ ಗಡಿಯ ಕಾರ್ಗಿಲ್‌ನಲ್ಲಿ ಸೈನಿಕರ ಜೊತೆ ದೀಪಾವಳಿ ಆಚರಣೆ ಮಾಡಿದ್ದ ಪ್ರಧಾನಿ, 2023ರಲ್ಲಿ ಭಾರತ ಮತ್ತು ಚೀನಾ ಗಡಿಯ ಹಿಮಾಚಲ ಪ್ರದೇಶದ ಲೆಪ್ಚಾದಲ್ಲಿ ದೀಪಾವಳಿ ಸಂಭ್ರಮಾಚರಣೆ ನಡೆಸುವ ಮೂಲಕ ದೇಶದ ಗಮನ ಸೆಳೆದಿದ್ದಾರೆ.

ಭಾನುವಾರ ಬೆಳಗ್ಗೆಯೇ ಹಿಮಾಚಲ ಪ್ರದೇಶದ ಲೆಪ್ಚಾ ತಲುಪಿದ ಮೋದಿ, ಗಡಿ ಭಾಗದ ಸೈನಿಕರಿಗೆ ಸಿಹಿ ಹಂಚಿ, ಉಡುಗೊರೆಗಳನ್ನು ನೀಡಿದರು. ಬಳಿಕ ಅವರೊಂದಿಗೆ ಸಂವಾದ ನಡೆಸಿದರು.

ಪರಿಸರ ಸ್ನೇಹಿ ಹಸಿರು ಪಟಾಕಿ ಮಾತ್ರ ಬಳಸಿ

ಜನತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ



ಬೆಂಗಳೂರು,ನ.12–ನಾಡಿನಾದ್ಯಂತ ಬೆಳಕಿನ ಹಬ್ಬ ದೀಪಾವಳಿ ಸಡಗರ, ಸಂಭ್ರಮ ಮನೆ ಮಾಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಜನತೆಗೆ ಶುಭಾಶಯ ಕೋರಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ವಿಡಿಯೋ ಸಂದೇಶ ನೀಡಿರುವ ಮುಖ್ಯಮಂತ್ರಿ, ದೀಪಾವಳಿ ತಮ್ಮೆಲ್ಲರ ಬಾಳಿನಲ್ಲಿ ಸುಖ, ಸಮೃದ್ಧಿಯ ಹೊಸ ಬೆಳಕು ಹೊತ್ತು ತರಲಿ ಎಂದು ಹಾರೈಸಿದ್ದಾರೆ. ಎಲ್ಲರೂ ಪರಿಸರ ಸ್ನೇಹಿಯಾದ ಹಸಿರು ಪಟಾಕಿಗಳನ್ನು ಮಾತ್ರವೇ ಬಳಸಿ, ಪಟಾಕಿ ಹಚ್ಚುವಾಗ ಕುಟುಂಬದ ಹಿರಿಯರು ಮಕ್ಕಳ ಬಗ್ಗೆ ಜಾಗ್ರತೆ ವಹಿಸಬೇಕು ಎಂದು ಮನವಿ ಮಾಡಿದ್ದಾರೆ. ದೀಪಾವಳಿ ಅಜ್ಞಾನದ ಅಂಧಕಾರ ತೊಡೆದು ಸುಜ್ಞಾನದ ಬೆಳಕು ಹರಿಸಲಿ. ಹಣತೆಗಳನ್ನು ಬೆಳಗಿ, ಹಸಿರು ಪಟಾಕಿಗಳನ್ನು ಮಾತ್ರವೇ ಸಿಡಿಸಿ ದೀಪಾವಳಿ ಆಚರಿಸಿ ಎಂದು ಜನತೆಗೆ ಶುಭ ಕೋರಿದ್ದಾರೆ.

ಕಾಂಗ್ರೆಸ್, ಬಿಆರ್‌ಎಸ್ ಕಾರ್ಯಕರ್ತರ ನಡುವೆ ಘರ್ಷಣೆ

ತೆಲಂಗಾಣ ಬಿಆರ್‌ಎಸ್ ಶಾಸಕ ಆಸ್ಪತ್ರೆಗೆ ದಾಖಲು

ನಾಗರಕರ್ನೂಲ್: ತೆಲಂಗಾಣ ವಿಧಾನಸಭಾ ಚುನಾವಣೆಗೆ ಕೆಲವೇ ದಿನಗಳು ಬಾಕಿಯಿರುವಂತೆಯೇ, ಆಡಳಿತಾರೂಢ ಬಿಆರ್‌ಎಸ್ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ಘರ್ಷಣೆ ನಡೆದಿದೆ.

ಅಚಂಪೇಟೆಯಲ್ಲಿ ಶನಿವಾರ ರಾತ್ರಿ 11 ಗಂಟೆಯಲ್ಲಿ ನಡೆದ ಘರ್ಷಣೆಯಲ್ಲಿ ಶಾಸಕ ಗುವ್ವಲ ಬಾಲರಾಜು ಗಾಯಗೊಂಡಿದ್ದಾರೆ ಮತ್ತು ಇತರರೊಂದಿಗೆ ಹೈದರಾಬಾದ್‌ನ ಆಸ್ಪತ್ರೆಗೆ ಸಾಗಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅರಮನೆ ಮೈದಾನದ ಬಿಜೆಪಿ ಸಮಾವೇಶ ಮುಂದೂಡಿಕೆ



ವಿಜಯೇಂದ್ರ ಪದಗ್ರಹಣ ನ.15ಕ್ಕೆ

ಬೆಂಗಳೂರು,ನ.12–ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಪುತ್ರ ಬಿ.ವೈ.ವಿಜಯೇಂದ್ರ ಕರ್ನಾಟಕ ಬಿಜೆಪಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು, ನವೆಂಬರ್ 15ರಂದು ಅಧಿಕೃತವಾಗಿ ರಾಜ್ಯಾಧ್ಯಕ್ಷರಾಗಿ ಅಧಿಕಾರ ಸ್ವೀಕಾರ ಮಾಡಲಿದ್ದಾರೆ.

ಬಳಿಕ ಬೆಂಗಳೂರಿನ ಅರಮನೆ ಮೈದಾನದಲ್ಲಿ ಬೃಹತ್ ಕಾರ್ಯಕರ್ತರ ಸಮಾವೇಶ ಮಾಡುವ ಮೂಲಕ ಒಗ್ಗಟ್ಟು ಪ್ರದರ್ಶನಕ್ಕೆ ಮುಹೂರ್ತ ನಿಗದಿಯಾಗಿತ್ತು. ಆದರೆ ಇದೀಗ ಅರಮನೆ ಮೈದಾನದಲ್ಲಿ ನಿಗದಿಯಾಗಿದ್ದ ಕಾರ್ಯಕ್ರಮವನ್ನು ಮುಂದೂಡಲಾಗಿದೆ. ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಬಿಜೆಪಿ ಕಚೇರಿಯಲ್ಲಿ ನ.15ರಂದು ವಿಜಯೇಂದ್ರ ಅವರ ಪದಗ್ರಹಣ ಮಾತ್ರ ನಿಗದಿಯಾಗಿದೆ. ನವೆಂಬರ್ 23ರ ನಂತರ ಬಿಜೆಪಿ ಕಾರ್ಯಕರ್ತರ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಆಹ್ವಾನಿಸಿ ದೊಡ್ಡ ಸಮಾವೇಶ ನಡೆಸಲು ಬಿಜೆಪಿ ಪ್ಲಾನ್ ಮಾಡಿದೆ. ಈಗ ಸಮಾವೇಶ ಮಾಡಿದರೆ ಕೇಂದ್ರದ ನಾಯಕರು ಪಂಚರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಬ್ಯುಸಿಯಾಗಿದ್ದಾರೆ. ಹೀಗಾಗಿ ಈಗ ಸಮಾವೇಶ ಮಾಡಿದರೆ ಕೇಂದ್ರದ ನಾಯಕರು ಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಸಮಾವೇಶವನ್ನು ಮುಂದೂಡಲಾಗಿದೆ.

ಈ ಬಗ್ಗೆ ಬೆಂಗಳೂರಲ್ಲಿ ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ರವಿಕುಮಾರ್ ಪ್ರತಿಕ್ರಿಯಿಸಿದ್ದು, ನವೆಂಬರ್ 23ರ ನಂತರ ನ.30ರೊಳಗೆ ದೊಡ್ಡ ಸಾರ್ವಜನಿಕ ಸಭೆ ನಡೆಸುತ್ತೇವೆ. ನ.23ಕ್ಕೆ ತೆಲಂಗಾಣ ಹೊರತುಪಡಿಸಿ ಉಳಿದ ರಾಜ್ಯಗಳಲ್ಲಿ ಚುನಾವಣೆ ಮುಗಿಯುತ್ತೆ. ಹೀಗಾಗಿ ವರಿಷ್ಠರಾದ ಅಮಿತ್ ಶಾ ಅಥವಾ ಜೆ.ಪಿ.ನಡ್ಡಾಗೆ ಆಹ್ವಾನ ನೀಡುತ್ತೇವೆ. ನ.15ರಂದು ಬಿಜೆಪಿ ಕಚೇರಿಯಲ್ಲಿ ● 8ನೇ ಪುಟಕ್ಕೆ

ಸಿಎಂ ಸಿದ್ದರಾಮಯ್ಯ ಮನೆಗೆ ಕೋಟಿ ಬೆಲೆಯ ವಿದೇಶಿ ಸೋಫಾ ಸೆಟ್ ಗಿಫ್ಟ್

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೊಸ ಬಾಂಬ್

● ಇದು ಹ್ಯೂಬ್ಲೋಟ್ ವಾಚ್‌ನ ಅಪ್ಡೇಟೆಡ್ ವರ್ಷನ್ ● 3 ಕೋಟಿ ವೆಚ್ಚದಲ್ಲಿ ಸಿಎಂ ಮನೆಯ ಕಾನ್ಫರೆನ್ಸ್ ಹಾಲ್ ನಿರ್ಮಾಣ



ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮನೆಗೆ ಅವರ ಆಪ್ತ ಸಚಿವರೊಬ್ಬರು ಕೋಟಿ ಬೆಲೆಬಾಳುವ ವಿದೇಶಿ ಸೋಫಾ ಸೆಟ್ ಗಿಫ್ಟ್ ನೀಡಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೊಸ ಬಾಂಬ್ ಸಿಡಿಸಿದ್ದಾರೆ.

ಬೆಂಗಳೂರಿನ ಪಕ್ಷದ ಕಚೇರಿ ಜೆಪಿ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕೋಟಿ ಕೋಟಿ ರೂಪಾಯಿ ಬೆಲೆಬಾಳುವ ಸೋಫಾ ಸೆಟ್ ಮುಖ್ಯಮಂತ್ರಿಗಳಿಗೆ ಅವರ ಆಪ್ತ ಸಚಿವರು ನೀಡಿದ್ದಾರೆ ಎಂಬ ಮಾಹಿತಿ ಬಂದಿದೆ. ಸ್ವಾಂಗ್ಲೆ ಎಂಬ ವಿದೇಶಿ ಬ್ರಾಂಡ್ ಸೋಫಾ ಸೆಟ್ ಇದಾಗಿದ್ದು, 1 ಕೋಟಿ 90 ಲಕ್ಷ ರೂಪಾಯಿ ಬೆಲೆಬಾಳುತ್ತದೆ ಎಂದು ಹೇಳಿದ ಅವರು, ಇದು ಹ್ಯೂಬ್ಲೋಟ್ ವಾಚ್‌ನ ಅಪ್ಡೇಟೆಡ್ ವರ್ಷನ್ ಎಂದು ಕಾಲೆಳೆದಿದ್ದಾರೆ.

ಸಿಎಂ ಮನೆಯಲ್ಲಿ ಕಾನ್ಫರೆನ್ಸ್ ಹಾಲ್ ಅನ್ನು ನಿರ್ಮಾಣ ಮಾಡಿದ್ದಾರೆ. ಅದಕ್ಕೆ ಎಷ್ಟು ಖರ್ಚು ಮಾಡಿದ್ದಾರೋ ಗೊತ್ತಿಲ್ಲ. ಮಾಧ್ಯಮದವರನ್ನು ಒಳಗೆ ಬಿಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಮೂರು ಕೋಟಿ ರೂಪಾಯಿಗಿಂತಲೂ ಹೆಚ್ಚೋ ಏನೋ ಖರ್ಚು ಮಾಡಿದ್ದಾರೆ ● 8ನೇ ಪುಟಕ್ಕೆ

ಜೆಡಿಎಸ್ ವಿಲೀನದ ಪ್ರಶ್ನೆಯೇ ಇಲ್ಲ

ಬೆಂಗಳೂರು: ಬಿಜೆಪಿ ಜತೆ ಜೆಡಿಎಸ್ ಪಕ್ಷವನ್ನು ವಿಲೀನ ಮಾಡುವ ಪ್ರಶ್ನೆಯೇ ಇಲ್ಲ. ಆದರೆ, ಎರಡೂ ಪಕ್ಷಗಳ ರಾಜ್ಯ ಘಟಕಗಳು ಕಾಂಗ್ರೆಸ್ ಸರ್ಕಾರದ ವೈಫಲ್ಯವನ್ನು ಬಯಲಿಗೆಳೆಯಲು ಕೆಲಸ ಮಾಡಲಿವೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಬಿ.ವೈ.ವಿಜಯೇಂದ್ರ ಅವರನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದನ್ನು ಸ್ವಾಗತಿಸುವುದಾಗಿ ಹೇಳಿದರು. ಪಕ್ಷ ವಿಲೀನದ ಕುರಿತು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಆ ಸಾಧ್ಯತೆಯನ್ನು ಅಲ್ಲಗಳೆದರು. ವಿಜಯೇಂದ್ರ ನೇಮಕವನ್ನು ಬಿಜೆಪಿ ಕಾರ್ಯಕರ್ತರು ಮತ್ತು ರಾಜ್ಯದ ನಾಯಕರು ಸ್ವಾಗತಿಸಿದ್ದಾರೆ. ನಾನು ಕೂಡ ಅವರ ನೇಮಕವನ್ನು ಸ್ವಾಗತಿಸುತ್ತೇನೆ. ಅವರಿಗೆ ಯಶಸ್ಸನ್ನು ಬಯಸುತ್ತೇನೆ ಎಂದರು. ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯು ಒಕ್ಕಲಿಗರು ಹಾಗೂ ಲಿಂಗಾಯತರ ಮತಗಳನ್ನು ಒಗ್ಗೂಡಿಸುವುದಕ್ಕೆ ಸೀಮಿತವಾಗಿಲ್ಲ. ಇತರ ಸಮುದಾಯಗಳ ಮತಗಳನ್ನು ಸೆಳೆಯುವ ಉದ್ದೇಶವೂ ಇದೆ. ಕಾಂಗ್ರೆಸ್ ಸರ್ಕಾರವನ್ನು ಮಣಿಸಲು ನಮ್ಮೊಂದಿಗೆ ಕೈಜೋಡಿಸಲು ಹಲವು ಸಮುದಾಯಗಳು ಉತ್ಸುಕವಾಗಿವೆ ಎಂದು ಹೇಳಿದರು.

9 ದಿನಗಳ ಹಾಸನಾಂಬೆ ದರ್ಶನ: ದೇವಾಲಯಕ್ಕೆ ದಾಖಲೆ ಆದಾಯ



ಹಾಸನ,ನ.12–ವರ್ಷಕ್ಕೆ ಒಮ್ಮೆ ಮಾತ್ರ ದರ್ಶನ ಭಾಗ್ಯ ಕರುಣಿಸುವ, ಹಾಸನದ ನಾಡ ದೇವತೆ ಹಾಸನಾಂಬೆಯ ದರ್ಶನಕ್ಕೆ ಜನ ಸಾಗರವೇ ಹರಿದು ಬರುತ್ತಿದೆ. ಕಳೆದ ಒಂಭತ್ತು ದಿನಗಳಿಂದಲೂ ಸಾಗರೋಪಾದಿಯಲ್ಲಿ ಭಕ್ತರು ಆಗಮಿಸಿ ದೇವಿ ದರ್ಶನ ಮಾಡಿ ಪುನೀತರಾಗುತ್ತಿದ್ದಾರೆ. ರಾಜಕೀಯ ಗಣ್ಯರು, ಸಿನಿ ತಾರೆಯರೂ ಕೂಡ ದೇವಿ ದರ್ಶನಕ್ಕೆ ಆಗಮಿಸುತ್ತಿದ್ದಾರೆ.

ನವೆಂಬರ್ 2ರಂದು ಹಾಸನಾಂಬೆ ದೇಗುಲದ ಬಾಗಿಲು ತೆರೆದು ನವೆಂಬರ್ 3ರಿಂದ ಸಾರ್ವಜನಿಕ ಭಕ್ತರಿಗೆ ದರ್ಶನ ಆರಂಭವಾಗಿದೆ. ಒಂಭತ್ತು ದಿನಗಳ ದರ್ಶನದಲ್ಲಿ ಹಾಸನಾಂಬೆ ದೇವಾಲಯಕ್ಕೆ ಇತಿಹಾಸದಲ್ಲೇ ದಾಖಲೆಯ ಆದಾಯ ಸಂಗ್ರಹವಾಗಿದೆ. ಕೇವಲ 9 ದಿನಗಳಲ್ಲಿ 4 ಕೋಟಿ 56 ಲಕ್ಷದ 22 ಸಾವಿರ 580 ರೂಪಾಯಿ ಆದಾಯ ಹರಿದು ಬಂದಿದೆ. ಈ ಬಗ್ಗೆ ದೇವಸ್ಥಾನದ ಆಡಳಿತ ಮಂಡಳಿ ಮಾಹಿತಿ ನೀಡಿದೆ.

ಯಾವುದರಿಂದ ಎಷ್ಟು ಎಷ್ಟು ಆದಾಯ ಸಂಗ್ರಹ: ವಿಶೇಷ ದರ್ಶನದ ಪಾಸ್ ಹಾಗೂ ಲಡ್ಡು ಪ್ರಸಾದ ಮಾರಾಟದಿಂದ ಹಾಸನಾಂಬೆಗೆ ಕೋಟಿ ಕೋಟಿ ಆದಾಯ ಹರಿದು ಬಂದಿದೆ. ನವೆಂಬರ್ 3ರಿಂದ ನ.11ರ ಮಧ್ಯಾಹ್ನ 2 ಗಂಟೆವರೆಗೆ 4,56,22,580 ರೂ. ಆದಾಯ ಸಂಗ್ರಹವಾಗಿದೆ. ● 8ನೇ ಪುಟಕ್ಕೆ


ಹಳ್ಳಕ್ಕೆ ಗೂಡ್ಸ್ ವಾಹನ ಉರುಳಿ ಓರ್ವ ಸಾವು

ಮೈಸೂರು,ನ.12(ಎಂಟಿವೈ)– ಮಲೆ ಮಹದೇಶ್ವರ ಬೆಟ್ಟಕ್ಕೆ ತೆರಳುತ್ತಿದ್ದ ಗೂಡ್ಸ್ ವಾಹನವೊಂದು ಹಳ್ಳಕ್ಕೆ ಉರುಳಿ ಬಿದ್ದ ಪರಿಣಾಮ, ಯುವಕ ಮೃತಪಟ್ಟು, 10 ಮಂದಿ ಗಾಯಗೊಂಡ ಘಟನೆ ಶನಿವಾರ ಸಂಜೆ ಸಂಭವಿಸಿದೆ.

ಮೈಸೂರಿನ ಬಂಡೀಪಾಳ್ಯದ ನಿವಾಸಿ ಹುಚ್ಚಯ್ಯ ಎಂಬುವರ ಮಗ ದರ್ಶನ್ (18) ಮೃತಪಟ್ಟಿದ್ದರೆ, ಬಂಡೀಪಾಳ್ಯದ 9 ಯುವಕರು ಹಾಗೂ ಹೊಸ ಹುಂಡಿಯ ಓರ್ವ ಯುವಕ ಗಾಯಗೊಂಡಿದ್ದಾರೆ. ಗಾಯಾಳುಗಳಲ್ಲಿ ನಾಲ್ವರ ಸ್ಥಿತಿ ಚಿಂತಾಜನಕವಾಗಿದ್ದು, ಖಾಸಗಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ. 11 ಮಂದಿ ಗೆಳೆಯರು ಮಹದೇಶ್ವರ ಬೆಟ್ಟಕ್ಕೆ ಹೋಗುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ.

ಘಟನೆ ವಿವರ: ಬಂಡೀಪಾಳ್ಯದ ನಿವಾಸಿ ಹನುಮಂತು ಎಂಬುವರ ಮಗ ಪವನ್(25) ಇತ್ತೀಚೆಗಷ್ಟೇ ಗೂಡ್ಸ್ ಮಿನಿ ಟೆಂಪೋ ಖರೀದಿಸಿದ್ದರು. ಹೊಸ ವಾಹನವನ್ನು ಮಹದೇಶ್ವರ ಬೆಟ್ಟಕ್ಕೆ ಕೊಂಡೊಯ್ದು ಪೂಜೆ ಮಾಡಿಸಿಕೊಂಡು ಬರಲು ತನ್ನ 10 ಮಂದಿ ಗೆಳೆಯರೊಂದಿಗೆ ಮಲೆ ಮಹದೇಶ್ವರ ಬೆಟ್ಟಕ್ಕೆ ಹೋಗುತ್ತಿದ್ದಾಗ ಅಪಘಾತ ಸಂಭವಿಸಿದೆ. ಶನಿವಾರ ಸಂಜೆ 3.15ಕ್ಕೆ ತನ್ನ 10 ಮಂದಿ ಗೆಳೆಯರಾದ ಬಂಡೀಪಾಳ್ಯದ ನಿವಾಸಿಗಳಾದ ಸುನೀಲ್ (23), ಸುಧೀಪ್ (20), ಐಟಿಐ ವಿದ್ಯಾರ್ಥಿ ನಿತಿನ್ (17), ದರ್ಶನ್ (19), ಸಹೋದರರಾದ ವಿಕಾಸ್ (19), ವಿಜಯ್ (17), ರವಿಚಂದ್ರ್(23), ಶಶಾಂಕ್(19) ಹಾಗೂ ಹೊಸಹುಂಡಿಯ ನಿತಿನ್ (18) ಅವರೊಂದಿಗೆ ಗೂಡ್ಸ್ ಮಿನಿ ಟೆಂಪೋ (ಕೆಎ–55, ಎ–2792)ದಲ್ಲಿ ಬಂಡೀಪಾಳ್ಯದಿಂದ ಹೊರಟಿದ್ದಾರೆ. ಮೈಸೂರು–ತಿ.ನರಸೀಪುರ ಮುಖ್ಯ ರಸ್ತೆಯ ಮೇಗಳಾಪುರ ಬಳಿ ಸಾಗುತ್ತಿದ್ದಾಗ ಏಕಾಏಕಿ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಪಕ್ಕದ ಹಳ್ಳಕ್ಕೆ ಉರುಳಿ ಬಿದ್ದಿದೆ. ಟೆಂಪೋ ವೇಗವಾಗಿ ಸಾಗುತ್ತಿದ್ದ ಹಿನ್ನೆಲೆಯಲ್ಲಿ ರಸ್ತೆ ಪಕ್ಕದ ತಡೆಗೋಡೆಗೆ ಅಪ್ಪಳಿಸಿದ್ದರಿಂದ ಟೆಂಪೋದಲ್ಲಿದ್ದ 11 ಮಂದಿಗೆ ಗಾಯವಾಗಿದೆ.

ಸೇತುವೆ ಪಕ್ಕದ ಹಳ್ಳಕ್ಕೆ ಉರುಳಿ ಬಿದ್ದ



ಅಪಘಾತಕ್ಕೀಡಾದ ವಾಹನ



ಮೃತಪಟ್ಟ ದರ್ಶನ್

10 ಮಂದಿಗೆ ಗಾಯ

ಟೆಂಪೋದಲ್ಲಿಯೇ ರಕ್ತದ ಮಡುವಿನಲ್ಲಿ ನರಳಾಡುತ್ತಿದ್ದ ಗಾಯಾಳುಗಳನ್ನು ಸ್ಥಳೀಯರು ಹಾಗೂ ದಾರಿಹೋಕರು ರಕ್ಷಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಬಂದ ಮೇಗಳಾಪುರ ಠಾಣೆಯ ಪೊಲೀಸರು ಸ್ಥಳೀಯರೊಂದಿಗೆ ಗಾಯಾಳುಗಳನ್ನು ಮೈಸೂರಿನ ಆಸ್ಪತ್ರೆಗೆ ಸಾಗಿಸಿದರು. 11 ಮಂದಿ ಗಾಯಾಳುಗಳಲ್ಲಿ ದರ್ಶನ್ ಇಂದು ಮುಂಜಾನೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟರೆ, ಇನ್ನು 10 ಮಂದಿ ವಿವಿಧ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನಾಲ್ವರ ಸ್ಥಿತಿ ಚಿಂತಾಜನಕವಾಗಿದೆ ಎಂದು ವೈದ್ಯರು ತಿಳಿಸಿರುವುದರಿಂದ ಅವರ ಪೋಷಕರು ● 8ನೇ ಪುಟಕ್ಕೆ



ಚಿಂಚಣಿ ಮಠದ ಅಲ್ಲಮಪ್ರಭು ಸ್ವಾಮೀಜಿ ಲಿಂಗೈಕ್ಯ



ಚಿಕ್ಕೋಡಿ(ಬೆಳಗಾವಿ), ನ.12– ಚಿಂಚಣಿ ಸಿದ್ದ ಸಂಸ್ಥಾನ ಮಠದ ಅಲ್ಲಮಪ್ರಭು ಮಹಾಸ್ವಾಮೀಜಿ (63) ಭಾನುವಾರ ಲಿಂಗೈಕ್ಯರಾಗಿದ್ದಾರೆ.

ಕಳೆದ 30 ವರ್ಷದಿಂದ ರಾಜ್ಯದ ಗಡಿ ಭಾಗದಲ್ಲಿ ಕನ್ನಡ ಬೆಳವಣಿಗೆಗೆ ಪ್ರಮುಖ ಪಾತ್ರ ವಹಿಸಿ ಕನ್ನಡ ಉಳಿವಿಗಾಗಿ ಹಾಲು ರಾತ್ರಿ ಜಾಗೃತಿ ಮೂಡಿಸುತ್ತಿದ್ದರು. ಪ್ರತಿ ವರ್ಷ ನ.2ರಂದು ಶ್ರೀಮಠದಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಿಸಿ ಕನ್ನಡ ಪುಸ್ತಕ ಪ್ರಕಟಿಸಿ ಕನ್ನಡಿಗರಿಗೆ ಓದಲು ಕೊಡುತ್ತಿದ್ದರು. ಸ್ವಾಮೀಜಿಗಳ ಅಗಲಿಕೆಯಿಂದ ಭಕ್ತ ವೃಂದದಲ್ಲಿ ಶೋಕ ಮನೆ ಮಾಡಿದೆ. ಚಿಕ್ಕೋಡಿ ನಗರದಿಂದ 6 ಕಿ.ಮೀ ದೂರದಲ್ಲಿ ಇರುವ ಚಿಂಚಣಿ ಎಂಬ ಪುಟ್ಟ ಗ್ರಾಮದಲ್ಲಿನ ಅಲ್ಲಮಪ್ರಭು ಸಿದ್ದ ಸಂಸ್ಥಾನ ಮಠವು ಕನ್ನಡದ ಕಾಯಕದ ಮೂಲಕ ಚಿರಪರಿಚಿತವಾಗಿದೆ.

ಕನ್ನಡ ನಾಡು-ನುಡಿ ಬೆಳವಣಿಗೆಗೆ ಶ್ರಮಿಸಿದವರ ಸ್ಮರಿಸಿ: ಹರೀಶ್‌ಗೌಡ



ಮೈಸೂರು, ನ.12- ದೇವರಾಜ ಮೊಹಲ್ಲಾ ನಾಗರಿಕರ ವೇದಿಕೆ ವತಿಯಿಂದ 68ನೇ ವರ್ಷದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಡಿ.ದೇವರಾಜ ಅರಸ್ ರಸ್ತೆಯಲ್ಲಿ ಧ್ವಜಾರೋಹಣ ಮಾಡಲಾಯಿತು. ನಂತರ ಸಿಹಿ ವಿತರಿಸಿ, ಮಾತನಾಡಿದ ಶಾಸಕ ಕೆ.ಹರೀಶಗೌಡ, ಕನ್ನಡ ನಾಡು ನುಡಿಯ ಬೆಳವಣಿಗೆಗೆ ಶ್ರಮಿಸಿದವರನ್ನು ಸದಾ ಸ್ಮರಿಸಬೇಕು ಎಂದು ಸಲಹೆ ನೀಡಿದರು. ಕನ್ನಡ ನಾಡು-ನುಡಿ ಬಗ್ಗೆ ಪ್ರತಿಯೊಬ್ಬರೂ ಅಭಿಮಾನ ಬೆಳೆಸಿಕೊಳ್ಳಬೇಕು. ಕನ್ನಡ ಸಾಹಿತ್ಯ ಪರ ಚಟುವಟಿಕೆಗಳು ನಿರಂತರವಾಗಿ ನಡೆಯಬೇಕು ಎಂದು ಆಶಿಸಿದರು. ಈ ಸಂದರ್ಭದಲ್ಲಿ ನಗರ ಪಾಲಿಕೆ ಸದಸ್ಯರಾದ ಪ್ರಮೀಳಾ ಭರತ್, ಕನ್ನಡ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್ ಕುಮಾರ್ ಮಂಜುನಾಥ್, ರವಿ, ಪ್ರಮೋದ್ ಗೌಡ, ಸತ್ಯಪ್ಪ, ಈರೇಗೌಡ, ಪ್ರಜ್ವಲ್, ನಿತಿನ್, ಮೋಹನ್‌ಕುಮಾರ್ ಚರಣ್ ಮುಂತಾದವರು ಉಪಸ್ಥಿತರಿದ್ದರು.

ಪಡುವಾರಹಳ್ಳಿಯಲ್ಲಿ ಒನಕೆ ಓಬವ್ವ ಜಯಂತಿ



ಮೈಸೂರು,ನ.12-ಮೈಸೂರಿನ ಪಡುವಾರಹಳ್ಳಿಯ ಮಹಾರಾಣಿ ಕಾಲೇಜು ಬಳಿಯ ಶ್ರೀ ಮಹರ್ಷಿ ವಾಲ್ಮೀಕಿ ನಾಮ ಫಲಕದ ಬಳಿ ಒನಕೆ ಓಬವ್ವ ಜಯಂತಿಯನ್ನು ಆಚರಿಸಲಾಯಿತು.

ಮಹಾರಾಣಿ ಕಾಲೇಜಿನ ವಾಣಿಜ್ಯ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಹನುಮಂತೇಶ್, ಓಬವ್ವರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿ, ಚಿತ್ರದುರ್ಗದ ಇತಿಹಾಸದಲ್ಲಿ ಮದಕರಿ ನಾಯಕರ ಜೊತೆಗೆ ಒನಕೆ ಓಬವ್ವರ ಪಾತ್ರವನ್ನು ಕನ್ನಡ ನಾಡು ಸದಾ ಸ್ಮರಿಸುತ್ತದೆ. 18ನೇ ಶತಮಾನದಲ್ಲಿ ಚಿತ್ರದುರ್ಗದ ಕೋಟೆಯನ್ನು ಹೈದರಾಲಿಯು ಮೋಸದಿಂದ ಕಬಳಿಸಲು ಯತ್ನಿಸಿದಾಗ ಒನಕೆಯನ್ನೇ ಆಯುಧ ಮಾಡಿಕೊಂಡು ನೂರಾರು ಶತ್ರುಗಳ ಸದೆಬಡಿದು ವೀರ ಮರಣವನ್ನಪ್ಪಿದ ವೀರ ನಾರಿ ಓಬವ್ವ. ಮಹಿಳೆಯರ ಪಾಲಿನ ವೀರ ವನಿತೆಯಾಗಿ ಸದಾ ಸ್ಮರಣೀಯರಾಗಿದ್ದಾರೆ. ಅವರ ಹೆಸರನ್ನು ನಗರ ಪಾಲಿಕೆ ಯಾವುದಾದರೂ ರಸ್ತೆ, ವೃತ್ತ, ಉದ್ಯಾನಕ್ಕೆ ನಾಮಕರಣ ಮಾಡಿ ಅವರ ಹೆಸರನ್ನು ಚಿರಸ್ಥಾಯಿಯಾಗಿ ಉಳಿಯುವ ಕೆಲಸ ಮಾಡಲಿ ಎಂದರು.

ಚಾಮರಾಜ ಕ್ಷೇತ್ರದ ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಸ್ವಾಮಿ, ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎಂ.ಎಸ್.ಆಶಾ, ಸುನೀತಾ, ಎ.ಎನ್.ದಿವ್ಯ, ಬಸವರಾಜು, ನಗರ ಪಾಲಿಕೆ ಮಾಜಿ ಸದಸ್ಯ ಎಂ.ಚಿಕ್ಕವೆಂಕಟು, ಆಟೋ ಮಂಜು, ಕರ್ನಾಟಕ ಗ್ರಾಮೀಣ ಬ್ಯಾಂಕ್, ನಿವೃತ್ತ ಚೀಫ್ ಮ್ಯಾನೇಜರ್ ಭರತ್‌ರಾಜ್, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಸಂತೋಷ್, ನಿರ್ದೇಶಕ ಸಿ.ಡಿ.ಕುಮಾರ್, ಕೇಬಲ್ ಕಿಟ್ಟಿ, ಗೋಕುಲಂ ರವಿಚಂದ್ರ, ವೇಣು, ಸುರೇಂದ್ರ, ಭೈರಪ್ಪ ಮತ್ತಿತರರಿದ್ದರು.

ವಿಜಯೇಂದ್ರ ಆಯ್ಕೆ ಸ್ವಾಗತಾರ್ಹ: ಹೇಮಾ ನಂದೀಶ್

ಮೈಸೂರು,ನ.12-ಬಿಜೆಪಿ ರಾಜ್ಯ ಘಟಕದ ಸ್ಥಾನಕ್ಕೆ ಬಿ.ವೈ.ವಿಜಯೇಂದ್ರ ಅವರನ್ನು



ಆಯ್ಕೆ ಮಾಡಿರುವುದು ಸ್ವಾಗತಾರ್ಹ ಬೆಳವಣಿಗೆ ಎಂದು ಮೈಸೂರು ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್ ತಿಳಿಸಿದ್ದಾರೆ.

ಪತ್ರಿಕೆ ಹೇಳಿಕೆ ನೀಡಿದ ಅವರು, ವಿಜಯೇಂದ್ರ ಅವರು ಯುವ ಸಮೂಹ ಕಟ್ಟಿಕೊಂಡು ರಾಜ್ಯದಲ್ಲಿ ಪ್ರವಾಸ ಮಾಡಿ, ವರ್ಚಸ್ಸು ಬೆಳೆಸಿಕೊಂಡಿದ್ದಾರೆ. ತಂದೆ ಹೆಸರು ಅವರಿಗೆ ಶ್ರೀರಕ್ಷೆಯಾಗಿ ನಿಲ್ಲಲಿದೆ. ಬಿ.ವೈ.ವಿಜಯೇಂದ್ರ ಕೇಂದ್ರ ನಾಯಕರ ಮಾರ್ಗದರ್ಶನದಲ್ಲಿ ನಡೆಯಲಿದ್ದಾರೆ. ನಾವೆಲ್ಲರೂ ಅವರಿಗೆ ಬೆಂಬಲವಾಗಿ ನಿಂತು ಕೆಲಸ ಮಾಡೋಣ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ 25 ಸ್ಥಾನಗಳನ್ನು ಗೆಲ್ಲಲು ಶ್ರಮಿಸೋಣ ಎಂದು ತಿಳಿಸಿದ್ದಾರೆ. ಪಕ್ಷದ ಅಧ್ಯಕ್ಷರ ನೇಮಕ ವಿಚಾರವಾಗಿ ಕಾಂಗ್ರೆಸ್ ಲೇವಡಿ ಮಾಡುತ್ತಿತ್ತು. ಈಗ ರಾಜ್ಯದಲ್ಲಿ ಸೂಕ್ತ ನಾಯಕನನ್ನು ಬಿಜೆಪಿ ನೇಮಕ ಮಾಡಿದೆ. ಮುಂದಿನ ದಿನಗಳಲ್ಲಿ ಬಿಜೆಪಿ ಯಶಸ್ಸಿನ ಹಾದಿಯಲ್ಲಿ ಸಾಗಲಿದೆ ಎಂದು ತಿಳಿಸಿದ್ದಾರೆ.



ಮೊಹಮ್ಮದ್ ಮಿನ್‌ಹಜ್‌ಗೆ ಪಿಹೆಚ್.ಡಿ ಪದವಿ

ಮೈಸೂರು, ನ.12- ಡಾ. ಶಾಲಿನಿ ಆರ್. ಅರಸ್ ಅವರ ಮಾರ್ಗದರ್ಶನದಲ್ಲಿ ಮೊಹಮ್ಮದ್ ಮಿನ್‌ಹಜ್ ಅವರು ಮಾಹಿತಿ ನಿರ್ವಹಣೆ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಉದ್ಯಾನಗಳಲ್ಲಿನ ಶೌಚಾಲಯ ನಿರ್ವಹಣೆ ಗೊಂದಲಕ್ಕೆ ಹಿರಿಯರ ಬೇಸರ



ಮೈಸೂರು, ನ.12- (ಎಸ್‌ಪಿಎನ್)- ನಗರದ ಬಹುತೇಕ ಉದ್ಯಾನವನಗಳಲ್ಲಿ ಶೌಚಾಲಯಗಳನ್ನು ಸಾರ್ವಜನಿಕರ ತೆರಿಗೆ ಹಣದಲ್ಲಿ ನಿರ್ಮಾಣ ಮಾಡಿ, ಅವುಗಳ ದೀರ್ಘಕಾಲದ ನಿರ್ವಹಣೆ ಕುರಿತು ಮೈಸೂರು ನಗರ ಪಾಲಿಕೆ ಅಧಿಕಾರಿಗಳು ಪರ್ಯಾಯ ಚಿಂತನೆ ನಡೆಸುತ್ತಿಲ್ಲ ಎಂದು ಮೈಸೂರು ಹಿರಿಯ ನಾಗರಿಕರ ವೇದಿಕೆ ಆರೋಪಿಸಿದೆ.

ಸರಸ್ವತಿಪುರಂನ ದೇ.ಜವರೇಗೌಡ ಪಾರ್ಕ್, ನಿವೇದಿತಾನಗರ ಸುಬ್ಬರಾವ್ ಪಾರ್ಕ್, ರಾಮಕೃಷ್ಣನಗರದ ಪರಮಹಂಸ ಪಾರ್ಕ್, ಚೆಲುವಾಂಬ ಪಾರ್ಕ್, ಲವಕುಶ ಪಾರ್ಕ್, ಸುಮಾ ಸೋಪಾನ ಪಾರ್ಕ್, ಗಂಡಭೇರುಂಡ ಪಾರ್ಕ್ ಹಾಗೂ ಜಿಲ್ಲಾ ನ್ಯಾಯಾಲಯದ ಎದುರಿನ ಪಾರ್ಕ್ ಸೇರಿದಂತೆ ನಗರದ ವಿವಿಧೆಡೆ ಇರುವ ಉದ್ಯಾನವನಗಳಲ್ಲಿ ಸಾರ್ವ ಜನಿಕರ ಉಪಯೋಗಕ್ಕಾಗಿ ಶೌಚಾಲ ಯಗಳನ್ನು ಪಾಲಿಕೆ ನಿರ್ಮಿಸುತ್ತಿದೆ.

ಆದರೆ, ಅದರ ದೀರ್ಘಕಾಲದ ಸ್ವಚ್ಛತೆ ಮತ್ತು ನಿರ್ವಹಣೆ ಕುರಿತು ಪ್ರತ್ಯೇಕ ತಂಡ ರಚಿಸುವ ಸಂಬಂಧ ಹಲವು ಬಾರಿ ಮನವಿ ಮಾಡಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಕ್ಯಾರೆ ಎನ್ನುತ್ತಿಲ್ಲ ಎಂದು ವೇದಿಕೆಯ ಕಾರ್ಯದರ್ಶಿ ಬಸವರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಅಧಿಕಾರಿಗಳು ಯಾರದ್ದೋ ಒತ್ತಡಕ್ಕೆ ಮಣಿದು ನಗರದ ಉದ್ಯಾನವನಗಳಲ್ಲಿ ಶೌಚಾಲಯ ನಿರ್ಮಾಣ ಮಾಡಿ, ಉದ್ಘಾಟನೆ ಮಾಡಿಸುತ್ತಾರೆ. ನಂತರ ಆ ಕಟ್ಟಡಗಳು ಸಾರ್ವಜನಿಕ ಉಪಯೋಗವಾಗುತ್ತಿದೆಯೇ, ಇಲ್ಲವೆ ಎಂಬುದನ್ನು ಗಮನಿಸುತ್ತಿಲ್ಲ. ನಗರದ ಬಹುತೇಕ ಪಾರ್ಕ್‌ಗಳಲ್ಲಿ ನಿರ್ವಹಣೆ ಇಲ್ಲದೆ, ಬಂದ್ ಮಾಡಲಾಗಿದೆ. ಅಲ್ಲದೆ, ಇದರ ದೀರ್ಘಕಾಲದ ನಿರ್ವಹಣೆ ಕುರಿತು ಪಾಲಿಕೆ ಚಿಂತಿಸುತ್ತಿಲ್ಲ. ಈ ಬಗ್ಗೆ ಹಲವು ಬಾರಿ ಮೇಯರ್, ಪಾಲಿಕೆ ಆಯುಕ್ತರು, ವಲಯ ಆಯುಕ್ತರು ಸೇರಿದಂತೆ ಆಯಾಯ ವಾರ್ಡ್ ಜನಪ್ರತಿನಿಧಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗುತ್ತಿಲ್ಲ ಎಂದು ಆರೋಪಿಸಿದರು.


ನಗರದ ಒಂದೊಂದು ಉದ್ಯಾನವನದಲ್ಲಿ ಲಕ್ಷಾಂತರ ರೂ., ಸಾರ್ವಜನಿಕರ ಹಣ ವೆಚ್ಚ ಮಾಡಿ ಶೌಚಾಲಯ ಕಟ್ಟಡ ನಿರ್ಮಿಸಿ, ಜನರ ಉಪಯೋಗಕ್ಕೆ ಬಾರದಂತೆ ನೋಡಿಕೊಳುವುದು ಎಷ್ಟು ಸರಿ. ಉದ್ಘಾಟನೆಗೊಂಡ ನಂತರ ಈ ಶೌಚಾಲಯಗಳು ಸಾರ್ವಜನಿಕವಾಗಿ ಉಪಯೋಗವಾಗುತ್ತಿಲ್ಲ ಎಂಬುದೇ ನೋವಿನ ಸಂಗತಿ. ದೇ.ಜವರೇಗೌಡ ಉದ್ಯಾನವನದಲ್ಲಿನ ಶೌಚಾಲಯ ಕಟ್ಟಡದ ನಿರ್ಮಾಣವಾಗಿ ಹಲವು ತಿಂಗಳೆ ಕಳೆದರೂ ಸಾರ್ವಜನಿಕರ ಉಪಯೋಗಕ್ಕೆ ಬರುತ್ತಿಲ್ಲ ಎಂದು ಮಾಹಿತಿ ನೀಡಿದರು.

ಅಂದವೊ... ಅಂದವೋ... ಅಮೃತ ಗ್ರಾಮ...!

● ಮೋಹನ್ ಕಾಯಕ











ಮೈಸೂರು, ನ.12- ಪ್ಯಾಟೆ ಮಂದಿಗೆ ಹಳ್ಳಿ ಸೊಗಡಿನ ಸವಿ... ತೊಟ್ಟಿ ಮನೆಯ ಚೆಂದದ ಜಗುಲಿಯಲ್ಲಿ ಸಿಟಿ ಜನರ ಹಳ್ಳಿ ಕನಸು...! ಮೈಸೂರು ದಸರಾ ವಸ್ತುಪ್ರದರ್ಶನದ ಆವರಣದಲ್ಲಿಯೇ ಅತ್ಯಂತ ಆಕರ್ಷಣೀಯವಾಗಿ ಕಾಣುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಬೃಹತ್ ಹಳ್ಳಿ ಮನೆ ಮಾದರಿಯ ಮಳಿಗೆ, ಪ್ರವಾಸಿಗರ ನೆಚ್ಚಿನ ವಿಶ್ರಾಂತಿ ತಾಣವಲ್ಲದೆ ಹಳ್ಳಿ ಜೀವನ ಎಷ್ಟು ಚೆಂದವೆಂಬುದನ್ನು ಮನದಟ್ಟು ಮಾಡುತ್ತಿದೆ.

ಹೊರಗಿನಿಂದ ಸುವಿಶಾಲ, ಸುಂದರ ಹಳ್ಳಿ ಮನೆಯೊಳಗೆ 'ಅಮೃತ(ಮಾದರಿ) ಗ್ರಾಮ'ದ ಅನಾವರಣ ಮಾಡಲಾಗಿದ್ದು, ಹೊಲ, ಗದ್ದೆ, ಬೆಟ್ಟ-ಗುಡ್ಡಗಳ ಸಾಲು ನೋಡುಗರ ಕಣ್ಮನ ಸೆಳೆಯುತ್ತಿವೆ. ಎಲ್ಲಾ ಬಗೆಯ ಅಚ್ಚುಕಟ್ಟಾದ ಮೂಲಸೌಕರ್ಯಗಳನ್ನೊಳಗೊಂಡ ಮಾದರಿ ಗ್ರಾಮದಲ್ಲಿರುವ ಸರ್ಕಾರಿ ಶಾಲೆ, ಗ್ರಾಮ ಪಂಚಾಯಿತಿ, ಬಯಲು ರಂಗಮಂದಿರ, ಶುದ್ಧ ಕುಡಿಯುವ ನೀರಿನ ಘಟಕ, ಅಂಚೆ ಕಚೇರಿ, ಅರಿವು ಕೇಂದ್ರ, ಓವರ್‌ಹೆಡ್ ಟ್ಯಾಂಕ್, ಪ್ರಾಥಮಿಕ ಆರೋಗ್ಯ ಕೇಂದ್ರ, ನ್ಯಾಯಬೆಲೆ ಅಂಗಡಿ, ಪ್ರಾವಿಜನ್ ಸ್ಟೋರ್, ಗುಡಿ ಕೈಗಾರಿಕೆ, ಹೊಲಿಗೆ ಕೇಂದ್ರ, ಗೊಂಬೆ ತಯಾರಿಕೆ ಘಟಕ, ಮಕ್ಕಳ ಆಟದ ಮೈದಾನವೆಲ್ಲವೂ ಒಂದಕ್ಕೊಂದು ಮೀರಿಸುವಷ್ಟರ ಮಟ್ಟಿಗೆ ನಗರವಾಸಿಗಳ ಕಣ್ಣು ಕುಕ್ಕುತ್ತಿವೆ.

ಮುಂಜಾನೆ ಎದ್ದು ಹೊಲ-ಗದ್ದೆಯಲ್ಲಿ ಉಳುಮೆ ಮಾಡುವ ರೈತರ ಗುಂಪು, ಶಾಲೆ ಎದುರು ಸರತಿ ಸಾಲಿನಲ್ಲಿ ನಿಂತಿರುವ ವಿದ್ಯಾರ್ಥಿಗಳ ಹಿಂಡು, ಮಕ್ಕಳನ್ನು ಶಾಲೆಗೆ ಕರೆದುಕೊಂಡು ಬರುತ್ತಿರುವ ಪೋಷಕರು, ಹಾವಿನ ದಾರಿಯಂತೆ ಕಾಣುವ ಅಂಕು-ಡೊಂಕಾದ ಡಾಂಬರ್ ರಸ್ತೆ, ಹಸಿರು ವನಗಳು, ಹೂವಿನ ತೋಟ, ಅರಣ್ಯ ಪ್ರದೇಶ, ಬೆಳ್ಳಕ್ಕಿಗಳ ಕಲರವ ಹಳ್ಳಿಯ ವಾಸ ಎಷ್ಟೊಂದು ಚೆಂದ... ನಗರ ಬಿಟ್ಟು ಹಳ್ಳಿಯತ್ತ ಸಾಗಬೇಕು ಎಂಬ ಕನಸು ಕಾಣುವಂತೆ ಮಾಡಿದೆ. ದಸರಾ ವಸ್ತುಪ್ರದರ್ಶನ ಆವರಣದಲ್ಲಿಯೇ 100 ಅಡಿ ಉದ್ದ, 80 ಅಡಿ ಅಗಲವುಳ್ಳ ಬೃಹತ್ ಹಳ್ಳಿ ಮನೆ ಮಾದರಿಯ ಮಳಿಗೆಯ ಜಗುಲಿಯಲ್ಲಿ ಮುಸ್ಸಂಜೆ ವೇಳೆ, ತಣ್ಣನೆಯ ಗಾಳಿ ನಡುವೆ ಕುಟುಂಬಸ್ಥರೊಂದಿಗೆ ಕುಳಿತು ಹರಟೆ ಹೊಡೆಯುವ ಖುಷಿಯೇ ಬೇರೆ ಎಂಬಂತೆ ಹಳ್ಳಿ ಮನೆ ಜಗುಲಿ ಪ್ರವಾಸಿಗರ ವಿಶ್ರಾಂತಿ ಪಡೆಯುವ ತಾಣವಾಗಿ ಬದಲಾವಣೆಯಾಗಿದೆ. ಹಾಗೆಯೇ ಮಳಿಗೆ ಎದುರು ಧ್ಯಾನದಲ್ಲಿ ಕುಳಿತಿರುವ ಗಾಂಧೀಜಿ ಬೃಹತ್ ಪ್ರತಿಮೆ, ಜಮೀನಿನಲ್ಲಿ ಬೇಸಾಯ ಮಾಡುತ್ತಿರುವ ರೈತ ಮತ್ತು ಆತನ ಜೋಡೆತ್ತು ಹಾಗೂ ನೀರು ಸೇದುವ ಬಾವಿ ನೋಡುಗರ ಗಮನ ಸೆಳೆಯುತ್ತಿದೆ.

ಕಂಬಗಳೇ ಅಂದ: ಹಳ್ಳಿಯ ತೊಟ್ಟಿ ಮನೆಯ ಕಂಬಗಳನ್ನು ನೋಡುವುದೇ ಅಂದ. ಹಳ್ಳಿ ಬದುಕೆ ಆನಂದ. ಮಳಿಗೆ ನೋಡಿದಾಗಿನಿಂದ ಹಳ್ಳಿಯಲ್ಲೇ ಹುಟ್ಟಿ ಬೆಳೆದು ಈಗ ಸಿಟಿಯಲ್ಲಿ ನೆಲೆಸಿರುವ ನಮಗೆ ಮತ್ತೆ ಹಳ್ಳಿಯತ್ತ ಹೋಗಬೇಕು. ಅಲ್ಲಿಯೇ ಜೀವನ ನಡೆಸಬೇಕು ಎಂದು ಕನಸು ಬೀಳುತ್ತಿದೆ ಎಂದು ಮೈಸೂರಿನ ಕೆಬಿಎಲ್ ಬಡಾವಣೆ ನಿವಾಸಿ ದೀಪಕ್ ಹೇಳಿದರೆ, ಸರ್ಕಾರಿ ಶಾಲೆಯಲ್ಲಿ ಓದಿರುವ ನಮಗೆ ನಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಬೇಕೆನ್ನುವ ಆಸೆ. ಆದರೆ ಪ್ರತಿಷ್ಠೆ ಎಂಬ ಮಾಯಾದಾಟಕ್ಕೆ ಸಿಲುಕಿ ಖಾಸಗಿ ಶಾಲೆಗಳಿಗೆ ಸೇರಿಸಿದ್ದೇವೆ ಎಂದು ಶ್ರೀರಂಗಪಟ್ಟಣದ ಮಂಜುನಾಥ್, ಸವಿತಾ ತಿಳಿಸಿದರು.



15-20 ದಿನದಲ್ಲಿ ಸುವಿಶಾಲ ಮಳಿಗೆ ನಿರ್ಮಾಣ...

"ಅಮೃತ ಗ್ರಾಮದ ಪರಿಕಲ್ಪನೆಯಲ್ಲಿ ಸುವಿಶಾಲ ಮಳಿಗೆ ನಿರ್ಮಾಣಕ್ಕೆ ಕಲಾವಿದರು ಸೇರಿದಂತೆ 50 ಮಂದಿ ಕೆಲಸ ಮಾಡಿದ್ದು, 15-20 ದಿನಗಳ ಅವಧಿಯಲ್ಲಿ ಮುಕ್ತಾಯಗೊಳಿಸಿದ್ದೇವೆ. ಹಳ್ಳಿ ಮನೆಯಂತೆ ಕಾಣುವ ಮಳಿಗೆ ಎಲ್ಲರ ಆಕರ್ಷಣೆಯಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ನೋಡಲು ಬರುತ್ತಿದ್ದಾರೆ. -ದೇವಿಪ್ರಸಾದ್ ಶೆಟ್ಟಿ, ಕಲಾವಿದ



ಎಲ್ಲರ ಆಕರ್ಷಣೆ"

ವಸ್ತುಪ್ರದರ್ಶನದಲ್ಲಿ ಹಲವು ಮಳಿಗೆಗಳಿದ್ದರೂ ಹಳ್ಳಿ ಮನೆ ಮಳಿಗೆಯೇ ಎಲ್ಲರ ಆಕರ್ಷಣೆಯಾಗಿದೆ. ನಮ್ಮ ಮಕ್ಕಳು ಸಿಟಿಯಲ್ಲೇ ಇದ್ದರೂ ಈ ಮಳಿಗೆಯೊಳಗಿರುವ ಗ್ರಾಮವನ್ನು ತೋರಿಸಿ, ಹಳ್ಳಿ ಹೇಗಿರುತ್ತೆ ಎಂಬುದನ್ನು ತಿಳಿಸಲು ಸಹಕಾರಿಯಾಗಿದೆ. ಜಂಜಾಟದ ನಗರ ವಾಸಕ್ಕಿಂತ ನೆಮ್ಮದಿಯ ಹಳ್ಳಿ ಜೀವನವೇ ಚೆಂದ. ಉಸಿರಾಡಲು ನಿರ್ಮಲ ಗಾಳಿ ಸಿಗುವ ಹಳ್ಳಿಯಲ್ಲಿ ಒಂದಷ್ಟು ದಿನಗಳಾದರೂ ಇರಬೇಕು ಎಂದು ಮೈಸೂರಿನ ಕೆ.ಜಿ.ಕೊಪ್ಪಲು ನಿವಾಸಿ ರಘುನಂದನ್ ಹಾಗೂ ಅವರ ಪತ್ನಿ ರಚನಾ 'ಮೈಸೂರು ಮಿತ್ರ'ನೊಂದಿಗೆ ತಮ್ಮ ಬಯಕೆ ಹಂಚಿಕೊಂಡರು.

ಕನ್ನಡ ಅಂಕಿ ಬಳಸಿದ ಒಂದೇ ಕಾರಣಕ್ಕೆ ಘೋರ ರೀತಿ ಶಿಕ್ಷಿಸಲ್ಪಟ್ಟ ಕನ್ನಡ ಪ್ರೇಮಿಗೆ ನ್ಯಾಯ ಕಲ್ಪಿಸಿ...!

ಸರ್ಕಾರಕ್ಕೆ ಸಾಹಿತಿ ಬನ್ನೂರು ರಾಜು ಮನವಿ



ಮೈಸೂರು,ನ.12(ಎಸ್‌ಬಿಡಿ)- ಕನ್ನಡ ಪ್ರೇಮಿ ದೇಶಹಳ್ಳಿ ರಾಮಚಂದ್ರಾಚಾರಿ ಅವರ ವಿಚಾರದಲ್ಲಿ ಕೈಗೊಂಡಿರುವ ನಿರ್ಣಯದ ಬಗ್ಗೆ ಮಾಹಿತಿ ಕೋರಿ ಸಾಹಿತಿ ಬನ್ನೂರು ಕೆ.ರಾಜು, ಮೈಸೂರು ಜಿಲ್ಲಾಧಿಕಾರಿಗಳ ಮುಖೇನ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.


ಮಂಡ್ಯ ಜಿಲ್ಲೆ, ಮದ್ದೂರು ತಾಲೂಕು ದೇಶಹಳ್ಳಿಯ ರಾಮಚಂದ್ರಾಚಾರಿ ಅವರು ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಹಾಸನ ವಿಭಾಗದಲ್ಲಿ 1984ರಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಕಚೇರಿಯ ಎಲ್ಲಾ ಹಂತಗಳಲ್ಲೂ ಕನ್ನಡದಲ್ಲಿ ವ್ಯವಹಾರ ನಡೆಸುವುದರ ಜೊತೆಗೆ ಕನ್ನಡ ಅಂಕಿಗಳನ್ನು ಬಳಸುತ್ತಿದ್ದರೆಂಬ ಕಾರಣಕ್ಕೆ ಅವರನ್ನು ಅಮಾನತು ಮಾಡಲಾಯಿತು. ಅಲ್ಲದೆ 1993ರಲ್ಲಿ ಸೇವೆಯಿಂದ ವಜಾ ಮಾಡಿದ್ದಲ್ಲದೆ 2005ರಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಯಿತು.

2017ರಲ್ಲಿ ರಾಮಚಂದ್ರಾಚಾರಿ ಅವರು ಪ್ರಕರಣದಿಂದ ಮುಕ್ತರಾದ ಹಿನ್ನೆಲೆಯಲ್ಲಿ ಇದು ಮೇಲ್ಮನವಿಗೆ ಯೋಗ್ಯವಲ್ಲದ ಪ್ರಕರಣ ಎಂದು 2018ರಲ್ಲಿ ಸರ್ಕಾರ ಅಭಿಪ್ರಾಯಪಟ್ಟಿದೆ. ಆದರೆ ನಂತರದಲ್ಲಿ ಕೈಗೊಂಡಿರುವ ನಿರ್ಧಾರ ಹಾಗೂ ಕ್ರಮದ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ಕನ್ನಡ ಅಂಕಿ ಬಳಸಿದ್ದರಿಂದ ಕೆಲಸ ಕಳೆದು ಕೊಂಡು, ಕ್ರಿಮಿನಲ್ ಮೊಕದ್ದಮೆಗೂ ತುತ್ತಾಗಿ ಸುಮಾರು 39 ವರ್ಷಗಳಿಂದ ಅತೀವವಾಗಿ ನೊಂದಿರುವ ಕನ್ನಡ ಪ್ರೇಮಿ ರಾಮಚಂದ್ರಾಚಾರಿ ಅವರಿಗೆ ಈಗಲಾದರೂ ನ್ಯಾಯ ಕಲ್ಪಿಸಬೇಕು. ಈ ಸಂಬಂಧ ಸರ್ಕಾರದ ನಿಲುವನ್ನು ಸ್ಪಷ್ಟವಾಗಿ ತಿಳಿಸಬೇಕು ಎಂದು ಆಗ್ರಹಿಸಿದ್ದಾರೆ. ಕನ್ನಡದ ಅಭಿವೃದ್ಧಿಗಾಗಿ ಸರ್ಕಾರ ಕೋಟ್ಯಂತರ ರೂ. ಖರ್ಚು ಮಾಡುತ್ತಿದೆ. ದಯವಿಟ್ಟು ಈ ಕನ್ನಡ ಪ್ರೇಮಿಗೆ ನೆರವಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಶಾಲಾ ಶಿಕ್ಷಣ ಸಮಿತಿ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಅವರಿಗೆ ಜಿಲ್ಲಾಧಿಕಾರಿಗಳ ಕಚೇರಿ ಮೂಲಕ ಬನ್ನೂರು ರಾಜು ಮನವಿ ಸಲ್ಲಿಸಿದ್ದಾರೆ.



ಮೈಸೂರು ದಸರಾ ವಸ್ತುಪ್ರದರ್ಶನದ ಪಿ.ಕಾಳಿಂಗರಾವ್ ಗಾನಮಂಟಪದಲ್ಲಿ ವೀರ ವನಿತೆ ಒನಕೆ ಓಬವ್ವ ಜಯಂತಿ ಹಾಗೂ ರಾಷ್ಟ್ರಕವಿ ಕುವೆಂಪು ಸ್ಮರಣಾರ್ಥ 'ಕನ್ನಡವೇ ಸತ್ಯ' ಸಂಗೀತ ಕಾರ್ಯಕ್ರಮ ನೀಡಿದ ಕಲಾವಿದರಿಗೆ ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ ರಾಜೇಶ್ ಜಿ.ಗೌಡ ಅಭಿನಂದನಾ ಪತ್ರ ನೀಡಿ ಗೌರವಿಸಿದರು. ಕಲಾವಿದರಾದ ರಶ್ಮಿ, ರಾಜೇಶ್, ಪ್ರಿಯ, ಚಿನ್ಮಯಿ, ನಿರೂಪಕ ಅಜಯ್ ಶಾಸ್ತ್ರಿ, ಕೀಬೋರ್ಡ್ ವಾದಕ ಗಣೇಶ್ ಭಟ್, ಮ್ಯಾಂಡೋಲಿನ್ ವಿಶ್ವನಾಥ್, ರಿದಂ ಪ್ಯಾಡ್ ಜಗದೀಶ್, ತಬಲಾ ರವಿಕಿರಣ್ ಮತ್ತಿತರರು ಉಪಸ್ಥಿತರಿದ್ದರು.

ಮಕ್ಕಳಿಗೆ ವಿಶೇಷ ಕಲಿಕೆಯ 'ಹೃದಯ'ವಂತಿಕೆ



ಮೈಸೂರು,ನ.12(ಎಸ್‌ಬಿಡಿ)- ವಿಜ್ಞಾನ ವಿಷಯಗಳನ್ನು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರೆ ಮಕ್ಕಳು ಸುಲಭವಾಗಿ ಗ್ರಹಿಸುತ್ತಾರೆ. ಈ ನಿಟ್ಟಿನಲ್ಲಿ ಚಿತ್ರಕಲಾ ಶಿಕ್ಷಕರೊಬ್ಬರು ಮಾನವ ಹೃದಯದ ಬೃಹತ್ ಆಕೃತಿ ನಿರ್ಮಿಸುವ ಮೂಲಕ ಗಮನ ಸೆಳೆದಿದ್ದಾರೆ. ಮೈಸೂರಿನ ಹೆಬ್ಬಾಳಿನಲ್ಲಿರುವ ಶ್ರೀ ಪರಮಹಂಸ ವಿದ್ಯಾನಿಕೇತನ ಶಾಲೆಯಲ್ಲಿ ನಡೆದ ವಿಜ್ಞಾನ ವಸ್ತುಪ್ರದರ್ಶನದಲ್ಲಿ ಬೃಹತ್ ಹೃದಯದ ಆಕೃತಿ ಎಲ್ಲರನ್ನೂ ಆಕರ್ಷಿಸಿತು. ಶಾಲೆಯ ಚಿತ್ರಕಲಾ ಶಿಕ್ಷಕ ಎಂ.ನಾಗರಾಜು ಅವರು ಥರ್ಮಾಕೋಲ್ ಬಳಸಿಕೊಂಡು 5 ಅಡಿ ಎತ್ತರ ಹಾಗೂ 3 ಅಡಿ ಅಗಲದ ಹೃದಯದ ಆಕೃತಿ ನಿರ್ಮಿಸಿ, ಪ್ರದರ್ಶನಕ್ಕಿಟ್ಟಿದ್ದರು. ಪೈಪ್‌ಗಳನ್ನು ಬಳಸಿ ನರವ್ಯೂಹವನ್ನೂ ರಚಿಸಿದ್ದರು. 2 ದಿನಗಳ ಕಾಲ ಶ್ರಮಿಸಿ ನಿರ್ಮಿಸಿದ್ದ ಈ ಆಕೃತಿ ಎಲ್ಲರ ಪ್ರಶಂಸೆಗೆ ಪಾತ್ರವಾಯಿತು.

ಈ ಬೃಹತ್ ಆಕೃತಿ ಮೂಲಕ ಶಾಲೆಯ ಮಕ್ಕಳು ಹೃದಯದ ಕಾರ್ಯವನ್ನು ವಿವರಿಸಿದರು. ಇದರೊಂದಿಗೆ ಮಕ್ಕಳು ತಯಾರಿಸಿದ್ದ ಹಲವು ಮಾದರಿಗಳು ವಸ್ತು ಪ್ರದರ್ಶನದಲ್ಲಿ ಗಮನ ಸೆಳೆದವು. ಶಾಲೆ ಕಾರ್ಯದರ್ಶಿ ತೇಜವತಿ, ಮುಖ್ಯೋಪಾಧ್ಯಾಯಿನಿ ಭಾಗ್ಯ, ಚಿತ್ರಕಲಾ ಶಿಕ್ಷಕ ಎಂ.ನಾಗರಾಜು ಇನ್ನಿತರ ಶಿಕ್ಷಕರು ಉಪಸ್ಥಿತರಿದ್ದರು.

ಪಟಾಕಿ ತ್ಯಜಿಸಿ ಹಣತೆ ಹಚ್ಚಿ


ಮುಡಾ ಮಾಜಿ ಸದಸ್ಯ ನವೀನ್‌ಕುಮಾರ್ ಮನವಿ



ಮೈಸೂರು, ನ.12-ಕಾಂಗ್ರೆಸ್ ಕಾರ್ಯಕರ್ತರಿಂದ ವಾರ್ಡ್ ನಂ.23ರಲ್ಲಿ ಶಾಸಕ ಕೆ.ಹರೀಶ್‌ಗೌಡ ಮಾರ್ಗದರ್ಶನದಲ್ಲಿ ಸುಬ್ಬರಾಯನಕೆರೆ ಸುತ್ತಮುತ್ತ ಮನೆ ಮನೆಗೂ ಹಣತೆ ವಿತರಿಸಿ 'ದೀಪದಿಂದ ದೀಪಾವಳಿ' ಅರಿವು ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಈ ವೇಳೆ ಮಾತನಾಡಿದ ಮುಡಾ ಮಾಜಿ ಸದಸ್ಯ ನವೀನ್‌ಕುಮಾರ್, ಪಟಾಕಿ ವ್ಯಾಪಾರಿಗಳನ್ನು ಗಮನದಲ್ಲಿಟ್ಟುಕೊಂಡು ಸರ್ವೋಚ್ಚ ನ್ಯಾಯಾಲಯವು ಕೆಲಕಾಲ ಮಾತ್ರ ಪಟಾಕಿ ಸಿಡಿಸುವಂತೆ ಆದೇಶಿಸಿದೆ. ದೀಪಾವಳಿ ಎಂದರೆ ಪಟಾಕಿ ಸಿಡಿಸುವುದು ಎಂಬುದು ಬಹುತೇಕರ ತಿಳುವಳಿಕೆ. ಆದರೆ ದೀಪಾವಳಿ ಎಂದರೆ ದೀಪಗಳ ಹಬ್ಬ, ಇದನ್ನು ಅರಿಯದೇ ಜನ ಹಣ ಖರ್ಚು ಮಾಡಿ ಪಟಾಕಿ ಸಿಡಿಸಿ ಕಣ್ಣು-ಕಿವಿ, ಕೈ-ಕಾಲುಗಳಿಗೆ ಗಾಯ ಮಾಡಿಕೊಳ್ಳುತ್ತಿದ್ದಾರೆ, ಜೊತೆಗೆ ಶಬ್ದಮಾಲಿನ್ಯ, ವಾಯುಮಾಲಿನ್ಯಕ್ಕೆ ಕಾರಣಕರ್ತರಾಗುತ್ತಿದ್ದಾರೆ, ನಾವು ಆಚರಿಸುವ ಹಬ್ಬಗಳು ನಮ್ಮೆಲ್ಲರ ದೇಹ ಮತ್ತು ಮನಸ್ಸಿಗೆ ಯಾವುದೇ ಹಾನಿ ಉಂಟು ಮಾಡದಂತೆ ಶಾಂತಿ, ನೆಮ್ಮದಿ, ಸಂತೋಷ ನೀಡಬೇಕೇ ಹೊರತು ನೋವು ನೀಡುವಂತಾಗಬಾರದು. ಹಾಗಾಗಿ ಪರಿಸರ ಸ್ನೇಹಿ ದೀಪಗಳಿಂದ ಹಬ್ಬ ಆಚರಿಸೋಣ ಎಂಬ ಸಂದೇಶ ನೀಡಿದರು. ಈ ವೇಳೆ ಮಂಜುನಾಥ್, ಮುಖಂಡರಾದ ಮಹಾದೇವ್, ರವಿಚಂದ್ರ ಲೋಕೇಶ್, ನಂಜುಂಡಿ, ಮಂಗಳ, ಮಂಜುಳಾ, ಶಾಂತಮ್ಮ, ಸುಧೀರ್ ಇನ್ನಿತರರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.11.2023 ಸೋಮವಾರ, ಮಳೆ ನಕ್ಷತ್ರ: ವಿಶಾಖ, 07.11.2023 ರಿಂದ 19.11.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಬೆಳಗ್ಗೆಯಿಂದ ತೈಲಾಭಿಷೇಕ, ಪಂಚಾಮೃತ ಅಭಿಷೇಕ, ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಸಂಜೆ 7 ಗಂಟೆಗೆ ಉತ್ಸವ, ಮಹಾ ಮಂಗಳಾರತಿ, ಮಹಾ ಪ್ರಸಾದ ವಿನಿಯೋಗ, ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ.

■ **ಶ್ರೀ ಮಲೈ ಮಹದೇಶ್ವರ ಸೇವಾ ಸಮಿತಿ:** ಶ್ರೀ ಮಲೈ ಮಹದೇಶ್ವರ ಪೂಜಾ ಮಹೋತ್ಸವ ಬೆಳಗ್ಗೆಯಿಂದ ಹಾಗೂ ಕೊಂಡೋತ್ಸವ (ಸಂಜೆ 7 ಗಂಟೆಗೆ), ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ, ಸ್ಥಳ: ದೇವಸ್ಥಾನದ ಆವರಣ, 5ನೇ ಕ್ರಾಸ್, 4ನೇ ಮೇನ್, ಜಯನಗರ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ಶ್ರೀ ಮುತ್ತುಸ್ವಾಮಿ ದೀಕ್ಷಿತರ ದಿನಾಚರಣೆ, ಬೆಳಗ್ಗೆ 9.30ರಿಂದ ಸಂಗೀತ ವಿದ್ವಾಂಸರು, ವಿದುಷಿಯರು, ವಿದ್ಯಾರ್ಥಿಗಳಿಂದ ದೀಕ್ಷಿತರ ಕೃತಿಗಳ ಗಾಯನ ನಮನ, 12.30ರಿಂದ ವಿದ್ವಾನ್ ಡಾ.ಸುಕನ್ಯಾ ಪ್ರಭಾಕರ್ ಮತ್ತು ಶಿಷ್ಯರಿಂದ ರೂಪಕ ಶ್ರೀ ಮುತ್ತುಸ್ವಾಮಿ ದೀಕ್ಷಿತರ 'ಪಂಚಲಿಂಗ ಕೃತಿಗುಚ್ಛ'-ಒಂದು ಪ್ರದಕ್ಷಿಣೆ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ.ಮೊಹಲ್ಲಾ.

■ **ಕುಂಬಾರಕೊಪ್ಪಲು ಅಭ್ಯುದಯ ಸಂಘ:** ದೀಪಾವಳಿ ಹಬ್ಬದ ಪ್ರಯುಕ್ತ ಶ್ರೀ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ, ಕಬಡ್ಡಿ ಪಂದ್ಯಾವಳಿಗಳು, ಸ್ಥಳ: ಶ್ರೀ ಕೆಂಪೇಗೌಡ ಕ್ರೀಡಾಂಗಣ, ಬೆಳಗ್ಗೆಯಿಂದ.

■ **ಭರತ ಪ್ರಕೃತಿ ಚಿಕಿತ್ಸಾ, ಸಸ್ಯೌಷಧ ಮತ್ತು ಯೋಗ ಶಿಕ್ಷಣ ಸಂಶೋಧನಾ ಸಂಸ್ಥೆ, ಸಾಯನ್ ಹರ್ಬಲ್ ಕೇರ್, ಗೌಂಡಿಯಾ, ಮಹಾರಾಷ್ಟ್ರ:** ಉಚಿತ ಆರೋಗ್ಯ ತಪಾಸಣೆ ಶಿಬಿರ, ಶುದ್ಧ ಸಸ್ಯ ಪೂರಕ ಪ್ರತ್ಯಾಹಾರ ಚಿಕಿತ್ಸೆ, ಸ್ಥಳ: ಸಂಸ್ಥೆಯ ಆವರಣ, ಕೆ.ಜಿ.ಕೊಪ್ಪಲು-ಜಯನಗರ ಜಂಕ್ಷನ್, ಬೆಳಗ್ಗೆ 11.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸೈಬರ್ ಮಿತ್ರ-ಸೈಬರ್ ಸುರಕ್ಷೆ: ವಾರದ ಮಾತು, ಪ್ರಸ್ತುತಿ-ಸತೀಶ್ ವಿ.ಪ್ರಾಯೋಜಕರು cybermitra.in ಮೈಸೂರು, 6.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ-ಜಿ.ಕೆ.ರವೀಂದ್ರ ಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾಣ-ಪ್ರಾಯೋಜಿತ ಕಾರ್ಯಕ್ರಮ, 6.50 ರೈತರಿಗೆ ಸಲಹೆ, 9.40 ನಮ್ಮ ಆರೋಗ್ಯ "ಅಭ್ಯಂಗದ ಮಹತ್ವ" ಕುರಿತು ಡಾ.ವೆಂಕಟ ಕೃಷ್ಣ ಕೂಡಲಿ ವಿ. ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ-ಕಥೆ ಕೇಳು ಪುಟ್ಟಾ-ಬಲಿ ಚಕ್ರವರ್ತಿ ಕಥೆ ಹೇಳುತ್ತಾರೆ ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ-ಮಳವಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ. **ಮಧ್ಯಾಹ್ನ:** 12.30 ದೇವರನಾಮ-ರೂಪದ್ ಮತ್ತು ದೀಪ, ಪರಮೇಶ್ವರ ಹೆಗಡೆ, 12.45 ಜನಪದ ಸಂಗೀತ, 1.30 ಭಾರತ ಹಾಗೂ ನೆದರ್‌ಲ್ಯಾಂಡ್ ಆಫ್ರಿಕಾ ತಂಡಗಳ ನಡುವೆ ಬೆಂಗಳೂರಿನಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ

ಕೊಡಗು ಜಿಲ್ಲೆಯ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ

●ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಭರವಸೆ ●ಜನಪ್ರತಿನಿಧಿಗೆ ಜನಸಾಮಾನ್ಯರು ಸಹಕಾರ ನೀಡಿದಾಗ ಮಾತ್ರ ಅಭಿವೃದ್ಧಿ ಸಾಧ್ಯ ●ಕೊಡಗಿನ ಶ್ರೇಯೋಭಿವೃದ್ಧಿಗೆ ನಮ್ಮ ಪೂರ್ವಜರ ಕೊಡುಗೆ ಅಪಾರ ●ಸರ್ಕಾರವನ್ನು ಅವಲಂಬಿಸದೇ ಸ್ವಾವಲಂಬಿ ಬದುಕು ಕಟ್ಟಿಕೊಂಡ ಹಿರಿಮೆ ಕೊಡವರಿಗಿದೆ ●ಕೊಡವ ಸಮಾಜ ಕಲ್ಚರಲ್ ಅಂಡ್ ಸ್ಪೋರ್ಟ್ಸ್ ಕ್ಲಬ್‌ನಿಂದ ಸನ್ಮಾನ ಸ್ವೀಕಾರ





ಮೈಸೂರಿನ ವಿಜಯನಗರದ ಮೊದಲ ಹಂತದಲ್ಲಿರುವ ಕೊಡವ ಸಮಾಜದ ಗುರುಮನೆ ಸಭಾಂಗಣದಲ್ಲಿ ಕೊಡವ ಸಮಾಜ ಕಲ್ಚರಲ್ ಅಂಡ್ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಸಾಂಸ್ಕೃತಿಕ ದಿನ ಹಾಗೂ ಸನ್ಮಾನ ಸಮಾರಂಭದಲ್ಲಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕಲ್ಯಾಟಂಡ ಬಿ.ಗಣಪತಿ ಮತ್ತು ವಿರಾಜಪೇಟೆ ಕ್ಷೇತ್ರದ ಶಾಸಕರೂ ಆದ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಕೊಡವ ಸಮಾಜದ ಉಪಾಧ್ಯಕ್ಷ ಎಂ.ಪಿ.ನಾಣಯ್ಯ, ಕೊಡಗು ಸಹಕಾರ ಸಂಘದ ಅಧ್ಯಕ್ಷರಾದ ನಂಜಮ್ಮ, ಕ್ಲಬ್‌ನ ಮಾಜಿ ಅಧ್ಯಕ್ಷ ಎಂ.ಎಂ.ಕುಟ್ಟಪ್ಪ, ಕೊಡಗು ಕಾವೇರಿ ಮಹಿಳಾ ಸಂಘದ ಅಧ್ಯಕ್ಷರಾದ ಲವ್ಲಿ ಅಪ್ಪಯ್ಯ, ಕಾವೇರಿ ವಿದ್ಯಾಸಂಸ್ಥೆ ಅಧ್ಯಕ್ಷ ನವೀನ್ ಚಂದ್ರ, ಕ್ಲಬ್‌ನ ಕಮಿಟಿ ಮೆಂಬರ್ ಎ.ಎ.ಪೆಮ್ಮಯ್ಯ, ಉಪಾಧ್ಯಕ್ಷ ಎಂ.ಕೆ.ಪ್ರಕಾಶ್, ಅಧ್ಯಕ್ಷ ಕೆ.ಡಿ.ಮುತ್ತಪ್ಪ, ಕಮಿಟಿ ಮೆಂಬರ್ ಎಂ.ಸಿ.ಕವೀನ್ ಕುಶಾಲಪ್ಪ, ಮಾಜಿ ಅಧ್ಯಕ್ಷ ಪಿ.ಕೆ.ಸೋಮಯ್ಯ, ಗೌರವ ಕಾರ್ಯದರ್ಶಿ ಎಂ.ಎಸ್.ಬೋಪಣ್ಣ, ಶ್ರೀಭಗವತಿ ಕೊಡವ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಪಿ.ಸೋಮಣ್ಣ, ಕ್ಲಬ್‌ನ ಮಾಜಿ ಅಧ್ಯಕ್ಷ ಎಂ.ಎಂ.ಕರುಂಬಯ್ಯ, ಕಮಿಟಿ ಮೆಂಬರ್ ಎಂ.ಟಿ.ರಮೇಶ್ ಪೊಣಚ್ಚ, ಪಾಲಿಕೆ ಸದಸ್ಯ ಎಂ.ಯು.ಸುಬ್ಬಯ್ಯ, ಕ್ಲಬ್ ಖಜಾಂಚಿ ಎ.ಎಂ.ಪೊನ್ನಣ್ಣ, ಕೊಡವ ಸಮಾಜ ಮೈಸೂರು ಅಧ್ಯಕ್ಷ ಪಿ.ಎ.ಗಣಪತಿ, ಕ್ಲಬ್ ಕಮಿಟಿ ಮೆಂಬರ್‌ಗಳಾದ ಕೆ.ಪ್ರದೀಪ್, ಎ.ಪೊನ್ನಣ್ಣ, ಜಂಟಿ ಕಾರ್ಯದರ್ಶಿ ಎನ್.ನೀರನ್ ಉತ್ತಪ್ಪ, ಕೊಡವ ಸಮಾಜದ ಮಾಜಿ ಅಧ್ಯಕ್ಷ ಪಿ.ಎಸ್.ಗಣಪತಿ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅಭಿಮಾನಿಗಳ ಬಳಗದ ಅಧ್ಯಕ್ಷ ಎನ್.ಎಂ.ತಿಮ್ಮಯ್ಯ (ಎಡದಿಂದ) ಅವರನ್ನು ಚಿತ್ರದಲ್ಲಿ ಕಾಣಬಹುದು. ಬಲಚಿತ್ರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ದೃಶ್ಯ ಕಾಣಬಹುದು.

ಮೈಸೂರು,ನ.12(ಪಿಎಂ)–ಕೊಡಗು ಜಿಲ್ಲೆಯ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿ ಕೆಲಸ ಮಾಡುತ್ತೇನೆ ಎಂದು ಕೊಡಗಿನ ವಿರಾಜಪೇಟೆ ಕ್ಷೇತ್ರದ ಶಾಸಕರೂ ಆದ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ತಿಳಿಸಿದರು.

ಮೈಸೂರಿನ ವಿಜಯನಗರದ ಮೊದಲ ಹಂತದಲ್ಲಿರುವ ಕೊಡವ ಸಮಾಜ ಮೈಸೂರು ಗುರುಮನೆ ಸಭಾಂಗಣದಲ್ಲಿ ದಿ ಕೊಡವ ಸಮಾಜ ಕಲ್ಚರಲ್ ಅಂಡ್ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಸಾಂಸ್ಕೃತಿಕ ದಿನ ಹಾಗೂ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕಲ್ಯಾಟಂಡ ಬಿ. ಗಣಪತಿ ಮತ್ತು ತಮಗೆ (ಎ.ಎಸ್.ಪೊನ್ನಣ್ಣ) ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ನನ್ನ ಸ್ವ ಕ್ಷೇತ್ರದೊಂದಿಗೆ ಇಡೀ ಕೊಡಗು ಜಿಲ್ಲೆಯ ಅಭಿವೃದ್ಧಿಗೆ ಹೆಚ್ಚಿನ ಜವಾಬ್ದಾರಿ ತೆಗೆದುಕೊಳ್ಳುತ್ತೇನೆ. ಶಾಸಕರಾಗಲಿ, ಮಂತ್ರಿಯಾಗಲಿ ಯಾವುದೇ ಅಭಿವೃದ್ಧಿ ಸಾಧಿಸಲು ಅಥವಾ ಸಮಸ್ಯೆ ಪರಿಹರಿಸಲು ಕೇವಲ ಒಬ್ಬರಿಂದ ಸಾಧ್ಯವಿಲ್ಲ. ಅದಕ್ಕೆ ಎಲ್ಲರ ಸಂಘಟಿತ ಪ್ರಯತ್ನ ಮುಖ್ಯವಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳ ಜೊತೆಗೆ ಜನಬೆಂಬಲ ಇದ್ದರೆ ಮಾತ್ರವೇ ಅಭಿವೃದ್ಧಿ ಸಾಧಿಸಲು ಸಾಧ್ಯ. ಹಾಗೆಯೇ ಜನಬೆಂಬಲ ಇದ್ದರೆ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳಬಹುದು. ಅಭಿವೃದ್ಧಿಗೆ ಆದ್ಯತೆ ನೀಡಿ ಕೆಲಸ ಮಾಡಲು ನಾನು ಸದಾ ಸಿದ್ಧನಿದ್ದು, ಅದಕ್ಕಾಗಿ ನಿಮ್ಮೆಲ್ಲರ ಪ್ರೀತಿ–ವಿಶ್ವಾಸ ದೊಂದಿಗೆ ಸಹಕಾರ ಬಯಸುತ್ತೇನೆ ಎಂದು ಹೇಳಿದರು.

ಕೊಡಗು ಜಿಲ್ಲೆಯಲ್ಲಿ ಶೇ.90ರಷ್ಟು ಸರ್ಕಾರಿ ಕಟ್ಟಡಗಳು ಹಾಗೂ ಕಟ್ಟಡ ನಿರ್ಮಾಣಕ್ಕೆ ನಿವೇಶನ ಕಲ್ಪಿಸಿರುವುದು ನಮ್ಮ ಪೂರ್ವಜರು. ಕೊಡವರು ತಮ್ಮ ಶ್ರೇಯೋಭಿವೃದ್ಧಿಗೆ ಸರ್ಕಾರವನ್ನು ಅವಲಂಬಿತರಾಗಿರಲಿಲ್ಲ. ಹಿಂದಿನಿಂದಲೂ ಸ್ವಾವಲಂಬಿ ಬದುಕು ಕಟ್ಟಿಕೊಂಡ ಹಿರಿಮೆ ಕೊಡವರಿಗೆ ಇದೆ. ಅದೇ ರೀತಿಯಲ್ಲಿ ಕೊಡವರು ಮುಂದುವರೆಯಬೇಕು ಎಂದು ಬಯಸುತ್ತೇನೆ ಎಂದು ತಿಳಿಸಿದರು.

ಕೊಡವ ಸಂಘ–ಸಂಸ್ಥೆಗಳು ಆಹ್ವಾನಿಸುವ ಕಾರ್ಯಕ್ರಮಗಳಲ್ಲಿ ತಪ್ಪದೇ ಪಾಲ್ಗೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಕಾರಣ ಈ ಸಂಘಟಕರೊಂದಿಗೆ ರಾಜಕೀಯೇತರ ಸಂಬಂಧ ಬೆಳೆಸಬೇಕೆಂಬ ಉದ್ದೇಶದಿಂದ ಹೋಗುತ್ತಿದ್ದೇನೆ. ನನ್ನ ಚುನಾವಣೆಯಲ್ಲಿ ಕೊಡಗಿನ ಜನತೆ ಪಕ್ಷ ಭೇದ ಮರೆತು ನನಗೆ ಬೆಂಬಲ ನೀಡಿದ್ದಾರೆ. ನಮ್ಮ ಪಕ್ಷದವರಲ್ಲದೇ ಹೋದರು ಎಷ್ಟೋ ಮಂದಿ ನನ್ನ ಮೇಲಿನ ಅಭಿಮಾನಕ್ಕಾಗಿ ನನ್ನ ಪರವಾಗಿ ಚುನಾವಣೆಯಲ್ಲಿ ಬೆಂಬಲಿಸಿದ್ದಾರೆ. ಪಕ್ಷ ರಾಜಕೀಯ ಬದಿಗಿಟ್ಟು ನನ್ನ ಕ್ಷೇತ್ರದಲ್ಲಿರುವ ಎಲ್ಲಾ ಜನಾಂಗ ದವರು ಪ್ರೀತಿ–ವಿಶ್ವಾಸದಿಂದ ಗೆಲ್ಲಿಸಿದ್ದಾರೆ. ಪ್ರೀತಿ–ವಿಶ್ವಾಸ ಶಾಶ್ವತವೇ ಹೊರತು ರಾಜಕೀಯ ಶಾಶ್ವತವಲ್ಲ ಎಂದರು. ನಿಮ್ಮೊಂದಿಗೆ ನಾನೂ ಇದ್ದೇನೆ ಎಂಬ ಸಂದೇಶ ನೀಡಲು ಇಲ್ಲಿಗೆ ಬಂದಿದ್ದೇನೆ. ಆತ್ಮೀಯವಾಗಿ ಸನ್ಮಾನಿಸಿದ್ದಕ್ಕೆ ಧನ್ಯವಾದ ಹೇಳಬಯಸುತ್ತೇನೆ. ಚುನಾವಣೆ ಪೂರ್ವದಲ್ಲಿ ಇಲ್ಲಿಗೆ ಬಂದಾಗಲೂ ಕೊಡಗಿನ ಸಮಸ್ಯೆಗಳ ಬಗ್ಗೆ ಮಾತನಾಡಿದ್ದೆ. ಈಗಲೂ ಆ ಎಲ್ಲಾ ಸಮಸ್ಯೆಗಳ ಪರಿಹರಿಸುವ ಬಗ್ಗೆ ನನ್ನ ಗಮನ ಇದ್ದೇ ಇದೆ ಎಂದರು.

'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ ಅವರನ್ನೂ ಇದೇ ವೇಳೆ ಕ್ಲಬ್‌ನಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು. ಇದಕ್ಕೂ ಮುನ್ನ ಕ್ಲಬ್‌ನ ಸದಸ್ಯರ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಬೆಳಗಿನ ಅವಧಿಯಲ್ಲಿ ಕ್ಲಬ್‌ನ 19ನೇ ವಾರ್ಷಿಕ ಸರ್ವ ಸದಸ್ಯರ ಸಭೆ ನಡೆಯಿತು. ಅಕಾಡೆಮಿ ನ್ಯೂಸ್ ಪೇಪರ್ಸ್ ಪ್ರೈವೇಟ್ ಲಿಮಿಟೆಡ್‌ನ ಕಾರ್ಯಕಾರಿ ನಿರ್ದೇಶಕರಾದ ಶ್ರೀಮತಿ ರ್‍ಯಾಲಿ ಗಣಪತಿ, ವಿಶ್ರಾಂತ ಕುಲಪತಿ ಪ್ರೊ.ಕೆ.ಸಿ.ಬೆಳ್ಳಿಯಪ್ಪ ಮತ್ತಿತರರು ಸನ್ಮಾನ ಸಮಾರಂಭದಲ್ಲಿ ಹಾಜರಿದ್ದರು.

ಕೇರಳದಲ್ಲಿ ವಿಶ್ರಾಂತಿ ಧಾಮ ಉದ್ಘಾಟನೆ



ಕೇರಳದ ಮುತ್ತುಂಗದಲ್ಲಿ ಶಬರಿಮಲೆ ಯಾತ್ರಿಗಳ ವಿಶ್ರಾಂತಿಧಾಮವನ್ನು ಮೈಸೂರಿನ ಕೃಷ್ಣ ರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಿದರು. ವೈನಾಡ್ ಶಾಸಕ ಬಾಲಕೃಷ್ಣನ್, ಗುಂಡ್ಲುಪೇಟೆ ಶಾಸಕ ಗಣೇಶ್ ಪ್ರಸಾದ್, ಸ್ಥಳೀಯ ಜಿಲ್ಲಾ ಪಂಚಾಯಿತಿ ಸದಸ್ಯರು ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.



ಬಿಜೆಪಿ ನೂತನ ರಾಜ್ಯಾಧ್ಯಕ್ಷರಾಗಿ ನೇಮಕಗೊಂಡ ಬಿ.ವೈ. ವಿಜಯೇಂದ್ರ ಅವರನ್ನು ಬೆಂಗಳೂರಿನ ಧವಳಗಿರಿ ನಿವಾಸದಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ನಿಕಟಪೂರ್ವ ಅಧ್ಯಕ್ಷ ಅರುಣ್‌ಕುಮಾರ್ ಗೌಡ ಅಭಿನಂದಿಸಿದರು. ಈ ವೇಳೆ ಜಿಲ್ಲಾ ಕಾರ್ಯದರ್ಶಿ ಭಾಗ್ಯಶ್ರೀ ಭಟ್, ನಿಕಟಪೂರ್ವ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಂದೀಶ್, ಕ್ಷೇತ್ರದ ಪ್ರಧಾನ ಕಾರ್ಯದರ್ಶಿಗಳಾದ ಪೈ. ಟಿ.ರವಿ, ಈರಪ್ಪ, ಗೋಪಾಲ್ ಗಣೇಶ್, ವಿಜಯ್ ಕುಮಾರ್, ಮೋಹನ್ ಕುಮಾರ್, ಶಮೀರ್ ಇನ್ನಿತರರು ಉಪಸ್ಥಿತರಿದ್ದರು



ಬಿಜೆಪಿ ನೂತನ ರಾಜ್ಯಾಧ್ಯಕ್ಷರಾಗಿ ನೇಮಕಗೊಂಡ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪುತ್ರ ಬಿ.ವೈ. ವಿಜಯೇಂದ್ರ ಅವರನ್ನು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಬೆಂಗಳೂರಿನ ಧವಳಗಿರಿ ನಿವಾಸದಲ್ಲಿ ಭೇಟಿ ಮಾಡಿ ಹೂಗುಚ್ಛ ನೀಡಿ ಅಭಿನಂದಿಸಿದರು.

ಒಂದೇ ಕುಟುಂಬದ ನಾಲ್ವರ ಬರ್ಬರ ಹತ್ಯೆ

ಉಡುಪಿ, ನ.12–ಚಾಕುವಿನಿಂದ ಇರಿದು ಒಂದೇ ಕುಟುಂಬದ ನಾಲ್ವರ ಬರ್ಬರ ಹತ್ಯೆ ನಡೆದಿರುವಂತಹ ಘಟನೆ ಉಡುಪಿ ತಾಲೂಕಿನ ನೇಜಾರು ಸಮೀಪದ ತೃಪ್ತಿನಗರದಲ್ಲಿ ನಡೆದಿದೆ. ತಾಯಿ, ಮೂವರು ಮಕ್ಕಳನ್ನು ಕೊಲೆಗೈದು ದುಷ್ಕರ್ಮಿ ಪರಾರಿ ಆಗಿದ್ದಾನೆ.

ಹಸೀನಾ(48), ಮಕ್ಕಳಾದ ಅಫ್ನಾನ್ (23), ಅಯ್ನಾಜ್(20), ಅಸೀಮ್(14) ಕೊಲೆಯಾದವರು. ಮೃತ ಹಸೀನಾ ಅವರ ಅತ್ತೆಗೆ ಗಂಭೀರ ಗಾಯಗಳಾಗಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ.

ನಾಲ್ವರನ್ನು ಚೂರಿಯಿಂದ ಇರಿದು ಕೊಲೆ ಮಾಡಲಾಗಿದೆ. ಯಾವ ಉದ್ದೇಶಕ್ಕೆ ಕೊಲೆಯಾಗಿದೆ ಎಂಬುದು ತನಿಖೆಯಿಂದ ತಿಳಿಯಬೇಕಿದೆ. ಮನೆಯಲ್ಲಿ ಯಾವ ವಸ್ತುಗಳು ಕಳವು ನಡೆದಿಲ್ಲ. ಎಲ್ಲ ಆಯಾಮಗಳಿಂದ ತನಿಖೆ ನಡೆಸುತ್ತಿದ್ದು, ಶೀಘ್ರದಲ್ಲೇ ಆರೋಪಿಗಳನ್ನು ಬಂಧಿಸಲಾಗುವುದು ಎಂದು ಎಸ್ಪಿ ಅರುಣ್ ತಿಳಿಸಿದ್ದಾರೆ.

ಇಂದು ಮುಂಜಾನೆ 8.30ರ ವೇಳೆಯಲ್ಲಿ ಘಟನೆ ನಡೆದಿದೆ. ಮಾಸ್ಕ್ ಹಾಕಿಕೊಂಡು ಬಂದು ಏಕಾಏಕಿ ಮನೆಗೆ ನುಗ್ಗಿದ್ದಾರೆ. ಮೊದಲು ಮಹಿಳೆ ಹಾಗೂ ಮಕ್ಕಳಾದ ಹಸಿನಾ, ಅಫ್ಘಾನ್, ಐನಾಜ್‌ಗೆ ಚಾಕುವಿನಿಂದ ಇರಿಯಲಾಗಿದೆ. ಸದ್ದು ಕೇಳಿ ಆಟವಾಡುತ್ತಿದ್ದ ಆಸೀಮ್ ಹೊರ ಬರುತ್ತಿದ್ದಂತೆ ಇರಿದು ಕೊಂದಿದ್ದಾರೆ.

ಬೊಬ್ಬೆ ಕೇಳಿ ಹೊರಗಡೆ ಬಂದ ಪಕ್ಕದ ಮನೆ ಯುವತಿಯನ್ನು ಬೆದರಿಸಿ ಸ್ಥಳದಿಂದ ಕಾಲ್ಕಿತ್ತಿದ್ದಾರೆ. ಮನೆಯೊಳಗಿದ್ದ ಅತ್ತೆಗೂ ತೀವ್ರ ತರದ ಗಾಯಗಳಾಗಿವೆ ಪತಿ ವಿದೇಶದಲ್ಲಿ ಉದ್ಯೋಗ ಮಾಡುತ್ತಿದ್ದಾರೆ. ಸ್ಥಳಕ್ಕೆ ಎಸ್ಪಿ ಅರುಣ್ ಕುಮಾರ್ ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ.

ಮೈಸೂರಲ್ಲಿ ದೀಪಾವಳಿ ಹಬ್ಬದ ವ್ಯಾಪಾರ ಬಲು ಜೋರು

ಮೈಸೂರು, ನ.12(ಎಂಟಿವೈ)– ಬೆಳಕಿನ ಹಬ್ಬ ದೀಪಾವಳಿ ಆಚರಣೆಗೆ ಮೈಸೂರಿಗರು ಭರ್ಜರಿ ತಯಾರಿ ಮಾಡಿಕೊಂಡಿದ್ದು, ಹಬ್ಬದ ಆಚರಣೆಗಾಗಿ ಪೂಜಾ ಸಾಮಗ್ರಿ ಹಾಗೂ ಪಟಾಕಿ ಖರೀದಿಸಲು ಮುಗಿಬಿದ್ದರು.

ಹಿಂದೂ ಸಂಪ್ರದಾಯದಲ್ಲಿ ದೀಪಾವಳಿ ಹಬ್ಬಕ್ಕೆ ಪ್ರಮುಖ ಸ್ಥಾನವಿದ್ದು, ನರಕ ಚತುರ್ದಶಿ ಹಾಗೂ ಬಲಿಪಾಡ್ಯಮಿಯನ್ನು ಸಂಭ್ರಮದಿಂದ ಆಚರಿಸುವ ಪದ್ಧತಿ ಇದೆ. ಈ ಹಿನ್ನೆಲೆಯಲ್ಲಿ ಇಂದು ಹಬ್ಬದ ತಯಾರಿ ಬಿರುಸಾಗಿಯೇ ಆರಂಭವಾಗಿದ್ದು, ಪಟಾಕಿ ಭರಾಟೆ ಜೋರಾಗಿಯೇ ನಡೆದಿದೆ.

ಮೈಸೂರಿನ ಜೆ.ಕೆ.ಮೈದಾನ, ಕುವೆಂಪು ನಗರ, ಸರಸ್ವತಿಪುರಂ, ಲಲಿತಮಹಲ್ ಪ್ಯಾಲೇಸ್ ಮೈದಾನ, ಚಾಮುಂಡಿಪುರಂ, ಹೆಬ್ಬಾಳು ಕೈಗಾರಿಕಾ ಪ್ರದೇಶ ಸೇರಿದಂತೆ ವಿವಿಧೆಡೆ ಪಟಾಕಿ ಮಾರಾಟ ಮಳಿಗೆ ತೆರೆಯಲಾಗಿದ್ದು, ಎಲ್ಲಾ ಮಳಿಗೆಗಳಲ್ಲೂ ಪಟಾಕಿ ವ್ಯಾಪಾರ ಬಿರುಸಾಗಿ ನಡೆಯಿತು. ಪರಿಸರಕ್ಕೆ ಪೂರಕವಾದ ಹಸಿರು ಪಟಾಕಿ ಮಾರಾಟ ಮಾಡುವುದಕ್ಕೆ ಮಾತ್ರ ಅವಕಾಶ ನೀಡಲಾಗಿದ್ದು, ಪರಿಸರ ಮಾರಕ ಹಾಗೂ ಹೆಚ್ಚು ಶಬ್ದಸೂಸುವ ಪಟಾಕಿ ಮಾರಾಟ ನಿಷೇದ ಹೇರಿರುವ ಹಿನ್ನೆಲೆಯಲ್ಲಿ ಮೈಸೂರಲ್ಲಿ ತೆರೆದಿರುವ ಮಳಿಗೆಗಳಲ್ಲಿ ಹಸಿರು ಪಟಾಕಿಯನ್ನಷ್ಟೇ ಗ್ರಾಹಕರು ಖರೀದಿಸುತ್ತಿದ್ದರು. ಕೆಲವು ಮಳಿಗೆಗಳಲ್ಲಿ ಗ್ರಾಹಕರು ಚಿಕ್ಕ ಪೊಟ್ಟಣಗಳ ಪಟಾಕಿ ಖರೀದಿಸಿದರೆ, ಕೆಲವರು ದೊಡ್ಡ ದೊಡ್ಡ ಬಾಕ್ಸ್ ಪಟಾಕಿ ಖರೀದಿಸುತ್ತಿದ್ದರು. ಬಹುತೇಕ ಎಲ್ಲಾ ಬಾಕ್ಸ್‌ಗಳ ಮೇಲೂ ಹಸಿರು ಪಟಾಕಿ ಚಿಹ್ನೆ, ಕ್ಯೂಆರ್ ಕೋಡ್ ಮುದ್ರಿಸಲಾಗಿತ್ತು. ಪಟಾಕಿ ಗಿಫ್ಟ್ ಬಾಕ್ಸ್‌ಗಳಿಗೆ 250 ರಿಂದ 2500 ರೂ.ವರೆಗೆ ಬೆಲೆ ನಿಗದಿ ಮಾಡಲಾಗಿತ್ತು. ಪಟಾಕಿ ಬೆಲೆ ಹೆಚ್ಚಾಗಿದ್ದರೂ, ಗ್ರಾಹಕರು ಮಾತ್ರ ಪಟಾಕಿ ಖರೀದಿಸಲು ಹಿಂದೇಟು ಹಾಕದೆ ವಿವಿಧ ಬಗೆಯ ಪಟಾಕಿ ಖರೀದಿಸಿ ಕೊಂಡೊಯ್ದರು.



ಪೂಜಾ ಸಾಮಗ್ರಿ: ದೀಪಾವಳಿ ಅಂಗವಾಗಿ ಪೂಜಾ ಸಾಮಗ್ರಿ ಖರೀದಿಯೂ ಜೋರಾಗಿಯೇ ನಡೆಯಿತು. ದೇವರಾಜ ಮಾರುಕಟ್ಟೆ, ಎಂ.ಜಿ.ರಸ್ತೆ ಮಾರುಕಟ್ಟೆ, ಅಗ್ರಹಾರ ವೃತ್ತ, ಧನ್ವಂತ್ರಿ ರಸ್ತೆ, ಇರ್ವಿನ್ ರಸ್ತೆ, ಸಯ್ಯಾಜಿರಾವ್ ರಸ್ತೆ, ಚಿಕ್ಕಗಡಿಯಾರ ವೃತ್ತ ಸೇರಿದಂತೆ ಇನ್ನಿತರೆಗಳಲ್ಲಿ ಸೇವಂತಿ ಹೂವು, ಬಾಳೆಕಂದು, ಚೆಂಡೂವು, ಬಾಳೆಹಣ್ಣು, ತೆಂಗಿನಕಾಯಿ ಸೇರಿದಂತೆ ಇನ್ನಿತರ ಪೂಜಾ ಸಾಮಗ್ರಿಗಳ ಮಾರಾಟ ಚುರಾಗಿತ್ತು. ಕಳೆದ 3–4 ದಿನದ ಹಿಂದೆ ಗಣನೀಯ ಪ್ರಮಾಣದಲ್ಲಿ ಹೂವಿನ ಬೆಲೆ ಕುಸಿದಿತ್ತು ಆದರೆ, ದೀಪಾವಳಿ ಅಂಗವಾಗಿ ಇಂದು ಹೂವಿನ ಬೆಲೆ ಚೇತರಿಕೆ ಕಂಡಿತ್ತು. ಆದರೂ, ಹಬ್ಬದ ಆಚರಣೆಗಾಗಿ ಜನ ಮುಗಿಬಿದ್ದು ಹೂವು, ಹಣ್ಣು ಖರೀದಿಸಿದರು.

ಸಿಹಿ ತಿನಿಸಿಗಾಗಿ ಮುತ್ತಿಗೆ: ಒಂದೆಡೆ ಜನ ಪಟಾಕಿ, ಪೂಜಾ ಸಾಮಗ್ರಿ ಖರೀದಿಗೆ ಮುಗಿಬಿದ್ದಿದ್ದರೆ ಮತ್ತೊಂದೆಡೆ ಸಿಹಿ ತಿನಿಸು ಅಂಗಡಿಗಳ ಮುಂದೆ ಜನ ಸಾಲಿಗಟ್ಟಿ ನಿಂತಿದ್ದರು. ಹಬ್ಬಕ್ಕೆ ಸಿಹಿ ತಿನಿಸು ಕೊಡುಗೆ ನೀಡುವುದಕ್ಕಾಗಿಯೇ ಗಿಫ್ಟ್ ಬಾಕ್ಸ್ ಸಿದ್ಧಪಡಿಸಲಾಗಿದ್ದು, ಅವುಗಳ ಖರೀದಿ ಬಿರುಸಾಗಿ ಸಾಗಿತು.

ಆಕಾಶ ಬುಟ್ಟಿ: ಪರಿಸರ ಮಾಲಿನ್ಯ ತಡೆಗಟ್ಟಲು ಕೆಲವರು ಪಟಾಕಿ ಹೊಡೆಯುವುದರ ಬದಲು ಆಕಾಶಬುಟ್ಟಿ ಹಚ್ಚಲು ನಿರ್ಧರಿಸಿದ್ದು, ಇದರ ಅಂಗವಾಗಿ ಆಕಾಶಬುಟ್ಟಿ ಖರೀದಿಯಲ್ಲಿ ಕೆಲವರು ಮಗ್ನರಾಗಿದ್ದರು.

ಮಣ್ಣಿನ ಹಣತೆ: ದೀಪಾವಳಿ ಹಬ್ಬಕ್ಕೆ ಹಚ್ಚಲು ಮಣ್ಣಿನ ದೀಪಗಳನ್ನು ಬಳಸುವುದರಿಂದ ಮೈಸೂರಿನ ಹಲವೆಡೆ ರಸ್ತೆ ಬದಿಗಳಲ್ಲಿ ಮಣ್ಣಿನ ದೀಪಗಳ ಮಾರಾಟ ಮಾಡಲಾಗುತ್ತಿತ್ತು. ಗ್ರಾಹಕರು ಪಟಾಕಿ ಬಿರುಸಿನ ನಡುವೆಯೂ ಮಣ್ಣಿನ ದೀಪ ಖರೀದಿಸುತ್ತಿದ್ದ ದೃಶ್ಯ ಕಂಡು ಬಂದಿತು.

ಐತಿಹಾಸಿಕ ಸ್ಮಾರಕಗಳ ವೀಕ್ಷಣೆಗೆ ಡಿಜಿಟಲ್ ಟಿಕೆಟ್ ವ್ಯವಸ್ಥೆ

●ಸೋಮನಾಥಪುರ, ದರಿಯಾ ದೌಲತ್‌ನಲ್ಲಿ ಪ್ರಾಯೋಗಿಕವಾಗಿ ಜಾರಿ ●ಹಿರಿಯ ನಾಗರಿಕರು, ಸ್ಮಾರ್ಟ್ ಫೋನ್ ಇಲ್ಲದವರು ಟಿಕೆಟ್ ಪಡೆಯಲು ಪರದಾಟ ●ಆನ್‌ಲೈನ್ ಜೊತೆಗೆ ಆಫ್‌ಲೈನ್ ಟಿಕೆಟ್ ವ್ಯವಸ್ಥೆಗೆ ಆಗ್ರಹ

ಮೈಸೂರು, ನ12(ಜಿಎ)–ಪುರಾತನ ಮತ್ತು ಐತಿಹಾಸಿಕ ಸ್ಮಾರಕಗಳ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಡಿಜಿಟಲ್ ಮೂಲಕ ಟಿಕೆಟ್ ಪಡೆಯುವ ನೂತನ ವ್ಯವಸ್ಥೆಯನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಜಾರಿಗೊಳಿಸಲು ಮುಂದಾಗಿದ್ದು, ಇದೀಗ ಪ್ರಾಯೋಗಿಕವಾಗಿ ಮೈಸೂರು ಜಿಲ್ಲೆಯ ಸೋಮನಾಥಪುರದ ಚೆನ್ನಕೇಶವ ದೇವಾಲಯ ಹಾಗೂ ಶ್ರೀರಂಗಪಟ್ಟಣದ ದರಿಯಾ ದೌಲತ್‌ಬಾಗ್‌ನಲ್ಲಿ ನೂತನ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

ಮೈಸೂರು ಭಾಗದ ಪ್ರವಾಸಿ ತಾಣಗಳಿಗೆ ದಿನದಿಂದ ದಿನಕ್ಕೆ ವಿದೇಶಿ ಹಾಗೂ ಹೊರ ರಾಜ್ಯಗಳ ಪ್ರವಾಸಿಗರು ಆಗಮಿಸುವ ಸಂಖ್ಯೆ ಹೆಚ್ಚಾಗುತ್ತಿದ್ದು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ವ್ಯಾಪ್ತಿಗೆ ಒಳಪಡುವ ಐತಿಹಾಸಿಕ ಮತ್ತು ಪುರಾತನ ಸ್ಮಾರಕಗಳ ವೀಕ್ಷಣೆಗೆ ಬರುವ ಪ್ರವಾಸಿಗರಿಗರ ಅಡಚಣೆ ರಹಿತ ವ್ಯವಸ್ಥೆ ಕಲ್ಪಿಸಲು ಡಿಜಿಟಲ್ ಮೊರೆ ಹೋಗಲಾಗಿದೆ.

ಪ್ರಮುಖವಾಗಿ ಸ್ಮಾರಕಗಳಿಗೆ ಭೇಟಿ ನೀಡುವ ಪ್ರವಾಸಿಗರು ಟಿಕೆಟ್ ಪಡೆಯಲು ಸರದಿ ಸಾಲಿನಲ್ಲಿ ನಿಲ್ಲುವುದನ್ನು ತಪ್ಪಿಸುವುದಕ್ಕಾಗಿ ಡಿಜಿಟಲ್ ವ್ಯವಸ್ಥೆಯನ್ನು ಹಂತ ಹಂತವಾಗಿ ವಿಸ್ತರಿಸಲಾಗಿದೆ.

ಪ್ರವಾಸಿಗರು ಸ್ಮಾರ್ಟ್‌ಫೋನ್ ಮೂಲಕ ಸ್ಮಾರಕದ ಬಳಿ ಇಲಾಖೆಯಿಂದ ಪ್ರದರ್ಶಿಸಲಾಗಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಆನ್‌ಲೈನ್‌ನಲ್ಲಿ ಟಿಕೆಟ್ ಖರೀದಿಸಬಹುದಾಗಿದೆ. ಇದರಿಂದ ಸರದಿ ಸಾಲಿನಲ್ಲಿ ನಿಲ್ಲುವುದನ್ನು ತಪ್ಪಿಸುವುದರ ಜೊತೆಗೆ ಪ್ರವಾಸಿಗರಿಗೆ ಸಮಯ ವ್ಯರ್ಥ ಆಗುವುದನ್ನು ತಡೆಗಟ್ಟಬಹುದಾಗಿದೆ. ಈಗಾಗಲೇ ದೇಶದ ಹಲವೆಡೆ ಪ್ರಮುಖ ಪ್ರವಾಸಿ ತಾಣಗಳಲ್ಲಿ ಡಿಜಿಟಲ್ ವ್ಯವಸ್ಥೆ ಜಾರಿಯಾಗಿದ್ದು, ಪ್ರವಾಸಿ ಸ್ನೇಹಿಯಾಗಿ ಮಾರ್ಪಟ್ಟಿರುವುದರಿಂದ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ತನ್ನ ವ್ಯಾಪ್ತಿಗೆ ಒಳಪಡುವ ಸ್ಮಾರಕಗಳಲ್ಲಿ ಡಿಜಿಟಲ್ ಟಿಕೆಟ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಪ್ರಸ್ತುತ ಮೈಸೂರು ಭಾಗದಲ್ಲಿ ಶ್ರೀರಂಗಪಟ್ಟಣದ ದರಿಯಾ ದೌಲತ್ ಬಾಗ್ (ಟಿಪ್ಪು ಸುಲ್ತಾನ್ ಬೇಸಿಗೆ ಅರಮನೆ) ಮತ್ತು ಸೋಮನಾಥಪುರದ ಚನ್ನಕೇಶವ ದೇವಾಲಯ (ಮೈಸೂರಿನ ಟಿ.ನರಸೀಪುರ ತಾಲೂಕಿನಲ್ಲಿ), ಇದು 12ನೇ ಶತಮಾನದ ಹೊಯ್ಸಳ ಗಮನಾರ್ಹ ಭಾಗವಾಗಿದೆ. ಇದರ ವಾಸ್ತುಶಿಲ್ಪಕ್ಕೆ ಪ್ರತಿಷ್ಠಿತ UNESCO ವಿಶ್ವ ಪರಂಪರೆಯ ತಾಣದ ಟ್ಯಾಗ್ ಅನ್ನು ನೀಡಿದ್ದು, ಈ ಎರಡು ಸ್ಮಾರಕಗಳಲ್ಲಿ ಈ ಸೌಲಭ್ಯವನ್ನು ಅಳವಡಿಸಲಾಗಿದೆ.




ಮೈಸೂರಿನ ಇತರ ಸ್ಮಾರಕಗಳಿಗೂ ಇದೇ ವ್ಯವಸ್ಥೆಯನ್ನು ಪರಿಚಯಿಸುವ ಚಿಂತನೆ ಇದೆ. ಡಿಜಿಟಲ್ ಟಿಕೆಟ್ ಬದಲಾವಣೆಯು ಸ್ಥಳೀಯ ಮತ್ತು ಹೊರರಾಜ್ಯ ಪ್ರವಾಸಿಗರಿಗೆ, ತಂತ್ರಜ್ಞಾನದ ಬಗ್ಗೆ ಪರಿಚಯವಿಲ್ಲದ ಹಿರಿಯ ನಾಗರಿಕರಿಗೆ ಮತ್ತು ಸ್ಮಾರ್ಟ್‌ಫೋನ್‌ಗಳಿಲ್ಲದ ಇತರರಿಗೆ ಸವಾಲುಗಳನ್ನು ಎದುರಾಗಿ ಸಾಕಷ್ಟು ಗೊಂದಲವಾಗಿದೆ. ಇದರಿಂದಾಗಿ ಅನೇಕ ಪ್ರವಾಸಿಗರು ನಿರಾಸೆಗೊಂಡಿದ್ದಾರೆ ಮತ್ತು ಈ ಐತಿಹಾಸಿಕ ತಾಣಗಳನ್ನು ವೀಕ್ಷಿಸಲು ಸಾಧ್ಯವಾಗದೆ ಬೇಸರಗೊಳ್ಳುತ್ತಿದ್ದಾರೆ.

ಟಿಕೆಟ್ ಪಡೆಯುವ ವಿಧಾನ: ಡಿಜಿಟಲ್ ಟಿಕೆಟ್ ಪದ್ಧತಿ ಬಗ್ಗೆ ಮಾಹಿತಿ ಇಲ್ಲದ ಸಂದರ್ಶಕರಿಗೆ 'ಸ್ಕ್ಯಾನ್ ಮತ್ತು ಪಾವತಿ' ಆಯ್ಕೆಯನ್ನು ಬಳಸಲು ಸ್ಮಾರಕಗಳ ಮುಂದೆ ಇರಿಸಲಾಗಿರುವ ಸ್ಟ್ಯಾಂಡ್ ಬೋರ್ಡ್‌ಗಳ ಮೂಲಕ ಮಾರ್ಗದರ್ಶನ ನೀಡಲಾಗುತ್ತಿದೆ. ಕ್ಯೂಆರ್ ಕೋಡ್ ಅನ್ನು ಸ್ಮಾರ್ಟ್‌ಫೋನ್‌ನೊಂದಿಗೆ ಸ್ಕ್ಯಾನ್ ಮಾಡಿದ ನಂತರ, ಅದು ಬಳಕೆದಾರರನ್ನು https://asi.payumoney.com ವೆಬ್‌ಸೈಟ್‌ಗೆ ನಿರ್ದೇಶಿಸುತ್ತದೆ. ಅಲ್ಲಿ ಸಂದರ್ಶಕರು ದಿನಾಂಕ, ಆದ್ಯತೆಯ ಸಮಯದ ಸ್ಲಾಟ್, ರಾಷ್ಟ್ರೀಯತೆ, ಸಂದರ್ಶಕರ ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆ, ಪಾಸ್‌ಪೋರ್ಟ್, ಪ್ಯಾನ್ ಕಾರ್ಡ್, ಡ್ರೈವರ್ ಲೈಸೆನ್ಸ್ ಗುರುತಿನ ದಾಖಲೆಗಳೊಂದಿಗೆ ಒದಗಿಸಬೇಕು. ಬಳಕೆದಾರರನ್ನು ನಂತರ ಪಾವತಿಗೆ ಮರುನಿರ್ದೇಶಿಸಲಾಗುತ್ತದೆ, ಅಲ್ಲಿ ಪಾವತಿ ಮಾಡಲು ವೇದಿಕೆಯನ್ನು ಆಯ್ಕೆ ಮಾಡಿ ಪಾವತಿಯಾದ ನಂತರ ಮೊಬೈಲ್‌ಗೆ ಇ–ಟಿಕೆಟ್ ತಲುಪುತ್ತದೆ.

ಸಮಸ್ಯೆಗಳು: ಟಿಕೆಟ್ ಪಡೆಯುವ ಪ್ರಕ್ರಿಯೆಯನ್ನು ಸುಗಮಗೊಳಿಸುವುದು, ಸಮಯವನ್ನು ಉಳಿಸುವುದು, ಕಾಗದದ ಬಳಕೆಯನ್ನು ಕಡಿಮೆ ಮಾಡುವುದು ಮತ್ತು ನಗದುರಹಿತ ವಹಿವಾಟುಗಳನ್ನು ಉತ್ತೇಜಿಸುವ ಉದ್ದೇಶದಿಂದ ಜಾರಿಗೆ ತಂದ ಕ್ಯೂಆರ್ ಕೋಡ್ ವ್ಯವಸ್ಥೆಯು ಅನೇಕ ಸಂದರ್ಶಕರಿಗೆ ಸಾಕಷ್ಟು ಸಮಸ್ಯೆಗಳ ಮೂಲವಾಗುತ್ತಿದೆ. ವಿಶೇಷವಾಗಿ ನೆಟ್‌ವರ್ಕ್ ಸಮಸ್ಯೆಗಳನ್ನು ಎದುರಿಸುತ್ತಿರುವವರಿಗೆ ಮತ್ತು ಗ್ರಾಮೀಣ ಪ್ರದೇಶಗಳಿಂದ ಬರುವ ಸಂದರ್ಶಕರು ಅರಿವಿನ ಕೊರತೆಯಿಂದಾಗಿ ಈ ಎಲ್ಲಾ ಪ್ರಕ್ರಿಯೆಯನ್ನು ಮಾಡುವುದು ಸವಾಲಿನ ಸಂಗತಿಯಾಗಿದ್ದು, ಸಂದರ್ಶಕರು ಈ ಎಲ್ಲಾ ಪ್ರಕ್ರಿಯೆಗಳನ್ನು ಮಾಡಲಾಗದೆ ಹಿಂದಿರುಗಿದ ನಿದರ್ಶನಗಳು ಸಾಮಾನ್ಯವಾಗಿ ಹೆಚ್ಚಾಗುತ್ತಿದೆ.

ಆನ್‌ಲೈನ್, ಆಫ್‌ಲೈನ್ ವ್ಯವಸ್ಥೆಗಳೆರಡಕ್ಕೂ ಬೇಡಿಕೆ: ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಟಿಕೆಟ್ ಪಡೆಯುವ ಪದ್ಧತಿಯನ್ನು ವಿರೋಧಿಸುತ್ತಿರುವ ಅನೇಕ ಪ್ರವಾಸಿಗರು ಈ ಸ್ಥಳಗಳಲ್ಲಿ ಹಿಂದಿನ ಟಿಕೆಟ್ ಕೌಂಟರ್‌ಗಳನ್ನು ಮರುಸ್ಥಾಪಿಸುವಂತೆ ಒತ್ತಾಯಿಸುತ್ತಿದ್ದಾರೆ. ಮತ್ತೊಂದೆಡೆ ಸ್ಮಾರಕ ಪ್ರೇಮಿಗಳು ಮತ್ತು ತಜ್ಞರು ಆನ್‌ಲೈನ್ ಮತ್ತು ಆಫ್‌ಲೈನ್ ಟಿಕೆಟ್ ವ್ಯವಸ್ಥೆ ಮಾಡುವಂತೆ ಸಲಹೆಗಳನ್ನು ನೀಡುತ್ತಿದ್ದಾರೆ.



> ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಟಿಕೆಟ್ ಪಡೆದುಕೊಳ್ಳುವ ಪದ್ಧತಿಯನ್ನು ಆರ್ಕಿಯಲಾಜಿಕಲ್ ಸರ್ವೆ ಆಫ್ ಇಂಡಿಯಾ (ಎಎಸ್‌ಐ) ಜಾರಿ ಮಾಡಿದೆ. ಅದರ ಪ್ರತಿಕ್ರಿಯೆ ನೋಡಿಕೊಂಡು ಮುಂದಿನ ದಿನಗಳಲ್ಲಿ ಮೈಸೂರಿನ ಪ್ರವಾಸಿ ತಾಣದಲ್ಲಿಯೂ ಅಳವಡಿಸುವ ಚಿಂತನೆ ಇದೆ.
> –ಎ. ದೇವರಾಜು, ಆಯುಕ್ತ, ಪುರಾತತ್ವ ಇಲಾಖೆ, ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ

ಆನ್‌ಲೈನ್‌ನಲ್ಲಿ ಟಿಕೆಟ್ ಕಾಯ್ದಿರಿಸಲು, ಸಾಕಷ್ಟು ವೈಯಕ್ತಿಕ ಮಾಹಿತಿಯನ್ನು ನೀಡಬೇಕು, ಇದು ಕಿರಿಕಿರಿಯುಂಟುಮಾಡುತ್ತದೆ. ಇದಲ್ಲದೆ, ಪ್ರಕ್ರಿಯೆಯು ಸ್ಮಾರ್ಟ್‌ಫೋನ್ ಅಥವಾ ಇಂಟರ್ನೆಟ್ ಇಲ್ಲದವರಿಗೆ ಪ್ರವೇಶವನ್ನು ನಿರ್ಬಂಧಿಸುತ್ತದೆ ಎಂದು ಬೆಂಗಳೂರಿನ ಸಂದರ್ಶಕ ಸಂದೀಪ್ ಚೌಹಾಣ್ ಬೇಸರಿಸಿದರು.

ಪಾರಂಪರಿಕ ಸ್ಥಳಗಳು ಇಡೀ ರಾಷ್ಟ್ರಕ್ಕೆ ಸೇರಿವೆ. ಪ್ರತಿಯೊಬ್ಬ ನಾಗರಿಕನೂ ಈ ಸ್ಥಳಗಳಿಗೆ ಪ್ರವೇಶವನ್ನು ಹೊಂದಿರಬೇಕು. ಇದು ಶಿಕ್ಷಣದ ಹಕ್ಕು ಮತ್ತು ಅತ್ಯಗತ್ಯ ಭಾಗವಾಗಿದೆ. ಶಾಲೆಯಲ್ಲಿ ಓದಿದ ಇತಿಹಾಸವನ್ನು ಮರೆತಿರುವ ಎಷ್ಟೋ ಮಂದಿಗೆ ಪಾರಂಪರಿಕ ಸ್ಥಳಗಳಿಗೆ ಭೇಟಿ ನೀಡಿ ಇತಿಹಾಸದ ಬಗ್ಗೆ ತಿಳಿವಳಿಕೆ ಮೂಡಿಸುತ್ತದೆ. ಯಾವುದೇ ವಿಧಾನದ ಮೂಲಕ ಪ್ರವೇಶವನ್ನು ನಿರ್ಬಂಧಿಸುವುದು ಅನಗತ್ಯ ಎಂದು ಇತಿಹಾಸಕಾರರು ಅಭಿಪ್ರಾಯಟ್ಟಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಹುಡುಗಿ : ಈ ಬಟ್ಟೆ ಬೆಲೆ ಎಷ್ಟು?
ಅಂಗಡಿಯಾತ : ಕೇವಲ ಐದು ಕಿಸ್ ಮಾತ್ರ.
ಹುಡುಗಿ : ಚೂಡಿದಾರಕ್ಕೆ ಎಷ್ಟು?
ಅಂಗಡಿಯಾತ : ಹತ್ತು ಕಿಸ್
ಹುಡುಗಿ : ಎರಡನ್ನೂ ಪ್ಯಾಕ್ ಮಾಡಿ, ಬಿಲ್ ನನ್ನ ಅಜ್ಜಿ ಕೊಡ್ತಾರೆ...!!

ಮೈಸೂರು ಮಿತ್ರ

ಸೋಮವಾರ, 13 ನವೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

'ಬೇಡ ಎಂದವರಿಗೆ ಭಾರವಾಗುವ ಬದಲು
ಬೇಕು ಎಂದವರಿಗೆ ಬೆಳಕಾಗಿ ಸಾಕು'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಒಡೆದ ಮುತ್ತು, ಕಳೆದ ಹೊತ್ತು ಮತ್ತೆ ಸಿಗದು'

ನಿಮ್ಮ ಪತ್ರಗಳು

ರಾಜ್ಯ ಬಿಜೆಪಿಯಲ್ಲಿ ಹೊಸ ಸಂಚಲನ

ಮಾನ್ಯರೆ,



ಅಂತೂ ಇಂತೂ ಸುಮಾರು ತಿಂಗಳುಗಳಿಂದ ನನೆಗುದಿಗೆ ಬಿದ್ದಿದ್ದ, ನಾಯಕನಿಲ್ಲದ ಹಡಗಿನಂತಾಗಿದ್ದ ಕರ್ನಾಟಕದ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನವನ್ನು ಬಿಜೆಪಿ ಹೈಕಮಾಂಡ್ ಎಲ್ಲಾ ರೀತಿಯಲ್ಲೂ ಅಳೆದು ತೂಗಿ ತುಲನಾತ್ಮಕವಾಗಿ ಪರಿಶೀಲಿಸಿ, ರಾಜ್ಯ ಪ್ರಮುಖ ನಾಯಕರಿಂದ ಮಾಹಿತಿಯನ್ನು ಸಂಗ್ರಹಿಸಿ, ಚರ್ಚಿಸಿ, 2024ರ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು, ಯಡಿಯೂರಪ್ಪನ ವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ ರಾಜ್ಯ ಬಿಜೆಪಿಯಲ್ಲಿ ಅನುಭವಿಸಿದ ನಷ್ಟವನ್ನು ಸರಿದೂಗಿಸಲು. ಕೊನೆಗೂ ಮನಸ್ಸು ಮಾಡಿ ಕರ್ನಾಟಕದ ಬಿಜೆಪಿ ರಾಜ್ಯಾಧ್ಯಕ್ಷರಾಗಿ ಬಿ.ವೈ.ವಿಜಯೇಂದ್ರ ಅವರನ್ನು ನೇಮಕ ಮಾಡಿದೆ.

ರಾಜ್ಯ ಬಿಜೆಪಿ ಘಟಾನುಘಟಿ ನಾಯಕರುಗಳ ನಡುವೆ ವಿಜಯೇಂದ್ರ ಅವರನ್ನು ಆಯ್ಕೆ ಮಾಡಿರುವುದು ಕುತೂಹಲ ಮೂಡಿಸಿದೆ. ಮಾಜಿ ಮುಖ್ಯಮಂತ್ರಿಗಳಾದ ಬಿಎಸ್‌ವೈ ಅವರ ರಾಜಕೀಯ ಗರಡಿಯಲ್ಲಿ ಬೆಳೆದ 'ಮರಿ ಹುಲಿ' ಎಂದೇ ಕರೆಯುವ, ಯೂತ್ ಐಕಾನ್, ಸಂಘಟನಾ ರಾಜಕೀಯ ಚತುರರೆಂದು ಖ್ಯಾತಿಯನ್ನು ಪಡೆದಿರುವ ಪ್ರಬಲ ಲಿಂಗಾಯಿತ ಸಮುದಾಯಕ್ಕೆ ಸೇರಿದ ಯುವ ನಾಯಕರಾಗಿದ್ದಾರೆ. ಇವರು ಉತ್ತಮ ವಾಗ್ಮಿ, ಮತದಾರರನ್ನು ತನ್ನತ್ತ ಸೆಳೆಯುವ ಕಲೆಯನ್ನು ಕರಗತ ಮಾಡಿಕೊಂಡಿರುವ ಚಾಣಾಕ್ಷ, ಮುಗುಳ್ನಗೆ ವ್ಯಕ್ತಿತ್ವದ ಯುವ ನಾಯಕ. ಬಿವೈವಿ ರವರು ಕಳೆದ ಬಾರಿ ಬಿಜೆಪಿಯನ್ನು ಅಧಿಕಾರಕ್ಕೆ ತಂದು ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಮಾಡಲು ಬಹಳಷ್ಟು ಶ್ರಮವಹಿಸಿದರು. ಉಪ ಚುನಾವಣೆಗಳಲ್ಲಿ ಘಟಾನುಘಟಿ ಅಭ್ಯರ್ಥಿಗಳನ್ನು ಸೋಲಿಸಿ. ಬಿಜೆಪಿಯನ್ನು ಗೆಲ್ಲಿಸಿ ರಾಜಕೀಯ ವಲಯದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದ ಯುವಕರ ಕಣ್ಮಣಿ ಎಂದೇ ಕರೆಯುವ ಬಿವೈವಿ ರಾಜ್ಯಾಧ್ಯಕ್ಷರಾಗಿರುವುದು ಅಭಿಮಾನಿಗಳು, ಬಿಜೆಪಿಯ ಕಾರ್ಯಕರ್ತರಲ್ಲಿ ಹುಮ್ಮಸ್ಸು ಮತ್ತು ಸಂತಸ ಇಮ್ಮಡಿಯಾಗಿದೆ, ಕಳೆದ ಮೂರು ವರ್ಷಗಳಿಂದ ರಾಜ್ಯ ಬಿಜೆಪಿಯ ಉಪಾಧ್ಯಕ್ಷರಾಗಿ, ಯುವ ಮೋರ್ಚಾ ಅಧ್ಯಕ್ಷರಾಗಿ, ಶಿಕಾರಿಪುರದಿಂದ ಶಾಸಕರಾಗಿ ಮೊದಲ ಬಾರಿಗೆ ಆಯ್ಕೆಯಾಗಿರುವ ಬಿವೈವಿ ಪಕ್ಷದ ಅನೇಕ ಹುದ್ದೆಗಳನ್ನು ನಿಭಾಯಿಸಿದ ಅನುಭವವನ್ನು ಪಡೆದುಕೊಂಡಿದ್ದಾರೆ, ರಾಜ್ಯಾದ್ಯಂತ ಲಕ್ಷಾಂತರ ಕಾರ್ಯಕರ್ತರನ್ನು ಹೊಂದಿದ್ದು ತಮ್ಮದೇ ಆದ ಯುವ ಪಡೆಯನ್ನು ರಾಜ್ಯ ಮಟ್ಟದಲ್ಲಿ ಕಟ್ಟಿಕೊಂಡಿದ್ದಾರೆ. ಬಿವೈವಿ ಅವರಿಗೆ ಈ ಅಧ್ಯಕ್ಷ ಪಟ್ಟವು ಹೂವಿನ ಹಾದಿಯಾಗಿರದೇ ಮುಳ್ಳಿನ ಹಾದಿಯಾಗಿದ್ದು ಬಿಜೆಪಿ ವಲಯದಲ್ಲಿ ಭಿನ್ನಾಭಿಪ್ರಾಯಗಳು ಭುಗಿಲೆದ್ದಿದ್ದು ಮುಸುಕಿನ ಗುದ್ದಾಟ ಆರಂಭವಾಗಿದೆ, ಇವೆಲ್ಲವನ್ನು ಶಮನ ಮಾಡಿಕೊಂಡು. 2024ರ ಲೋಕಸಭಾ ಚುನಾವಣೆಯಲ್ಲಿ ಮತದಾರರಲ್ಲಿ ಯಾವ ರೀತಿ ಪ್ರಭಾವ ಬೀರುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾಲೂಕು

ನಂಬಿಕೆ ನಮ್ಮ ಜೀವನದ ದೈತ್ಯ ಶಕ್ತಿ?.!

ಮಾನ್ಯರೆ,

ನಂಬಿಕೆ ಎನ್ನುವುದು ಮನುಷ್ಯನ ಜೀವನದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿರುತ್ತದೆ. ನಂಬಿಕೆಯು ಧನಾತ್ಮಕ ಧೋರಣೆ ಹೊಂದಿರಬೇಕೆ ಹೊರತು ಋಣಾತ್ಮಕ ಧೋರಣೆ ಅಲ್ಲ. ಈ ನಂಬಿಕೆ ಅನ್ನುವುದು ಮನುಷ್ಯ ಜೀವನದ ಜೀವಾಳ ಎಂದೇ ಹೇಳಬಹುದು. ಇದು ಆರೋಗ್ಯಕರ ಮತ್ತು ಸುಖಕರವಾಗಿರಬೇಕು. ಈ ನಂಬಿಕೆ ಎಲ್ಲಾ ಸಂಬಂಧಗಳಲ್ಲಿಯೂ ತನ್ನ ಪಾತ್ರವನ್ನು ಜೀವನದುದ್ದಕ್ಕೂ ನಿರ್ವಹಿಸುತ್ತದೆ. ಸ್ನೇಹಿತರ ಸಂಬಂಧವಾಗಿರಬಹುದು, ದಾಂಪತ್ಯ ಜೀವನದಲ್ಲಾಗಿರಬಹುದು, ಕೆಲಸ ಮಾಡುವ ಕಂಪನಿಯಲ್ಲಿ ಆಗಿರಬಹುದು, ವಿದ್ಯಾರ್ಥಿ ಶಿಕ್ಷಕರ ನಡುವೆ ಆಗಿರಬಹುದು, ತಂದೆ ತಾಯಿ ಹಾಗೂ ಮಕ್ಕಳ ನಡುವೆ ಆಗಿರಬಹುದು, ಈ ರೀತಿಯಾಗಿ ನಂಬಿಕೆಯು ತನ್ನದೇ ಆದ ಮಜಲುಗಳನ್ನು ಹೊಂದಿರುತ್ತದೆ. ಒಮ್ಮೆ ನಂಬಿಕೆ ಎಂಬ ಕೊಂಡಿ ಕಳಚಿ ಬಿದ್ದರೆ ಸೇರಿಸಲು ಬಲು ಕಷ್ಟಸಾಧ್ಯ. ಎಷ್ಟೇ ಸೇರಿಸಿದರು ಅದರ ಛಾಯೆ ಹಾಗೆ ಉಳಿಯುತ್ತದೆ. ಇದೊಂದು ರೀತಿಯ ಕನ್ನಡಿ ಇದ್ದ ಹಾಗೆ ಒಮ್ಮೆ ಒಡೆದ ಕನ್ನಡಿ ಸೇರಿಸಿದರು ಅದರ ಬಿರುಕು ಮಾತ್ರ ಹಾಗೆ ಕಾಣಿಸುತ್ತದೆ. ಆದ್ದರಿಂದ ಮನುಷ್ಯರು ನಂಬಿಕೆ ಎನ್ನುವುದನ್ನು ಜೀವನದುದ್ದಕ್ಕೂ ಕಾಪಾಡಿಕೊಳ್ಳುವುದರಲ್ಲಿ ಅವರ ವ್ಯಕ್ತಿತ್ವ ನಿರೂಪಿತವಾಗುತ್ತದೆ ಎನ್ನಬಹುದು.

ನಂಬಿಕೆಗೆ ಅಗಾಧವಾದ ಶಕ್ತಿಯಿದೆ. ಒಬ್ಬ ವ್ಯಕ್ತಿ ಕೊಟ್ಟ ಮಾತಿಗೆ ಚಾಚು ತಪ್ಪದೇ ನಡೆದುಕೊಳ್ಳುವುದೇ ನಿಜವಾದ ನಂಬಿಕೆ ಅಲ್ಲವೇ?. ಅವನು ಕೊಡುವ ಮಾತಿನಲ್ಲಿ ಹುಸಿಯಿರಬಾರದು ನೈಜತೆ ಎದ್ದು ಕಾಣಬೇಕು. ಮಿಥ್ಯವನ್ನು ನುಡಿಯುತ್ತಾ ಹಗಲಿರುಳು ಕಳಿಯುವ ಮನುಷ್ಯ ಎಂದಿಗೂ ಸಂತಸದಿಂದ ಇರಲಾರನು. ಅವನಲ್ಲಿ ಯಾವಾಗಲಾದರೊಮ್ಮೆ ಪ್ರಾಯಶ್ಚಿತ ಪಟ್ಟೆ ಪಡಬೇಕಾಗುತ್ತದೆ. ಮಾಡಿದ ತಪ್ಪಿಗೆ ಬೆಲೆ ತೆರಬೇಕಾಗುತ್ತದೆ. ಒಬ್ಬರು ಇನ್ನೊಬ್ಬರ ಮೇಲೆ ಅತಿಯಾದ ನಂಬಿಕೆ ಇಟ್ಟಿದ್ದಾರೆ ಎಂದರೆ ಅದು ಅವರ ಮೇಲಿನ ದುಪ್ಪಟ್ಟು ಪ್ರೇಮ ಹಾಗೂ ಗೌರವ ಇರಬಹುದು. ಇದನ್ನು ಆತನು ತನ್ನ ಸ್ವಾರ್ಥ ಈಡೇರಿಸಿಕೊಳ್ಳಲು ಬಳಸಿಕೊಳ್ಳಬಾರದು. ಹೀಗೆ ಮಾಡಿದರೆ ಅದು ನಂಬಿಕೆ ದ್ರೋಹವಾಗುತ್ತದೆ. ನಂಬಿಕೆ ಎಂಬುದು ಮೂರಕ್ಷರವೇ ಇರಬಹುದು ಆದರೇ ಅದಕ್ಕೆ ಮಾನವ ಎನ್ನುವ ಮಾಂಸ ಮುದ್ದೆಯನ್ನು ಗೆಲ್ಲುವ ದೈತ್ಯ ಶಕ್ತಿಯಿದೆ. ಹೀಗಾಗಿ ನಾವು ಯಾರಾದರ ಮೇಲೆ ನಂಬಿಕೆ ಇಡುವಾಗ ಅವರ ಸುತ್ತಮುತ್ತಲಿನ ವಾತಾವರಣ ಪರಿಶೀಲಿಸಿ ಅವರ ಬಗ್ಗೆ ವ್ಯಕ್ತಿ ಅಧ್ಯಯನ ಮಾಡಿ ನಂಬಿಕೆ ಇಡುವುದು ಸೂಕ್ತ ಎನ್ನುವುದು ನನ್ನ ವೈಯಕ್ತಿಕ ಆಶಯ. ಆದ್ದರಿಂದ ಯಾರಾದರೂ ಆಗಲಿ ತಮ್ಮ ಆತ್ಮಿಯರು ತಮ್ಮ ಮೇಲೆ ಇಟ್ಟಿರುವ ನಂಬಿಕೆಯನ್ನು ಹುಸಿಗೊಳಿಸದೇ ಇನ್ನಷ್ಟು ದ್ವಿಗುಣವಾಗುವಂತೆ ಮಾಡಿ ಬಾಂಧವ್ಯ ಗಟ್ಟಿಮಾಡಿಕೊಳ್ಳಿ. ನಂಬಿಕೆಗೆ ನೈಜ ಅರ್ಥ ದೊರಕಿಸೋಣ.

–ಅನಿಲ್‌ರಾಜ, ಸಹ ಶಿಕ್ಷಕರು, ಸಿದ್ಧಾರ್ಥನಗರ, ಮೈಸೂರು

ಅತಿಯಾದರೆ ಜಾಮೂನೂ ವಿಷವೇ! (ವಿಷಕಂಠ)

ಮಾನ್ಯರೆ,

ಮಾಜಿ ಸಚಿವ ಎಸ್.ಟಿ.ಸೋಮಶೇಖರ್ ಅವರು, ಬಿಜೆಪಿಯವರು, ಬೇರೆಯವರಿಗೆ ಮೊದಲು ಸಿಹಿಯಾದ ಜಾಮೂನು ಕೊಟ್ಟು ತಮ್ಮ ಪಕ್ಷಕ್ಕೆ ಕರೆತರುತ್ತಾರೆ. ಅಧಿಕಾರ ಮುಗಿದ ಮೇಲೆ ವಿಷ ಕೊಡುತ್ತಾರೆ. ಎಂದು ಸ್ವಪಕ್ಷದ ವಿರುದ್ಧವೇ ಕಿಡಿಕಾರಿದ್ದಾರೆ. ಅತಿಯಾದರೆ ಅಮೃತವೂ ವಿಷವಾಗುತ್ತದೆ, ಎಂಬ ನಾಣ್ನುಡಿಯೇ ಇದೆ. ಆಗ ಸಿಹಿಯಾದ ಜಾಮೂನನ್ನು ಕಂಠಪೂರ್ತಿ ತಿಂದುತೇಗುವಾಗ ಅವರಿಗೆ ಇದು ಅಜೀರ್ಣವಾಗುತ್ತದೆ, ವಾಂತಿ(ವಿಷ)ಯಾಗುತ್ತದೆ. ದಿನವೂ ಸಿಹಿಯನ್ನು ತಿನ್ನುತ್ತಿದ್ದರೆ ಸಕ್ಕರೆ ಕಾಯಿಲೆ ಬರುವ ಸಂಭವವೂ ವಿರುತ್ತದೆ ಎಂದು ಅರಿವಿರಲಿಲ್ಲವೇ? ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿ ಬಿಡುವಿಲ್ಲದೆ(ಜಾಮೂನು ತಿಂದು) ದುಡಿದು, ಪಾಪ ಆ ಬಗ್ಗೆ ಆಗ ಗಮನ ಕೊಡಲು ಅಗಲಿಲ್ಲವೆ?

ಈಗ ಬಿಜೆಪಿಯವರ ಬಳಿ ಜಾಮೂನು (ಅಧಿಕಾರ) ಇಲ್ಲದಿರುವುದರಿಂದ ಈಗ ಅವರು ಜಾಮೂನು ಇರುವ ಸ್ವೀಟ್ ಸ್ಟಾಲ್ ಹುಡುಕುತ್ತಿದ್ದಾರೆ ಎನ್ನುವುದು ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸಿದರೆ ತಿಳಿಯುತ್ತದೆ. ಆದರೆ ಈಗ ಎಲ್ಲಾ ಅಂಗಡಿಗಳ ಜಾಮೂನುಗಳೂ ಆನ್‌ಲೈನ್‌ನಲ್ಲೇ ಸೋಲ್ಡ್ ಔಟ್ ಆಗಿರುವುದರಿಂದ ಅವರಿಗೆ ಸದ್ಯ ಜಾಮೂನು ಸಿಗುವುದು ಕಷ್ಟವೇ. ಸಿಕ್ಕರೂ ಅಲ್ಲಿ ಕೂಡ ಜಾಮೂನು ಮುಗಿದ ಮೇಲೆ ಅವರು ಕೂಡ ವಿಷವನ್ನೇ ಕೊಡುತ್ತಾರೆ ಎನ್ನುವುದನ್ನು ಮರೆಯಬಾರದು. ಸದ್ಯ ಅವರು ವಿಷಕಂಠನಾಗಿಯೇ ಇರಬೇಕಾಗುತ್ತದೆ. ಜಾಮೂನು ಸಿಕ್ಕಿದರೆ ಅವರ ಅದೃಷ್ಟ!

–ಮುಳ್ಳೂರು ಪ್ರಕಾಶ್, ಕನಕದಾಸ ನಗರ, ಮೈಸೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866-77284

ಬೆರಗು

...ರೇ... ಪ್ರಪಂಚದ ಸತ್ಯ ಮತ್ತು ಮಿಥ್ಯಗಳು!

> "ಕೆಲವರಿಗೆ ಒಂದು ಮಾನಸಿಕ ರೋಗವಿರುತ್ತದೆ. ನನಗೆ ಆ ಕೆಲಸ ಸಿಕ್ಕಿದ್ದರೆ, ನಾನು ಆಕೆ/ಆತನನ್ನು ಮದುವೆಯಾಗಿದ್ದರೆ, ನಾನು ಅವರ ಮಗನಾಗಿ/ಮಗಳಾಗಿ ಹುಟ್ಟಿದ್ದರೆ, ನಾನು ಇವರ ಸೊಸೆಯಾಗಿದ್ದರೆ/ಅಳಿಯನಾಗಿದ್ದರೆ...... ಹೀಗೆ ರೇ...ರೇ...ರೇ? ಪ್ರಪಂಚದಲ್ಲಿಯೇ ಇರುತ್ತಾರೆ. ಹಾಗಾಗಿ ಬಿಟ್ಟಿದ್ದರೆ ಅವರು ಅಂದುಕೊಂಡಂತೆ ಎಲ್ಲವೂ ಇರುತ್ತಿರಲಿಲ್ಲ. ಎಷ್ಟೋ ಜನ ಪ್ರೇಮಿಗಳು ಅನಿವಾರ್ಯ ಕಾರಣಗಳಿಂದ ತಾವು ಇಷ್ಟಪಟ್ಟವರನ್ನು ಮದುವೆಯಾಗಲು ಆಗದೆ ಬೇರೆಯವರನ್ನು ವರಿಸಬೇಕಾದ ಅನಿವಾರ್ಯತೆ ಉಂಟಾಗಿರುತ್ತದೆ. ಅವರು ಮದುವೆಯಾದವರ ಜೊತೆ ಸುಖಸಂಸಾರ ನಡೆಸುವುದ ಬಿಟ್ಟು ನಾನು ಅವನೊಟ್ಟಿಗೆ/ಅವಳೊಟ್ಟಿಗೆ ಇದ್ದರೆ ಸುಖವಾಗಿರುತ್ತಿದ್ದೆ ಎಂದು ಕನವರಿಸುತ್ತಿರುತ್ತಾರೆ. ಕೆಲವು ಮಂದಿ ಸಾಹಸ ಮಾಡಿ ದಾಂಪತ್ಯ ಮುರಿದುಕೊಂಡು ತಾವು ಇಷ್ಟ ಪಟ್ಟವರ ಜೊತೆ ಸಂಸಾರ ಮಾಡಲು ಮುಂದಾಗುತ್ತಾರೆ. ಆದರೆ ವಾಸ್ತವ ಅವರಿಗೆ ತಡವಾಗಿ ಅರಿವಾಗುತ್ತದೆ. ಪ್ರೇಮಿಯಾಗಿ ಚೆನ್ನಾಗಿ ನೋಡಿಕೊಳ್ಳುತ್ತಿದ್ದವನು, ಗಂಡನಾದ ನಂತರ ಅವನ ವರಸೆಯೇ ಬದಲಾಗಿರುತ್ತದೆ. ಅವನ ವರ್ತನೆ ಊಹೆಗೂ ಮೀರಿದಷ್ಟು ಕರಾಳವಾಗಿರುತ್ತದೆ. ಎಲ್ಲರನ್ನು ತ್ಯಜಿಸಿ ಪ್ರೇಮಿಗೋಸ್ಕರ ಬಂದವಳಿಗೆ ಭ್ರಮನಿರಸನವಾಗಿರುತ್ತದೆ. ಆದ್ದರಿಂದ ಬದುಕನ್ನು ಬಂದಂತೆ ಸ್ವೀಕರಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ರೇ ಪ್ರಪಂಚದ ಮತ್ತೊಂದು ಮುಖದ ಅರಿವಿದಲ್ಲದೆ ಸುಮ್ಮನೆ ಕೊರಗಬಾರದು.

ನಾವು ನಿರೀಕ್ಷಿಸಿದಂತೆ ನಮ್ಮ ಬದುಕು ಇರುವಂತಿದ್ದರೆ ಇಡೀ ಭೂಮಿ ಸ್ವರ್ಗ ಸದೃಶವಾಗಿರುತ್ತಿತ್ತು. 'ತಾನೊಂದು ಬಗೆದರೆ ದೈವವೊಂದು ಬಗೆದಂತೆ' ಎಂಬ ಮಾತಿನಂತೆ ಬದುಕು ನಾವು ಎಣಿಸಿದಂತೆ ಇರುವುದಿಲ್ಲ. ಎಣಿಕೆಯಂತೆ ನಡೆದರೆ ಅದರಲ್ಲಿ ಯಾವುದೇ ಸ್ವಾರಸ್ಯ ಇರುವುದಿಲ್ಲವೇನೋ? ಬದುಕಿನಲ್ಲಿ ಮುಂದಿನ ಕ್ಷಣ ಎಂಬುದು ನಿಗೂಢ ಹಾಗೂ ಅನಿರೀಕ್ಷಿತವಾಗಿರುತ್ತದೆ. ಕೆಲವರ ಬದುಕಿನಲ್ಲಿ ಅನಿರೀಕ್ಷಿತ ತಿರುವು ಸಿಕ್ಕಿ ದಿಢೀರ್ ಸಿರಿವಂತರಾದರೆ, ಮತ್ತೆ ಕೆಲವು ಸಿರಿವಂತರ ಬದುಕು ಅಷ್ಟೇ ಬೇಗ ಬೀದಿಗೆ ಬಂದುಬಿಟ್ಟಿರುತ್ತದೆ. ಶ್ರೀಮಂತರಾದರೆ ಅದು ಅದೃಷ್ಟ ಎಂತಲೂ, ಬಡವರಾಗಿಬಿಟ್ಟರೆ ದುರದೃಷ್ಟ ಎಂತಲೂ ಬಣ್ಣಿಸುತ್ತಾರೆ. ಅನೇಕರಿಗೆ ತಮ್ಮ ಸ್ಥಿತಿಗತಿ ಕುರಿತು ಸಮಾಧಾನ ಹೊಂದದೆ ಅಸಮಾಧಾನ ಹೊಂದಿರುತ್ತಾರೆ. ವಾಸ್ತವದ ಬದುಕಿನಲ್ಲಿ ಸಿಕ್ಕುವ ಆನಂದವನ್ನು ಬದಿಗೊತ್ತಿ, ತಮಗೆ ಒಲಿಯದ, ತಮ್ಮದಲ್ಲದ ಬದುಕನ್ನು ಬಯಸುವುದು ಸಹಜವಾಗಿಬಿಟ್ಟಿದೆ. ನಿಜಬದುಕನ್ನು ಸ್ವೀಕರಿಸಿ, ಜೀವನದಲ್ಲಿ ಸಿಕ್ಕುವ ಚಿಕ್ಕ ಚಿಕ್ಕ ಸಂತೋಷವನ್ನು ಅನುಭವಿಸುವುದ ಬಿಟ್ಟು ದೊಡ್ಡ ಸಂತೋಷಕ್ಕಾಗಿ ಹಾತೊರೆಯುತ್ತಿರುವುದು ದುರದೃಷ್ಟಕರ. ಇರುವ ಸುಖವನ್ನು ಸರಿಸಿ, ಇಲ್ಲದಕ್ಕಾಗಿ ಹಾತೊರೆದು ದುಃಖವನ್ನು ಕೊಂಡು ಪರಿತಪಿಸುತ್ತಿರುವುದು ವಿಷಾದಕರ ಸಂಗತಿ.



ಕೆಲವರಿಗೆ ಒಂದು ಮಾನಸಿಕ ರೋಗವಿರುತ್ತದೆ. ನನಗೆ ಆ ಕೆಲಸ ಸಿಕ್ಕಿದ್ದರೆ, ನಾನು ಆಕೆ/ಆತನನ್ನು ಮದುವೆಯಾಗಿದ್ದರೆ, ನಾನು ಅವರ ಮಗನಾಗಿ/ಮಗಳಾಗಿ ಹುಟ್ಟಿದ್ದರೆ, ನಾನು ಇವರ ಸೊಸೆಯಾಗಿದ್ದರೆ/ಅಳಿಯನಾಗಿದ್ದರೆ... ಹೀಗೆ ರೇ...ರೇ...ರೇ? ಪ್ರಪಂಚದಲ್ಲಿಯೇ ಇರುತ್ತಾರೆ. ಹಾಗಾಗಿ ಬಿಟ್ಟಿದ್ದರೆ ಅವರು ಅಂದುಕೊಂಡಂತೆ ಎಲ್ಲವೂ ಇರುತ್ತಿರಲಿಲ್ಲ. ಎಷ್ಟೋ ಜನ ಪ್ರೇಮಿಗಳು ಅನಿವಾರ್ಯ ಕಾರಣಗಳಿಂದ ತಾವು ಇಷ್ಟಪಟ್ಟವರನ್ನು ಮದುವೆಯಾಗಲು ಆಗದೆ ಬೇರೆಯವರನ್ನು ವರಿಸಬೇಕಾದ ಅನಿವಾರ್ಯತೆ ಉಂಟಾಗಿರುತ್ತದೆ. ಅವರು ಮದುವೆಯಾದವರ ಜೊತೆ ಸುಖಸಂಸಾರ ನಡೆಸುವುದ ಬಿಟ್ಟು ನಾನು ಅವನೊಟ್ಟಿಗೆ/ಅವಳೊಟ್ಟಿಗೆ ಇದ್ದರೆ ಸುಖವಾಗಿರುತ್ತಿದ್ದೆ ಎಂದು ಕನವರಿಸುತ್ತಿರುತ್ತಾರೆ. ಕೆಲವು ಮಂದಿ ಸಾಹಸ ಮಾಡಿ ದಾಂಪತ್ಯ ಮುರಿದುಕೊಂಡು ತಾವು ಇಷ್ಟ ಪಟ್ಟವರ ಜೊತೆ ಸಂಸಾರ ಮಾಡಲು ಮುಂದಾಗುತ್ತಾರೆ. ಆದರೆ ವಾಸ್ತವ ಅವರಿಗೆ ತಡವಾಗಿ ಅರಿವಾಗುತ್ತದೆ. ಪ್ರೇಮಿಯಾಗಿ ಚೆನ್ನಾಗಿ ನೋಡಿಕೊಳ್ಳುತ್ತಿದ್ದವನು, ಗಂಡನಾದ ನಂತರ ಅವನ ವರಸೆಯೇ ಬದಲಾಗಿರುತ್ತದೆ. ಅವನ ವರ್ತನೆ ಊಹೆಗೂ ಮೀರಿದಷ್ಟು ಕರಾಳವಾಗಿರುತ್ತದೆ. ಎಲ್ಲರನ್ನು ತ್ಯಜಿಸಿ ಪ್ರೇಮಿಗೋಸ್ಕರ ಬಂದವಳಿಗೆ ಭ್ರಮನಿರಸನವಾಗಿರುತ್ತದೆ. ಆದ್ದರಿಂದ ಬದುಕನ್ನು ಬಂದಂತೆ ಸ್ವೀಕರಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ರೇ ಪ್ರಪಂಚದ ಮತ್ತೊಂದು ಮುಖದ ಅರಿವಿಲ್ಲದೆ ಸುಮ್ಮನೆ ಕೊರಗಬಾರದು.

'ಇರುವ ಭಾಗ್ಯವ ನೆನೆದು ಬಾರೆನೆಂಬುದ ಬಿಡು ಹರುಷಕ್ಕಿದೆ ದಾರಿ' ಎಂದು ಡಿವಿಜಿ ಅವರು ತಮ್ಮ ಕಗ್ಗದಲ್ಲಿ ಸರಳವಾಗಿ ಹೇಳಿದ್ದಾರೆ. ಆದರೆ ಬಹುತೇಕ ಜನರು ಇರುವ ಪ್ರಪಂಚವನ್ನು ತ್ಯಜಿಸಲು ಬಯಸುತ್ತಾ, ಇಲ್ಲದಿರುವ 'ರೇ' ಪ್ರಪಂಚದಲ್ಲಿ ವಿಹರಿಸುತ್ತಾ ಸುಖ ಅನುಭವಿಸುತ್ತಾರೆ. ಅದನ್ನು ಹಗಲುಗನಸು ಎಂದು ಸಹ ಕರೆಯಬಹುದು. ಹಗಲುಗನಸು ನನಸಾಗುವ ಸಂಭವ ಕಡಿಮೆ. ಮನುಷ್ಯ ಮಹತ್ವಾಕಾಂಕ್ಷೆಯಿಂದ ಕನಸುಗಳನ್ನು ಬಹಳ ಪರಿಶ್ರಮ, ತ್ಯಾಗ, ನಿರಂತರ ಪ್ರಯತ್ನದಿಂದ ಮಾತ್ರ ಸಾಕಾರಗೊಳಿಸಿಕೊಳ್ಳಬಹುದು. ಅದಬಿಟ್ಟು ಸದಾ ವಿಶ್ರಾಂತಿ ಪಡೆಯುತ್ತಾ ಹಗಲುಗನಸು ಕಂಡರೆ ಬದುಕಿನಲ್ಲಿ ಏಳಿಗೆ ಹೊಂದಲು ಸಾಧ್ಯವಿಲ್ಲ. ಮನುಷ್ಯನಿಗೆ ಅನೇಕ ನಂಬಿಕೆಗಳಿವೆ ಅದರಲ್ಲಿ ಅದೃಷ್ಟ ಎಂಬ ಸಂಗತಿಯೂ ಸಹ ಒಂದು. ಜನರು ವಿದ್ಯಾವಂತರಾದರೂ ಬುದ್ಧಿವಂತರಾಗದೆ ಮೌಢ್ಯದ ಮೊರೆ ಹೋಗಿ ಇಂದಿಗೂ ಜ್ಯೋತಿಷಿಗಳು ಹೇಳುವ ನಿಧಿ, ಯೋಗ, ಸಂಪತ್ತು ದಿಢೀರ್ ವೃದ್ಧಿ ಕುರಿತು ಅನೇಕ ಪೂಜೆ, ವಾಮಾಚಾರ ನಡೆಸುವ ಅಭ್ಯಾಸ ಹೊಂದಿರುವುದು ವಿಪರ್ಯಾಸ. ಅನೇಕ ಜನ ಶ್ರೀಮಂತರು ರೈಸ್ ಪುಲ್ಲಿಂಗ್ ಪಾತ್ರೆಯಂತಹ ಗೋಲ್ ಮಾಲ್ ವ್ಯಾಪಾರಕ್ಕೆ ಮನಸೋತು ಲಕ್ಷಾಂತರ ರೂಪಾಯಿಯನ್ನು ಕಳೆದುಕೊಂಡಿರುವುದು ಸಹ ಉಂಟು.

'ಹೊನ್ನು ಮಾಯೆ ಎಂಬರು ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆ ಎಂಬರು ಹೆಣ್ಣು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ ಕಾಣ ಗುಹೇಶ್ವರ' ಎಂದು ವಚನಕಾರರಾದ ಅಲ್ಲಮಪ್ರಭುಗಳು ಹೇಳಿರುವುದು ಅಕ್ಷರಶಃ ಸತ್ಯವಾದ ಮಾತುಗಳು. ಮನುಷ್ಯನಿಗೆ ಇರುವ ಆಸೆ ಎಂಬ ಮಾಯೆ ಅವನ ವಿವೇಚನೆಯನ್ನೇ ಕಸಿದುಬಿಡುತ್ತದೆ. ಅನೇಕ ಬುದ್ಧಿವಂತರೂ ಎನಿಸಿಕೊಂಡವರು ಸಮ್ಮೋಹನಕ್ಕೆ ಒಳಗಾಗಿ ಮೋಸ ಹೋಗುತ್ತಾರೆ. ಕೆಲವರ ದುರಾಸೆಯ ದೌರ್ಬಲ್ಯವನ್ನು ಅರಿತು ಜಾಣರು ಅವರಿಗೆ ಗಾಳ ಹಾಕುತ್ತಾರೆ. ಅದಕ್ಕಾಗಿ ಅನೇಕ ರೀತಿಯ ಜಾಲಗಳು ಸಮಾಜದಲ್ಲಿ ಇಂದು ಚಾಲ್ತಿಯಲ್ಲಿವೆ. ದುರ್ಬಲ ಮನಸ್ಸಿನ ಜನರನ್ನು ತಮ್ಮ ಜಾಲದಲ್ಲಿ ಸಿಲುಕಿಸಿ, ಹಣ ಪೀಕಿಸುವುದಲ್ಲದೆ ಅವರಿಗೆ ಇರುವ ಅಲ್ಪಸ್ವಲ್ಪ ನೆಮ್ಮದಿಯನ್ನು ಕಸಿದು ಬಿಡುತ್ತಾರೆ.

ವಾಸ್ತು ಶಾಸ್ತ್ರ ಎಂಬುದು ಮೂಲಭೂತವಾಗಿ ಒಂದು ವೈಜ್ಞಾನಿಕ ಶಾಸ್ತ್ರ ಎನಿಸಿಕೊಂಡರೂ, ವಾಸ್ತು ಪಾಲನೆ ಮಾಡಿದ ಎಲ್ಲರಿಗೂ ಒಂದೇ ರೀತಿಯ ಫಲಿತಾಂಶ ದೊರೆತಿರುವುದಿಲ್ಲ. ಕುಟುಂಬದ ಅಭಿವೃದ್ಧಿಗೆ ವಾಸ್ತು ದೋಷ ಕಂಟಕವಾಗಿದ್ದು, ಸರಳ ವಾಸ್ತುವಿನ ಮೂಲಕ ಸರಿಪಡಿಸಲಾಗುವುದು ಎಂದು ಜನರಿಗೆ ಬಹುವಿಧದ ಮಾಧ್ಯಮಗಳ ಮುಖಾಂತರ ವ್ಯವಸ್ಥಿತ ಜಾಲ ಮುಟ್ಟುತ್ತದೆ. ಮನೆಗೆ ಭೇಟಿ ಕೊಟ್ಟು, ಕೆಲವು ಸಾಮಗ್ರಿಗಳನ್ನು ಕೊಟ್ಟು ಅವರು ನೀಡುವ ಸೂಚನೆಗಳನ್ನು ಪಾಲಿಸುವಂತೆ ಹೇಳಲಾಗುತ್ತದೆ. ಇದರಿಂದ ಅನೇಕರಿಗೆ ಒಂದು ರೀತಿಯ ಧನಾತ್ಮಕ ಮನೋಭಾವ ಮೂಡುತ್ತದೆ. ಆಗುವುದೆಲ್ಲಾ ಒಳ್ಳೆಯದಕ್ಕೆ ಆಗುತ್ತದೆ ಎಂಬ ಒಂದು ಕುರುಡು ನಂಬಿಕೆ ಮೂಡುತ್ತದೆ. ಆದರೆ ವಾಸ್ತವದಲ್ಲಿ ವಾಸ್ತು ಅಳವಡಿಸಿಕೊಂಡ ಮನೆಯವರ ಆರ್ಥಿಕ ಪರಿಸ್ಥಿತಿ ವೃದ್ಧಿಯಾಗುತ್ತದೋ ಇಲ್ಲವೋ, ಆದರೆ ವಾಸ್ತು ಮಾಡಿಕೊಟ್ಟ ಸಂಸ್ಥೆಯವರು ಮಾತ್ರ ಕೆಲವೇ ದಿನಗಳಲ್ಲಿ ಕೋಟ್ಯಾಧಿಪತಿಗಳಾಗಿಬಿಡುತ್ತಾರೆ. ಇಲ್ಲಿಯೂ ಅಷ್ಟೇ ಮನುಷ್ಯನಿಗೆ ರೇ... ಪ್ರಪಂಚದ ಕನವರಿಕೆಗಳು ಅಷ್ಟೇ !

2022 ಜುಲೈ ತಿಂಗಳಿನಲ್ಲಿ ಹುಬ್ಬಳ್ಳಿ ನಗರದಲ್ಲಿ ನಡೆದ ಒಂದು ಘಟನೆ ಇಡೀ ರಾಜ್ಯವನ್ನೇ ಬೆಚ್ಚಿ ಬೀಳಿಸಿತ್ತು. ಹುಬ್ಬಳ್ಳಿಯ ಪ್ರತಿಷ್ಠಿತ ಹೋಟೆಲ್ ಒಂದರಲ್ಲಿ ಸರಳ ವಾಸ್ತು ತಜ್ಞ ಚಂದ್ರಶೇಖರ್ ಗುರೂಜಿ ಅವರನ್ನು ಅವರ ಸಂಸ್ಥೆಯ ಮಾಜಿ ನೌಕರರೇ ಹಾಡುಹಗಲೇ ಅಮಾನುಷವಾಗಿ ಹತ್ಯೆ ಮಾಡಿದರು. ಈ ಘಟನೆ ಅನೇಕ ಚಿಂತನೆಗಳಿಗೆ ದೂಡಿತು. ಇಡೀ ರಾಜ್ಯದಲ್ಲಿ ವಾಸ್ತು ವಿಷಯದಲ್ಲಿ ಮನೆಮಾತಾಗಿದ್ದ ಚಂದ್ರಶೇಖರ್ ಗುರೂಜಿ ಅವರ ಅಂತ್ಯ ಅನಿರೀಕ್ಷಿತ ಹಾಗೂ ಆಘಾತಕಾರಿಯಾಗಿತ್ತು. ಸಾವಿರಾರು ಮನೆಗಳ ಸಮಸ್ಯೆಗಳಿಗೆ ಪರಿಹಾರ ಸೂಚಿಸಿದ್ದ ಗುರೂಜಿ ಅವರ ಮನೆ ವಾಸ್ತು ಸರಿಯಿರಲಿಲ್ಲವೇ? ಗುರೂಜಿ ಅವರು ಸ್ವಯಂ ರಕ್ಷಣೆ ಮಾಡಿಕೊಳ್ಳುವಲ್ಲಿ ವಿಫಲರಾದ ಹಿನ್ನೆಲೆಯಲ್ಲಿ ಇವರು ಸೂಚಿಸಿದ್ದ ಸರಳ ವಾಸ್ತು ತಂತ್ರಗಳು ನಿಜವಾಗಿಯೂ ಫಲಿಸುತ್ತವೆಯೇ? ಎಂಬಿತ್ಯಾದಿ ಪ್ರಶ್ನೆಗಳು ಸಾಮಾನ್ಯ ಜನರಲ್ಲಿ ಮೂಡದೇ ಇರಲಿಲ್ಲ.

ಮನುಷ್ಯ ಪರಿಶ್ರಮದಿಂದ ಗಳಿಸಿದ ಹಣದಲ್ಲಿ ಬದುಕನ್ನು ರೂಪಿಸಿಕೊಂಡರೆ ನಿಜಕ್ಕೂ ಬದುಕು ಹಸನಾಗುತ್ತದೆ. ಅವರಿವರ ಬದುಕಿನ ಅನುಕರಣೆ ಮಾಡಲು ಹೋಗುವುದರಿಂದಲೇ ಅನೇಕ ಅವಘಡಗಳು ಸಂಭವಿಸುತ್ತವೆ. ಇತಿಮಿತಿ ಅರಿತು ಬದುಕಿದರೆ ಬದುಕು ಹೊರೆ ಎನಿಸದು. ಮಿತಿಮೀರಿ ಬದುಕುವುದರಿಂದಲೇ ಜೀವನ ದುಸ್ತರ ಎನಿಸುತ್ತಿದೆ. ಕಲ್ಪನೆಯಲ್ಲಿ ಬದುಕುವುದಕ್ಕಿಂತ ವಾಸ್ತವದಲ್ಲಿ ಬದುಕುವ ಅಭ್ಯಾಸ ಒಳ್ಳೆಯದು. ಎಷ್ಟೋ ಜನರಿಗೆ ಇದರ ಅರಿವು ಇರುವುದಿಲ್ಲ. ಸಾಲ ಮಾಡಿಯಾದರೂ ತುಪ್ಪ ತಿನ್ನು ಎನ್ನುವ ಮಾತಿನಂತೆ ಅನ್ಯರಂತೆ ತಾವು ಬದುಕಬೇಕು ಎಂದು ಪ್ರತಿಷ್ಠೆಗೆ ಬಿದ್ದು, ತಮ್ಮದಲ್ಲದ ಬದುಕನ್ನು ರೂಪಿಸಿಕೊಳ್ಳಲು ಮುಂದಾಗುತ್ತಾರೆ. ಎಷ್ಟೋ ಜನ ಹರ್ಷದ ಕೂಳಿಗೆ ವರ್ಷದ ಕೂಳು ಕಳೆದುಕೊಂಡಂತೆ ಎಂಬಂತೆ ಸಣ್ಣಪುಟ್ಟ ಮನೆ ಕಾರ್ಯಗಳನ್ನು ಸಾರ್ವಜನಿಕ ಕಾರ್ಯಗಳಂತೆ ಸಾಲ ಮಾಡಿ ಖರ್ಚು ಮಾಡುತ್ತಾರೆ. ಒಂದು ದಿನದ ಸಮಾರಂಭದ ಖರ್ಚಿನ ಸಾಲವನ್ನು ತೀರಿಸಲು ವರ್ಷಾನುಗಟ್ಟಲೆ ಪರಿಶ್ರಮ ಪಡುತ್ತಾರೆ. ದೈಹಿಕ ಯಾತನೆ ಅಷ್ಟೇ ಅಲ್ಲದೆ ಮಾನಸಿಕವಾಗಿ ನೋವನ್ನು ಅನುಭವಿಸುತ್ತಾರೆ.

ಮನುಷ್ಯ ದಿಢೀರ್ ಶ್ರೀಮಂತಿಕೆ ಗಳಿಸಬೇಕೆಂಬ ದುರಾಸೆಯಿಂದಲೇ ವಾಮಮಾರ್ಗವನ್ನು ಹುಡುಕುತ್ತಿರುತ್ತಾನೆ. ಆಮಿಷಗಳಿಗೆ ಬಲಿಯಾಗುವುದು ಮನುಷ್ಯನ ದೌರ್ಬಲ್ಯಗಳಲ್ಲಿ ಒಂದು. ನಿಮ್ಮ ಫೋನ್ ನಂಬರ್ ಲಕ್ಕಿ ಡ್ರಾನಲ್ಲಿ ಆಯ್ಕೆಯಾಗಿದ್ದು, ನಿಮಗೆ ದುಬಾರಿ ಬೆಲೆಯ ಕೊಡುಗೆಯನ್ನು ಮನೆಗೆ ತಲುಪಿಸಬೇಕಿದೆ, ಅದಕ್ಕೆ ಇಂತಿಷ್ಟು ಶುಲ್ಕ ಪಾವತಿಸಬೇಕು ಎಂದು ದೂರವಾಣಿ ಕರೆ ಮಾಡಿ ತಿಳಿಸುತ್ತಾರೆ. ಸುಖಾಸುಮ್ಮನೆ ಮನೆಗೆ ದುಬಾರಿ ಬೆಲೆ ಕೊಡುಗೆ ಬರುತ್ತದೆ ಎಂದು ಆಸೆಗೆ ಬಿದ್ದು, ಅವರು ಹೇಳಿದ ಮೊತ್ತವನ್ನು ಅವರ ಖಾತೆಗೆ ವರ್ಗಾವಣೆ ಮಾಡುತ್ತಾರೆ. ಆದರೆ ಎಷ್ಟೇ ದಿನವಾದರೂ ಕೊಡುಗೆ ಮನೆಗೆ ಬರುವುದಿಲ್ಲ. ದೂರವಾಣಿ ಕರೆಗೆ ಕರೆ ಮಾಡಿದರೆ ಅದು ಚಾಲ್ತಿಯಲ್ಲಿ ಇರುವುದಿಲ್ಲ. 'ಅತಿಯಾಸೆ ಗತಿಕೇಡು' ಎಂಬಂತೆ ಅನೇಕ ಜನ ತಿಳಿದವರೆ ಹಿಂದೆ ಮುಂದೆ ನೋಡದೆ ಹಣ ಕಳೆದುಕೊಂಡು ಬೆಪ್ಪರಾಗಿರುತ್ತಾರೆ.

ಕಲ್ಪನೆ ಮನುಷ್ಯನಿಗೆ ಸುಖ ಕೊಡಬಹುದು, ಆದರೆ ಅದು ಕ್ಷಣಿಕ. ವಾಸ್ತವ ಕೊಡುವ ಸುಖಕ್ಕೆ ಆಯಸ್ಸು ಜಾಸ್ತಿ. ಆದ್ದರಿಂದ ಇಲ್ಲಸಲ್ಲದ ಆಸೆಗಳನ್ನು ಹೊಂದುವ ಬದಲು ಸಾಧ್ಯತೆಗಳ ಕುರಿತು ಚಿಂತಿಸಿ, ಯಶಸ್ಸಿಗೆ ಪರಿಶ್ರಮವಲ್ಲದೆ ಬೇರೇನೂ ಅಡ್ಡದಾರಿ ಇಲ್ಲ ಎಂದು ಅರಿತು, ತಮ್ಮ ಬುದ್ಧಿಶಕ್ತಿಯಿಂದ ಬದುಕನ್ನು ನಡೆಸಿದರೆ ಬದುಕು ಆನಂದವನ ಎನಿಸುತ್ತದೆ. ಯಾರದೋ ಬದುಕನ್ನು ಕನಸು ಕಾಣುತ್ತಾ ಕುಳಿತರೆ ಇರುವ ಬದುಕಿನ ಸುಖವನ್ನು ಕಳೆದುಕೊಳ್ಳಬೇಕಾಗುತ್ತದೆ. ಅಂದಹಾಗೆ ಸಂತೋಷ ಎಂಬುದು ಹೊರಗೆ ಎಲ್ಲೋ ಸಿಗುವ ಸಂಗತಿ ಅಲ್ಲ. ಅದೊಂದು ಆಂತರಿಕ ಅನುಭೂತಿ. ಅದನ್ನು ಅರಿಯುವ ಪ್ರಯತ್ನವಾಗಬೇಕಷ್ಟೆ. ಹೀಗಾಗಿ ಬಿಟ್ಟರೆ, ಹಾಗಾಗಿಬಿಟ್ಟರೆ ನಾವು ಉಳಿದ ಜೀವನ ಸುಖವಾಗಿ ಬಾಳಬಹುದು ಎಂದು ಭ್ರಮಿಸುವುದು ಬೇಡ. ನಿಮ್ಮ ಸ್ಥಾನಮಾನ ಅನೇಕ ಜನರ ಕನಸಿನ ತಾಣವಾಗಿರುತ್ತದೆ. ಅದನ್ನು ಅರಿತು ಬಾಳುವುದೇ ಸ್ವರ್ಗಸುಖ. ಏನಂತೀರಿ?

ಪದ ತಾಂಬೂಲ: ಹಣೆಬರಹ ಬದುಕಿನ ಗತಿಯನ್ನು ಬದಲಿಸದೇ ಇರಬಹುದು, ಆದರೆ ಹಣೆ ಬೆವರು ಖಂಡಿತಾ ಬದಲಿಸುತ್ತದೆ.

ನೆದರ್ಲೆಂಡ್ಸ್ ವಿರುದ್ಧ ಭಾರತಕ್ಕೆ ಗೆಲುವಿನ 'ಶ್ರೇಯಸ್ಸು'

ಸೋಲಿನೊಂದಿಗೆ ವಿದಾಯ ಹೇಳಿದ ಡಚ್ಚರು



ಬೆಂಗಳೂರು, ನ.12– ಕನ್ನಡಿಗ ಕೆ.ಎಲ್. ರಾಹುಲ್ ಹಾಗೂ ಶ್ರೇಯಸ್ ಅಯ್ಯರ್ ಅವರುಗಳ ಅವೋಘ ಶತಕಗಳ ನೆರವಿನಿಂದ ಭಾರತ ನೆದರ್ಲೆಂಡ್ಸ್ ವಿರುದ್ಧ 160 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಲೀಗ್ ಹಂತದ ಎಲ್ಲಾ 9 ಪಂದ್ಯಗಳನ್ನು ಗೆಲ್ಲುವ ಮೂಲಕ ಭಾರತ ಅಜೇಯವಾಗಿ ಸೆಮೀಸ್‌ಗೆ ಮುನ್ನಡೆಯಿತು. ಮತ್ತೊಂದೆಡೆ ನೆದರ್ಲೆಂಡ್ಸ್ ಸೋಲಿನೊಂದಿಗೆ ವಿಶ್ವಕಪ್‌ಗೆ ವಿದಾಯ ಹೇಳಿತು.

ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತಕ್ಕೆ ಆರಂಭಿಕರಾದ ನಾಯಕ ರೋಹಿತ್ ಶರ್ಮಾ ಹಾಗೂ ಶುಭ್‌ಮನ್ ಗಿಲ್ ಮೊದಲ ವಿಕೆಟ್‌ಗೆ 73 ಎಸೆತಗಳಲ್ಲಿ 100 ರನ್‌ಗಳ ಜೊತೆಯಾಟವಾಡಿ ಉತ್ತಮ ಅಡಿಪಾಯ ಹಾಕಿಕೊಟ್ಟರು. ಇನ್ನಿಂಗ್ಸ್ ಆರಂಭದಿಂದಲೂ ಸ್ಫೋಟಕ ಆಟವಾಡಿದ ಗಿಲ್ 32 ಎಸೆತಗಳಲ್ಲಿ 4 ಸಿಕ್ಸರ್, 3 ಬೌಂಡರಿ ಒಳಗೊಂಡ 51 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಉತ್ತಮ ಆಟವಾಡಿದ ರೋಹಿತ್ ಶರ್ಮಾ ಕೂಡ 54 ಎಸೆತಗಳಲ್ಲಿ 2 ಸಿಕ್ಸರ್, 8 ಬೌಂಡರಿ ಒಳಗೊಂಡ 61 ರನ್ ಗಳಿಸಿದ್ದ ವೇಳೆ ಭಾರಿ ಹೊಡೆತಕ್ಕೆ ಮುಂದಾಗಿ ನಿರ್ಗಮಿಸಿದರು. ನಂತರ ಬಂದ ವಿರಾಟ್ ಕೊಹ್ಲಿ ಕೂಡ 51ರನ್ ಗಳಿಸಿ ಔಟಾದರು. ಬಳಿಕ ಜೊತೆಯಾದ ಶ್ರೇಯಸ್ ಅಯ್ಯರ್, ಕೆ.ಎಲ್.ರಾಹುಲ್ ದ್ವಿಶತಕದ ಜೊತೆಯಾಟವಾಡಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಅಬ್ಬರದ ಆಟವಾಡಿದ ಶ್ರೇಯಸ್ ಅಯ್ಯರ್ 94 ಎಸೆತಗಳಲ್ಲಿ 10 ಬೌಂಡರಿ, 5 ಸಿಕ್ಸರ್ ಒಳಗೊಂಡ 128ರನ್ ಗಳಿಸಿ ಅಜೇಯರಾಗಿ ಉಳಿದರು. ಮತ್ತೊಂದೆಡೆ ಕೆ.ಎಲ್. ರಾಹುಲ್ 64 ಎಸೆತಗಳಲ್ಲಿ, 11 ಬೌಂಡರಿ, 4 ಸಿಕ್ಸರ್ ಒಳಗೊಂಡ 102 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅಂತಿಮವಾಗಿ ಭಾರತ 4 ವಿಕೆಟ್ ನಷ್ಟಕ್ಕೆ 410 ರನ್ ಗಳಿಸಿತು.

ನೆದರ್ಲೆಂಡ್ಸ್ ಪರ ಬಾಸ್ ಡಿ ಲೀಡೆ 2, ಪಾಲ್ ವ್ಯಾನ್ ಮೀಕೆರೆನ್ ಮತ್ತು ರೋಲೋಫ್ ವ್ಯಾನ್‌ಡೆರ್ ಮೆರ್ವೆ ತಲಾ ಒಂದೊಂದು ವಿಕೆಟ್ ಪಡೆದರು.

ಭಾರತ ನೀಡಿದ 411 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ನೆದರ್ಲೆಂಡ್ಸ್ 47.5 ಓವರ್‌ಗಳಲ್ಲೇ 250 ರನ್‌ಗಳಿಗೆ ಸರ್ವಪತನ ಕಂಡಿತು. ತಂಡದ ಪರ ತೇಜ ನಿಡಮನೂರು 54, ಸೈಬ್ರಾಂಡ್ ಎಂಗಲ್‌ಬ್ರೆಕ್ಟ್ 45, ಕಾಲಿನ್ ಅಕರ್ಮನ್ 35, ಮ್ಯಾಕ್ಸ್ ಒ'ಡೌಡ್ 30, ಸ್ಕಾಟ್ ಎಡ್ವರ್ಡ್ಸ್ 17, ಬಾಸ್ ಡಿ ಲೀಡೆ 12, ಲೋಗನ್ ವ್ಯಾನ್ ಬೀಕ್, ರೋಲೋಫ್ ವ್ಯಾನ್ ಡೆರ್ ಮೆರ್ವೆ ತಲಾ 16 ರನ್ ಗಳಿಸಿದರು. ಭಾರತದ ಪರ ಜಸ್ಪ್ರೀತ್ ಬುಮ್ರಾ, ಮೊಹಮ್ಮದ್ ಸಿರಾಜ್, ಕುಲ್ದೀಪ್ ಯಾದವ್, ರವೀಂದ್ರ ಜಡೇಜಾ ತಲಾ 2, ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು. ಪಂದ್ಯದಲ್ಲಿ ಭರ್ಜರಿ ಶತಕ ಸಿಡಿಸಿದ ಶ್ರೇಯಸ್ ಅಯ್ಯರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಲೀಗ್ ಪಂದ್ಯಗಳು ಮುಕ್ತಾಯ: ವಿಶ್ವಕಪ್ ಪಂದ್ಯಾವಳಿಯ ಲೀಗ್ ಪಂದ್ಯಗಳು ಭಾನುವಾರ ಮುಕ್ತಾಯವಾಗಿದ್ದು, ಅಂತಿಮವಾಗಿ ಭಾರತ, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ ಹಾಗೂ ನ್ಯೂಜಿಲೆಂಡ್ ತಂಡಗಳು ಸೆಮಿಫೈನಲ್‌ಗೆ ಲಗ್ಗೆ ಹಾಕಿವೆ. ಉಳಿದಂತೆ ಪಾಕಿಸ್ತಾನ, ಅಫ್ಘಾನಿಸ್ತಾನ, ಇಂಗ್ಲೆಂಡ್, ಬಾಂಗ್ಲಾದೇಶ, ಶ್ರೀಲಂಕಾ ಹಾಗೂ ನೆದರ್ಲೆಂಡ್ಸ್ ತಂಡಗಳು ಲೀಗ್ ಹಂತದಿಂದಲೇ ಟೂರ್ನಿಯಿಂದ ಹೊರಬಿದ್ದಿವೆ. ಅಕ್ಟೋಬರ್ ನ.15ರಂದು ಭಾರತ/ನ್ಯೂಜಿಲೆಂಡ್ ನಡುವೆ ಮೊದಲ ಸೆಮಿಫೈನಲ್ ಪಂದ್ಯ ಮುಂಬೈನಲ್ಲಿ ನಡೆಯಲಿದ್ದು, ನ.16ರಂದು ದಕ್ಷಿಣ ಆಫ್ರಿಕಾ ಹಾಗೂ ಆಸ್ಟ್ರೇಲಿಯಾ ನಡುವೆ 2ನೇ ಸೆಮಿಫೈನಲ್ ಪಂದ್ಯ ಕೋಲ್ಕತ್ತಾದಲ್ಲಿ ನಡೆಯಲಿದೆ. ಉಳಿದಂತೆ ನ.19 ರಂದು ಫೈನಲ್ ಅಹಮದಾಬಾದ್‌ನಲ್ಲಿ ನಡೆಯಲಿದೆ.

ಇಸ್ರೇಲ್-ಹಮಾಸ್ ಯುದ್ಧ: ಗಾಜಾದ ಅಲ್-ಶಿಫಾ ಆಸ್ಪತ್ರೆ ಕಾರ್ಡಿಯಾಕ್ ವಾರ್ಡ್ ನಾಶ

ಗಾಜಾ, ನ12– ಇಸ್ರೇಲ್ ಹಾಗೂ ಹಮಾಸ್ ನಡುವಿನ ಯುದ್ಧ ಮುಂದುವರೆದಿದ್ದು, ಗಾಜಾದ ಅತಿದೊಡ್ಡ ಆಸ್ಪತ್ರೆಯಾದ ಅಲ್-ಶಿಫಾವನ್ನು ಇಸ್ರೇಲ್ ಸೇನೆ ಸುತ್ತುವರೆದಿದ್ದು, ಆಸ್ಪತ್ರೆ ಸಮೀಪದಲ್ಲಿ ವೈಮಾನಿಕ ದಾಳಿ ಸೇರಿದಂತೆ ಬಾಂಬ್ ಸ್ಫೋಟಗಳು ನಡೆಯುತ್ತಿರುವುದರಿಂದ ಆಸ್ಪತ್ರೆಯ ಕಾರ್ಡಿಯಾಕ್ ವಾರ್ಡ್ ನಾಶವಾಗಿದೆ ಎಂದು ಆಸ್ಪತ್ರೆಯ ನಿರ್ದೇಶಕ ಮೊಹಮ್ಮದ್ ಅಬು ಸಲ್ಮಿಯಾ ಶನಿವಾರ ತಡರಾತ್ರಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಆಸ್ಪತ್ರೆಯೊಳಗೆ ಶಸ್ತ್ರಚಿಕಿತ್ಸೆಯಾದ 600 ರೋಗಿಗಳು, 37 ರಿಂದ 40 ಶಿಶುಗಳು ಮತ್ತು 17 ಜನರು ತೀವ್ರ ನಿಗಾ ಘಟಕದಲ್ಲಿದ್ದು, ಅವರಿಗೆ ನೀರು, ವಿದ್ಯುತ್, ಆಹಾರ ಅಥವಾ ಇಂಟರ್‌ನೆಟ್ ದೊರೆಯದಂತಾಗಿದೆ. ಅಪಾರ ಸಂಖ್ಯೆಯ ಜನರು ಆಸ್ಪತ್ರೆಯ ಆವರಣದಲ್ಲಿ ಆಶ್ರಯ ಪಡೆಯುತ್ತಿದ್ದಾರೆ ಎಂದು ಶಸ್ತ್ರಚಿಕಿತ್ಸಕ ಮೊಹಮ್ಮದ್ ಒಬೇದ್ ಹೇಳಿದ್ದಾರೆ.

ಕದನ ವಿರಾಮದೊಂದಿಗೆ ತಕ್ಷಣವೇ ಈ ರಕ್ತಪಾತವನ್ನು ನಿಲ್ಲಿಸದಿದ್ದರೆ ಅಥವಾ ರೋಗಿಗಳ ವೈದ್ಯಕೀಯ ಸ್ಥಳಾಂತರಿಸುವಿಕೆಯನ್ನು ನಿಲ್ಲಿಸದಿದ್ದರೆ, ಈ ಆಸ್ಪತ್ರೆಗಳು ಶವಾಗಾರವಾಗುತ್ತವೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ. ಭಾನುವಾರ ಇಸ್ರೇಲಿ ಪಡೆಗಳು ಮತ್ತು ಹಮಾಸ್ ನಡುವಿನ ಭಾರಿ ಹೋರಾಟದಲ್ಲಿ ಗಾಜಾದ ಆಸ್ಪತ್ರೆಗಳಲ್ಲಿ ಸಾವಿರಾರು ಜನರು ಸಿಕ್ಕಿಬಿದ್ದಿದ್ದಾರೆ. ಕದನ ವಿರಾಮ ಇಲ್ಲದಿದ್ದರೆ ರೋಗಿಗಳಿಗೆ ಸೌಲಭ್ಯ ದೊರೆಯದೆ ಸಾಯುತ್ತಾರೆ ಎಂದು ವೈದ್ಯರು ಮತ್ತು ಸಹಾಯ ಕಾರ್ಯಕರ್ತರು ಎಚ್ಚರಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಒಬ್ಬ ವ್ಯಕ್ತಿಯನ್ನು ಮುಂದಿಟ್ಟುಕೊಂಡು ಬಿಜೆಪಿ ರಾಜಕೀಯ ಮಾಡಲ್ಲ



ಶಿವಮೊಗ್ಗ, ನ.12–ನಮ್ಮ ಪಕ್ಷವು ಸಾಮೂಹಿಕ ನಾಯಕತ್ವವನ್ನು ಬಯಸುತ್ತದೆ ಮತ್ತು ಒಬ್ಬ ವ್ಯಕ್ತಿಯನ್ನು ಮುಂದಿಟ್ಟುಕೊಂಡು ರಾಜಕೀಯ ಮಾಡುವುದಿಲ್ಲ ಎಂದು ಬಿಜೆಪಿ ಹಿರಿಯ ಮುಖಂಡರೂ ಆದ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಜಯೇಂದ್ರ ಅವರು ಸಂಪೂರ್ಣ ನಾಯಕತ್ವ ವಹಿಸಿಕೊಂಡಿದ್ದಾರೆ ಎಂದು ಭಾವಿಸುವುದು ಸರಿಯಲ್ಲ. ನಮ್ಮ ಪಕ್ಷವು ಎಲ್ಲರಿಗೂ ಮನ್ನಣೆ ನೀಡುತ್ತಿದ್ದು, ಎಲ್ಲರ ಸಹಕಾರದಿಂದ ಪಕ್ಷ ಮುನ್ನಡೆಯಲಿದೆ ಎಂದರು.

2024ರ ಲೋಕಸಭೆ ಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸವನ್ನು ವ್ಯಕ್ತಪಡಿಸಿದರು. ಲೋಕಸಭೆ ಚುನಾವಣೆ ಸಮೀಪಿಸುತ್ತಿದೆ. ಇಡೀ ದೇಶವೇ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸಂಭ್ರಮಿಸುತ್ತಿದೆ. ಕಳೆದ ಚುನಾವಣೆಯ ಸಂದರ್ಭದಲ್ಲಿಯೂ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರವಿತ್ತು. ಆಗಲೂ ನಮ್ಮ ರಾಜ್ಯದಲ್ಲಿ ಬಿಜೆಪಿ 26 ಲೋಕಸಭಾ ಸ್ಥಾನಗಳನ್ನು ಗೆದ್ದಿದ್ದರೆ, ಕಾಂಗ್ರೆಸ್ ಕೇವಲ ಒಂದು ಸ್ಥಾನ ಗೆದ್ದಿತ್ತು. ಅದರಂತೆ ಈ ಬಾರಿಯೂ ಲೋಕಸಭೆ ಚುನಾವಣೆಯಲ್ಲಿ ಕಳೆದ ಬಾರಿಗಿಂತ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದ್ದೇವೆ ಎಂದು ಹೇಳಿದರು.

ಪಕ್ಷದ ಸ್ಥಾನಮಾನವನ್ನು ಲೆಕ್ಕಿಸದೆ, ಇಲ್ಲಿ ಎಲ್ಲರೂ ಕಾರ್ಯಕರ್ತರು. ಪ್ರಧಾನಿ ನರೇಂದ್ರ ಮೋದಿ ಕೂಡ ಕಾರ್ಯಕರ್ತರು. ಜೊತೆಗೆ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ನೂರಾರು ಕಾಂಗ್ರೆಸ್‌ಗಳಿವೆ ಮತ್ತು ದೇಶದಲ್ಲಿ ಬಿಜೆಪಿ ಏಕೈಕ ಪಕ್ಷವಾಗಿದೆ. ನಮ್ಮ ರಾಷ್ಟ್ರೀಯ ನಾಯಕರು ನಮಗೆ ನೀಡಿದ ರಾಷ್ಟ್ರೀಯತೆಯ ಪಾಠವೇ ಇದಕ್ಕೆ ಕಾರಣ. ಇದುವೇ ನಮ್ಮ ಪಕ್ಷದ ಒಗ್ಗಟ್ಟಿಗೂ ಕಾರಣವಾಗಿದೆ ಎಂದು ಅವರು ಹೇಳಿದರು.

ಕರ್ನಾಟಕದಲ್ಲಿಯೂ ಕಾಂಗ್ರೆಸ್ ಪಕ್ಷದಲ್ಲಿ ನೂರಾರು ಬಿರುಕುಗಳಿದ್ದು, ಮುಂದಿನ ದಿನಗಳಲ್ಲಿ ಯಾವ ಪ್ರಮಾಣದಲ್ಲಿ ಬಿರುಕು ಮೂಡಿದೆ ಎಂಬುದು ಜನರ ಮುಂದೆ ಬರಲಿದೆ. 5 ವರ್ಷ ನಾನೇ ಮುಖ್ಯಮಂತ್ರಿ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ದೇವರ ದಯೆಯಿದ್ದರೆ, ನಾನು ಮುಖ್ಯಮಂತ್ರಿಯಾಗುತ್ತೇನೆ ಎಂದು ಪರಮೇಶ್ವರ್ ಹೇಳಿದ್ದಾರೆ. ಈ ರೇಸ್‌ನಲ್ಲಿ ಪ್ರಿಯಾಂಕ ಖರ್ಗೆ, ಸತೀಶ್ ಜಾರಕಿಹೊಳಿ ಮತ್ತು ಡಿಕೆ ಶಿವಕುಮಾರ್ ಕೂಡ ಸೇರಿಸಿದ್ದಾರೆ. ಇದನ್ನು ನೋಡಿದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಒಡೆದ ಮನೆಯಂತಾಗಿದ್ದು, ಬಿಜೆಪಿ ಒಗ್ಗಟ್ಟಿನಿಂದ ಕೂಡಿದೆ ಎಂಬುದು ಗೊತ್ತಾಗುತ್ತದೆ. ಲೋಕಸಭೆ ಚುನಾವಣೆಯಲ್ಲಿ ಪಕ್ಷ ಎಲ್ಲಾ ಸ್ಥಾನಗಳನ್ನು ಗೆಲ್ಲುತ್ತದೆ ಮತ್ತು ಯುವಕರ ಬಲದೊಂದಿಗೆ ನಾವು ಮುನ್ನಡೆಯುತ್ತೇವೆ ಎಂದು ವಿಜಯೇಂದ್ರ ಅವರು ಹೇಳಿದರು.

ಬಿ.ಗೌರಮ್ಮ ನಿಧನ



ಮೈಸೂರು,ನ.12–ಮೈಸೂರಿನ ವಿಜಯನಗರ 2ನೇ ಹಂತದ ಸ್ನೇಕ್ ಶ್ಯಾಮ್ ರಸ್ತೆ ನಿವಾಸಿ ಹಿನಕಲ್‌ಹುಂಡಿ ಶಾಲೆಯ ನಿವೃತ್ತ ಟೀಚರ್ ಬಿ.ಗೌರಮ್ಮ(71) ಅವರು ಇಂದು ಸಂಜೆ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು–ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಸೋಮವಾರ) ಮಧ್ಯಾಹ್ನ ಗೋಕುಲಂನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ವಾರ್ಷಿಕ 3500 ಸೈಬರ್ ಕ್ರೈಂ ಪ್ರಕರಣ ದಾಖಲು

● ಮೈಗ್ರಾಪ ಸಭೆಯಲ್ಲಿ ಸೆನ್ ಠಾಣೆ ಸಬ್ ಇನ್ಸ್‌ಪೆಕ್ಟರ್ ಅನಿಲ್‌ಕುಮಾರ್ ಮಾಹಿತಿ ● ಸೈಬರ್ ಕ್ರೈಂ ಅಭೇದ್ಯ ಕೋಟೆ ಭೇದಿಸುವುದು ಕಷ್ಟ... ಕಷ್ಟ... ● ಅಪರಿಚಿತರೊಂದಿಗೆ ವೈಯಕ್ತಿಕ ವಿವರ ಹಂಚಿಕೊಳ್ಳಬೇಡಿ ● ಹಿರಿಯ ನಾಗರಿಕರೇ ಟಾರ್ಗೆಟ್ ● ಅಪರಾಧ ತಡೆಗೆ ಜಾಗೃತಿ ಅಗತ್ಯ



ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯಲ್ಲಿರುವ ಮೈಸೂರು ಗ್ರಾಹಕ ಪರಿಷತ್ ಕಚೇರಿ ಸಭಾಂಗಣದಲ್ಲಿ ಮೈಗ್ರಾಪ ಸಭೆಯಲ್ಲಿ ಸೈಬರ್ ಕ್ರೈಂ ಹೆಚ್ಚಳ ಕುರಿತು ಸೆನ್ ಠಾಣೆ ಸಬ್‌ಇನ್ಸ್‌ಪೆಕ್ಟರ್ ಅನಿಲ್ ಕುಮಾರ್ ಅವರು, ಸದಸ್ಯರಿಗೆ ಮಾಹಿತಿ ನೀಡಿದರು.

ಮೈಸೂರು, ನ.12(ಎಸ್‌ಪಿಎನ್)– ಇಲಾಖೆಗಳ ನಡುವಿನ ಸಮನ್ವಯತೆ ಕೊರತೆಯಿಂದಾಗಿ ಸೈಬರ್ ಅಪರಾಧಗಳ ಹೆಚ್ಚಳ... ಸೈಬರ್ ಅಪರಾಧ ಕೃತ್ಯದಲ್ಲಿ ಭಾಗಿಯಾದವರ ಅಭೇದ್ಯ ಕೋಟೆ ಭೇದಿಸುವುದು ಕಷ್ಟ ಕಷ್ಟ... ಸೈಬರ್ ಅಪರಾಧಗಳಿಗೆ ಕಡಿವಾಣ ಹಾಕಬೇಕಾದರೆ, ಗ್ರಾಹಕರು ವೈಯಕ್ತಿಕ ಮಾಹಿತಿಗಳನ್ನು ಅಪರಿಚಿತರೊಂದಿಗೆ ಹಂಚಿಕೊಳ್ಳುವುದು ಬೇಡ...., ಮೈಸೂರು ಸೈಬರ್ ಠಾಣೆ ಪೊಲೀಸ (ಸೆನ್)ರು, ಮೈಸೂರು ಗ್ರಾಹಕರ ಪರಿಷತ್ ಸದಸ್ಯರೊಂದಿಗೆ ಭಾನುವಾರ ನಡೆದ ಸಂವಾದದಲ್ಲಿ ಕೇಳಿ ಬಂದ ಸಲಹೆಗಳು.

ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯಲ್ಲಿರುವ ಮೈಸೂರು ಗ್ರಾಹಕ ಪರಿಷತ್ ಕಚೇರಿ ಸಭಾಂಗಣದಲ್ಲಿ ನಡೆದ 'ನಿರಂತರವಾಗಿ ಹೆಚ್ಚುತ್ತಿರುವ ಸೈಬರ್ ಅಪರಾಧಗಳ ಹಿನ್ನೆಲೆಯಲ್ಲಿ ಜನ ಸಾಮಾನ್ಯರು ಅವುಗಳಿಗೆ ತುತ್ತಾಗಿರುವುದು ಹೇಗೆ? ಎಂಬ ವಿಷಯ ಕುರಿತು ಮೈಸೂರು ಸೆನ್ ಠಾಣೆ ಸಬ್ ಇನ್ಸ್‌ಪೆಕ್ಟರ್ ಅನಿಲ್ ಕುಮಾರ್ ಅವರು, ಗ್ರಾಹಕರ ಸುರಕ್ಷತೆ ಕುರಿತು ಕೆಲವು ಮಹತ್ವದ ಮಾಹಿತಿಗಳನ್ನು ಹಂಚಿಕೊಂಡರು.

3500 ಪ್ರಕರಣ: ಮೈಸೂರಿನಲ್ಲಿ ವಾರ್ಷಿಕ 3500ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗುತ್ತಿವೆ. ಆದರೆ, ಈ ಪ್ರಕರಣಗಳನ್ನು ಭೇದಿಸುವುದೇ ಕಷ್ಟವಾಗುತ್ತಿದೆ. ಮೈಸೂರು ಸೇರಿದಂತೆ ಇತರೆ ಜಿಲ್ಲೆಗಳಲ್ಲಿ ನಡೆಯುವ ಆರ್ಥಿಕ ಅಪರಾಧಗಳು ಕುರಿತು ಸೆನ್ ಠಾಣೆಯಲ್ಲಿ ದೂರುಗಳು ದಾಖಲಾಗುತ್ತಿವೆ. ಈ ಪ್ರಕರಣಗಳನ್ನು ಭೇದಿಸುವುದು ಅಭೇದ್ಯವಾಗಿದ್ದು, ಅಪರಾಧಿಗಳನ್ನು ಹಿಡಿಯಲು ಸೆನ್ ಪೊಲೀಸರು ಹರಸಾಹಸ ಪಡಬೇಕಾಗಿದೆ ಎಂದು ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಅನಿಲ್ ಕುಮಾರ್ ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರಿಸಿದರು.

ಈ ಕೃತ್ಯಗಳಲ್ಲಿ ಗುಜರಾತ್, ಮಧ್ಯಪ್ರದೇಶ, ಜಾರ್ಖಂಡ್, ಬಿಹಾರ್, ಪಂಜಾಬ್, ಹರಿಯಾಣ ಸೇರಿದಂತೆ ಉತ್ತರ ಭಾರತ ರಾಜ್ಯದ ವ್ಯಕ್ತಿಗಳು ಹೆಚ್ಚು ಭಾಗಿಯಾಗಿರುತ್ತಾರೆ. ಇಂತಹ ಪ್ರಕರಣದ ರೂವಾರಿಗಳು ಬೃಹತ್ ಅಪಾರ್ಟ್‌ಮೆಂಟ್ ಹಾಗೂ ಇತರೆಡೆ ಹೈಫೈ ಮನೆಗಳಲ್ಲಿ ವಾಸವಾಗಿರುತ್ತಾರೆ. ಅಂತಹ ಸ್ಥಳಗಳಲ್ಲಿ ಅಪರಾಧಿಗಳನ್ನು ಹಿಡಿಯುವುದು ಕಷ್ಟಸಾಧ್ಯ ಎಂದು ತನಿಖಾ ಹಂತದಲ್ಲಿ ಸಿಬ್ಬಂದಿಗಳು ಎದುರಿಸುವ ಅನೇಕ ಸವಾಲುಗಳನ್ನು ಬಿಚ್ಚಿಟ್ಟರು.

ಸೈಬರ್ ಅಪರಾಧಗಳು ಮೈಸೂರಿನ ಸೆನ್ ಠಾಣೆಯಲ್ಲಿ ದಾಖಲಾದರೆ, ಆ ಪ್ರಕರಣದ ಲಿಂಕ್ ಉತ್ತರ ಭಾರತ ಕಡೆ ತೋರುತ್ತದೆ. ಆ ರಾಜ್ಯಗಳಿಗೆ ಪೊಲೀಸರು ಭೇಟಿ ನೀಡಿ, ಅಪರಾಧಿಗಳನ್ನು ಪತ್ತೆ ಹಚ್ಚಲು ಸ್ಥಳೀಯ ಪೊಲೀಸರು ಅಸಹಕಾರ, ಸ್ಪಷ್ಟ ಕಾನೂನು ಇಲ್ಲದಿರುವುದು ಸೇರಿದಂತೆ ಇತರೆ ಕಾನೂನಿನ ಸಮಸ್ಯೆಗಳನ್ನು ತಿಳಿಸಿದರಲ್ಲದೆ, ಮೈಸೂರಿನ ಸೆನ್ ಠಾಣೆಯಲ್ಲಿ 20 ಸಿಬ್ಬಂದಿ ಇದ್ದಾರೆ. ನಾವು ಮೈಸೂರು ನಗರಕ್ಕೆ ಸೀಮಿತವಾಗಿ ಕೆಲಸ ಮಾಡಿದರೂ ಸೈಬರ್ ಅಪರಾಧಿಗಳನ್ನು ಪತ್ತೆ ಹಚ್ಚುವುದು ಕೇವಲ ಶೇ.5 ರಿಂದ 6 ರಷ್ಟು ಮಾತ್ರ ಎಂದರು.

ಹಿರಿಯ ನಾಗರಿಕರೇ ಟಾರ್ಗೆಟ್: ಸೈಬರ್ ಅಪರಾಧಕ್ಕೆ ವಯಸ್ಸಿನ ಭೇದವಿಲ್ಲದೆ ಮೋಸ ಹೋಗುತ್ತಿದ್ದಾರೆ. ಆದರೆ, ಸೈಬರ್ ವಂಚಕರಿಗೆ ಹಿರಿಯ ನಾಗರಿಕರನ್ನು ಟಾರ್ಗೆಟ್ ಮಾಡಿ, ದೂರವಾಣಿಯಲ್ಲಿ ಪರಿಚಯ ಮಾಡಿಕೊಂಡು ನಯವಾಗಿ ಮಾತನಾಡಿಸಿ ವಂಚಿಸುತ್ತಿದ್ದಾರೆ. ಇಂದಿನ ಸಭೆಯಲ್ಲಿ ಇರುವ ಅನೇಕರು ಸೈಬರ್ ಅಪರಾಧ ಕೃತ್ಯಕ್ಕೆ ಬಲಿಯಾಗಿದ್ದಾರೆ. ಆರ್ಮಿ ಹೆಸರು ಹೇಳಿದ್ದ ವ್ಯಕ್ತಿಗೆ ಸತ್ಯಪ್ರಕಾಶ್ ಎಂಬುವವರು 2 ಲಕ್ಷ ಹಣ ಕಳುಹಿಸಿ ವಂಚನೆಗೊಳಗಾಗಿದ್ದಾರೆ. ಮತ್ತೊಬ್ಬರು ಫೇಕ್ ವೆಬ್‌ಸೈಟ್ ನಂಬಿ, 50 ಸಾವಿರಕ್ಕೂ ಹೆಚ್ಚು ಹಣ ಕಳೆದುಕೊಂಡಿದ್ದಾರೆ. ಹೀಗೆ ಹತ್ತು–ಹಲವು ಪ್ರಕರಣಗಳು ದಿನನಿತ್ಯ ಬೆಳಕಿಗೆ ಬರುತ್ತಿವೆ. ಇದನ್ನು ಭೇದಿಸುವುದೇ ಪೊಲೀಸರಿಗೆ ತಲೆನೋವಿನ ಸಂಗತಿಯಾಗಿದೆ ಎಂದು ಸದಸ್ಯರೊಬ್ಬರು ಪ್ರಶ್ನೆಗೆ ಉತ್ತರಿಸಿದರು.

ಇಲಾಖೆ ನಡುವೆ ಸಮನ್ವಯದ ಕೊರತೆ: ಸೈಬರ್ ಆರ್ಥಿಕ ಅಪರಾಧಗಳಲ್ಲಿ ಹೆಚ್ಚಾಗಿ ಯಾರದೋ ಮಾತಿಗೆ ಮರುಳಾಗಿ, ಗ್ರಾಹಕರು, ಆನ್‌ಲೈನ್ ಪೇಮೆಂಟ್ ಮಾಡುತ್ತಾರೆ. ನಂತರ ಫೇಕ್ ಎಂದು ತಿಳಿದ ಮೇಲೆ ತಾವು ಮೋಸ ಹೋಗಿರುವುದು (ಗ್ರಾಹಕರಿಗೆ ತಡವಾಗಿ) ಅರಿವಿಗೆ ಬರುತ್ತದೆ. ಹಾಗಾಗಿ ಗ್ರಾಹಕರು ಆನ್‌ಲೈನ್ ವ್ಯವಹಾರದ ಬಗ್ಗೆ ಎಚ್ಚರ ವಹಿಸಬೇಕು. ಅಲ್ಲದೆ, ಸೈಬರ್ ಅಪರಾಧ ಕೃತ್ಯಗಳ ಬಗ್ಗೆ ತನಿಖೆ ನಡೆಸಲು ದಾಖಲಾತಿ ಸಮಸ್ಯೆ ಎದುರಾಗುತ್ತದೆ. ಸಂಬಂಧಪಟ್ಟ ಬ್ಯಾಂಕ್‌ಗಳಿಗೆ ಪ್ರಕರಣಗಳ ಸಂಬಂಧ ಪತ್ರ ವ್ಯವಹಾರ ನಡೆಸಿದರೆ, ಸರಿಯಾದ ಮಾಹಿತಿ ನೀಡುವುದಿಲ್ಲ. ಇದೂ ಕೂಡ ತನಿಖೆಗೆ ಹಿನ್ನಡೆಯಾಗಲು ಕಾರಣ ಎಂದರು.

ಸೈಬರ್ ಅಪರಾಧ ತಡೆಗೆ ಜಾಗೃತಿ ಅಗತ್ಯ: ಸೈಬರ್ ಅಪರಾಧ ತಡೆಗಟ್ಟಲು ತನಿಖೆಯ ಭಾಗವಾಗಿ ರಾಜ್ಯಾದ್ಯಂತ ಸೆನ್ ಠಾಣೆ ಪೊಲೀಸರು ಮಾಧ್ಯಮಗಳ ಮುಖಾಂತರ ಘಟನೆಗಳನ್ನು ಆಧರಿಸಿ ಅಥವಾ ವಿಚಾರ ಸಂಕಿರಣಗಳ ಮೂಲಕ ಸೈಬರ್ ಅಪರಾಧಗಳ ಸ್ವಯಂ ನಿಯಂತ್ರಣಕ್ಕೆ ಗ್ರಾಹಕರು ಮುಂದಾಗಬೇಕು. ತಮ್ಮ ಖಾತೆಯ ವಿವರಗಳನ್ನು ಅಪರಿಚಿತರಿಗೆ ನೀಡಬೇಡಿ, ಪರಿಚಿತರ ನಡುವೆ ಹಣಕಾಸಿನ ವ್ಯವಹಾರ ನಡೆಸುವಾಗಲೂ ಖಾತೆ ನಂಬರ್ ನೀಡಿ, ಇತರೆ ಮಾಹಿತಿಗಳನ್ನು ನೀಡಬಾರದು ಮತ್ತು ಕ್ರೆಡಿಟ್ ಕಾರ್ಡ್‌ಗಳ ವಿವರಗಳನ್ನು ಅಪರಿಚಿತರಿಗೆ ನೀಡಲೇ ಬೇಡಿ, ಅಂತಹ ದೂರವಾಣಿಗಳ ಸಂಖ್ಯೆಗಳ ಮೂಲ ವಿದೇಶದ್ದಾಗಿರುತ್ತದೆ ಎಂದು ಕೆಲವು ಪ್ರಕರಣಗಳನ್ನು ಉಲ್ಲೇಖಿಸಿ ತಿಳಿಸಿದರು.

1930 ಟೋಲ್‌ಗೆ ಕರೆ ಮಾಡಿ: ಆನ್‌ಲೈನ್ ವ್ಯವಹಾರದಲ್ಲಿ ಮೋಸ ಹೋಗಿರುವುದು ಕಂಡು ಬಂದ ತಕ್ಷಣ ಗ್ರಾಹಕರು 1930 ಸಹಾಯವಾಣಿಗೆ ಕರೆ ಮಾಡಿ, ಪ್ರಕರಣ ದಾಖಲಿಸಬಹುದು. ಇಲ್ಲವೆ ಹತ್ತಿರ ಪೊಲೀಸ್ ಠಾಣೆ ಭೇಟಿ ನೀಡಿ, ಎಫ್‌ಐಆರ್ ದಾಖಲಿಸುವಂತೆ ಸಲಹೆ ನೀಡಿದರಲ್ಲದೆ, ಸೈಬರ್ ಅಪರಾಧ ಕುರಿತು ಎಲ್ಲಾ ಹಂತದ ನಾಗರಿಕರಿಗೂ ಜಾಗೃತಿ ಅಗತ್ಯವಾಗಿದೆ. ಇದರಲ್ಲಿ ಹಿರಿಯರು, ಕಿರಿಯರು ಎಂಬ ಭೇದವಿಲ್ಲದೆ, ತಿಳಿದುಕೊಳ್ಳುವುದು ಅತೀ ಮುಖ್ಯ ಎಂದು ಸದಸ್ಯರಿಗೆ ಕಿವಿಮಾತು ಹೇಳಿದರು.

ಈ ವೇಳೆ ಭಾರತೀಯ ಸ್ಟೇಟ್ ಬ್ಯಾಂಕ್ ನಿವೃತ್ತ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಡಿ.ಟಿ.ವೆಂಕಟೇಶ್, ಸೆನ್ ಠಾಣೆ ಸಿಬ್ಬಂದಿ ಶಿವಕುಮಾರ್, ಬಾಮಿ ವಿ.ಶೆಣೈ, ಪ್ರೊ.ಎಸ್.ಶೋಭನ, ವೆಂಕಟೇಶ್ ಖಾರಿಡಿ, ಕೆ.ಸತ್ಯಪ್ರಕಾಶ್, ವಿ.ಎಸ್.ಸತ್ಯರಾಮ್, ಡಿ.ವಿ.ದಯಾನಂದ ಸಾಗರ್, ವಿಶ್ವನಾಥ್, ಲಕ್ಷ್ಮಣ್ ಕುಮಾರ್, ಅರುಣ್ ಕುಮಾರ್, ಹೆಚ್.ಎಲ್. ನಾಗರಾಜ್, ಹೆಚ್.ಕೆ.ಪ್ರವೀಣ್‌ಕುಮಾರ್, ವಿ.ವಿದ್ಯಾಶಂಕರ್, ಎಂ.ಎಸ್.ರಾಕೇಶ್, ಸಿ.ಎಂ.ಎನ್. ಪುರುಷೋತ್ತಮ್, ನಟರಾಜ್, ಎಸ್.ಎನ್.ಶೇಖರ್, ಬಿ.ಎಸ್.ಸೋಮಶೇಖರ್, ಎಂ.ಅರ್ಜುನ್, ಪ್ರೊ. ಜಗನ್ನಾಥ್, ಶಿವಾನಂದ ಅಡಿಗ, ಕೆ.ಬಾನುಪ್ರಶಾಂತ್, ಜಿ.ಶ್ರೀಧರ್, ಬಿ.ಶಿವಕುಮಾರ್, ಅನಿಲ್ ಕುಮಾರ್, ಮಹಾಂತೇಶ್ ಸೇರಿದಂತೆ ಇತರರಿದ್ದರು.

ಸಲಹೆಗಳು:

● ದೇಶಾದ್ಯಂತ ಸೈಬರ್ ಅಪರಾಧ ಕೃತ್ಯ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾಮಟ್ಟದಲ್ಲಿ ಪೊಲೀಸ್, ಕಾನೂನು ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆಗಳು ಸಮನ್ವಯತೆ ಸಾಧಿಸಬೇಕು.

● ಸೈಬರ್ ಅಪರಾಧ ಪ್ರಕರಣಗಳ ಕುರಿತು ತಾಲೂಕು ಮಟ್ಟದಲ್ಲಿ ಗ್ರಾಹಕರಿಗೆ ಅರಿವು ಮೂಡಿಸಬೇಕು.

● ಸೈಬರ್ ಪೊಲೀಸ್ ಠಾಣೆಗಳಿಗೆ ದೇಶಾದ್ಯಂತ ಏಕರೂಪ ಕಾನೂನು ರಚನೆಗೆ ಆಗ್ರಹಿಸಬೇಕು.

● ಸಾರ್ವಜನಿಕರ ಖಾಸಗಿ ಮಾಹಿತಿಗಳು ಅನ್ಯರಿಗೆ ಲಭ್ಯವಾಗದಂತೆ ಕಡಿವಾಣ ಹಾಕಬೇಕು.

ಮೈಸೂರು ಮಿತ್ರ ಸೋಮವಾರ 13 ನವೆಂಬರ್ 2023

ಬಿ.ವೈ.ವಿಜಯೇಂದ್ರ ರಾಜ್ಯಾಧ್ಯಕ್ಷರಾಗಿ ಆಯ್ಕೆ

ಕೆ.ಆರ್.ಪೇಟೆಯಲ್ಲಿ ಬಿಜೆಪಿ ಕಾರ್ಯಕರ್ತರ ಸಂಭ್ರಮಾಚರಣೆ



ಕೆ.ಆರ್.ಪೇಟೆ, ನ.12– ತಾಲೂಕಿನ ಹೆಮ್ಮೆಯ ಪುತ್ರ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ, ಶಾಸಕ ಬಿ.ವೈ.ವಿಜಯೇಂದ್ರ ರಾಜ್ಯ ಬಿಜೆಪಿ ಅಧ್ಯಕ್ಷರಾದ ಹಿನ್ನೆಲೆಯಲ್ಲಿ ತಾಲೂಕು ಬಿಜೆಪಿ ಘಟಕದಿಂದ ಪಟ್ಟಣದ ಎಂ.ಕೆ. ಬೊಮ್ಮೇಗೌಡ ವೃತ್ತದಲ್ಲಿ ಪಟಾಕಿ ಸಿಡಿಸಿ, ಸಿಹಿ ವಿತರಿಸಿ ಸಂಭ್ರಮಾಚರಣೆ ನಡೆಸಲಾಯಿತು.

ಬಿಜೆಪಿ ತಾಲೂಕು ಘಟಕದ ಅಧ್ಯಕ್ಷ ಪರಮೇಶ್ ಅರವಿಂದ್ ಮಾತನಾಡಿ, ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ ಮತ್ತಿತರರು ವಿಜಯೇಂದ್ರ ಅವರ ಸಂಘಟನಾ ಸಾಮರ್ಥ್ಯ ಗುರುತಿಸಿ ರಾಜ್ಯಾಧ್ಯಕ್ಷ ಹುದ್ದೆ ನೀಡುವ ಮೂಲಕ ಪಕ್ಷಕ್ಕೆ ಶಕ್ತಿ ತುಂಬಿರುವುದು ಬಿಜೆಪಿ ಕಾರ್ಯಕರ್ತರಲ್ಲಿ ಹೊಸ ಹುಮ್ಮಸ್ಸು ತಂದಿದೆ. ಯುವ ನಾಯಕ ವಿಜಯೇಂದ್ರ ಅವರು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಿಂದ ಅತೀ ಹೆಚ್ಚು ಸ್ಥಾನಗಳನ್ನು ಗೆಲ್ಲಿಸಿಕೊಡುವ ಮೂಲಕ ಪಕ್ಷಕ್ಕೆ ನವ ಚೈತನ್ಯ ತುಂಬಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಮಾತನಾಡಿದರು. ಈ ವೇಳೆ ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕಾಂತರಾಜೇಗೌಡ, ಹಿರಿಯ ಮುಖಂಡ ಬಿ.ವರದರಾಜೇಗೌಡ, ಪ್ರಧಾನ ಕಾರ್ಯದರ್ಶಿ ಸಿ.ಎನ್.ಪ್ರಕಾಶ್, ಓಬಿಸಿ ಮೋರ್ಚಾ ಅಧ್ಯಕ್ಷ ನಾಗಣ್ಣ, ಉಪಾಧ್ಯಕ್ಷ ಪುಟ್ಟಣ್ಣ, ಬಿಜೆಪಿ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಭರತ್, ಪ್ರಧಾನ ಕಾರ್ಯದರ್ಶಿ ಬಿ.ಪಿ.ಶ್ರೀನಿವಾಸ್, ಹಿರಿಯ ಮುಖಂಡ ಬ್ಯಾಂಕ್ ಪರಮೇಶ್, ಎಂ.ಕೆ.ಪರಮೇಶ್, ಕುಮಾರ್, ಉಮೇಶ್, ಸೋಮಶೇಖರ್, ವಾಸು, ಮಹೇಶ್ ನಾಯಕ್, ಕೃಷ್ಣಮೂರ್ತಿ, ಭೈರನಾಯಕ್, ಗಂಗಾಧರ್, ಶ್ರೀನಿವಾಸ್, ನಾರಾಯಣ, ಜಗದೀಶ್, ನಂದೀಶ್, ವಿಜಯ್ ಕುಮಾರ್ ಸೇರಿದಂತೆ ಇತರರಿದ್ದರು.

ಭಾರತೀಯ ಸಂಸ್ಕೃತಿ ವಿಶ್ವಕ್ಕೆ ಮಾದರಿ



ಮದ್ದೂರು, ನ.12– ಎಲ್ಲಾ ಧರ್ಮಗಳ ಸಾರ ಒಂದೇ ಆಗಿದ್ದು, ಭಗವಂತನ ಸಾಕ್ಷಾತ್ಕಾರ ಹೊಂದುವುದಾಗಿದೆ. ವಿವಿಧತೆಯಲ್ಲಿ ಏಕತೆ ಹೊಂದಿರುವ ನಮ್ಮ ಭಾರತೀಯ ಸಂಸ್ಕೃತಿ ವಿಶ್ವಕ್ಕೆ ಮಾದರಿಯಾಗಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಬಣ್ಣಿಸಿದರು.

ತಾಲೂಕಿನ ಕೊಪ್ಪ ಗ್ರಾಮದಲ್ಲಿ ಡಿ.10 ಮತ್ತು 11ರಂದು ನಡೆಯುವ ವಿಭಾಗ ಮಟ್ಟದ ತಬ್ಲಿಕ್ ಜಮಾತ್ ಇಜ್ತಿಮಾ ಧಾರ್ಮಿಕ ಸಮ್ಮೇಳನದ ಪೂರ್ವಭಾವಿ ಸಮಾಲೋಚನಾ ಸಭೆಯಲ್ಲಿ ಮಾತನಾಡಿದ ಅವರು, ಒಬ್ಬರಿಗೆ ಕೇಡು ಬಯಸಿ ಮತ್ತೊಬ್ಬರಿಗೆ ಒಳ್ಳೆಯದನ್ನು ಬಯಸುವ ಧಾರ್ಮಿಕ ಸಂದೇಶ ಯಾವುದೇ ಧರ್ಮದಲ್ಲೂ ಇಲ್ಲ. ಪ್ರವಾದಿ ಮಹಮ್ಮದ್ ಪೈಗಂಬರರ ಆಶಯಗಳು ಹಾಗೂ ಧಾರ್ಮಿಕ ಸಂದೇಶವನ್ನು ನಾಡಿಗೆ ಬಿತ್ತರಿಸುವ ನಿಟ್ಟಿನಲ್ಲಿ ಸಮಾಜದಲ್ಲಿ ವಾಸಿಸುವ ಎಲ್ಲಾ ಧರ್ಮಿಯರನ್ನು ಒಳಗೊಂಡಂತೆ ಇಂದು ಪೂರ್ವಭಾವಿ ಸಭೆ ನಡೆಸುತ್ತಿರುವುದು ಒಳ್ಳೆಯಬೆಳವಣಿಗೆ ಎಂದರು.

ಮಾನವ ಧರ್ಮಕ್ಕಿಂತ ಮಿಗಿಲಾದ ಧರ್ಮ ಮತ್ತೊಂದಿಲ್ಲ. ಮಾನವತೆಯ ಸಂದೇಶ ಸಾರುವ ಇಸ್ಲಾಂ ಧರ್ಮ ಯಾರಿಗೂ ಕೇಡನ್ನು ಬಯಸುವುದಿಲ್ಲ. ಆದ್ದರಿಂದ ನಾಡಿಗೆ ಭಾವೈಕ್ಯತೆಯ ಸಂದೇಶ ಸಾರುವ ಈ ಧಾರ್ಮಿಕ ಸಭೆ ತಾಲೂಕಿನ ಕೊಪ್ಪದಲ್ಲಿ ನಡೆಯುತ್ತಿರುವುದು ಇಡೀ ನಾಗರಿಕ ಸಮಾಜ ಮೆಚ್ಚುವ ಸಂಗತಿ ಎಂದರು.

ಡಿಸೆಂಬರ್‌ನಲ್ಲಿ ನಡೆಯುವ ಈ ಧಾರ್ಮಿಕ ಸಮಾವೇಶಕ್ಕಾಗಿ ಎಲ್ಲರೂ ಒಗ್ಗೂಡಿ ಕೆಲಸ ಮಾಡುವ ಮೂಲಕ ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಬೇಕು ಎಂದು ಮನವಿ ಮಾಡಿದರು. ವಿಚಾರವಾದಿ ಹಾಗೂ ಚಿಂತಕ ಕುಮಾರ್ ಕೊಪ್ಪ ಮಾತನಾಡಿ, ಭಾರತ ರತ್ನ ಎ.ಪಿ.ಜೆ.ಅಬ್ದುಲ್ ಕಲಾಂ, ಸ್ವಾತಂತ್ರ್ಯ ಹೋರಾಟಗಾರ ಮೌಲಾನಾ ಅಬ್ದುಲ್ ಕಲಾಂ ಆಜಾದ್, ಮೈಸೂರು ಸಂಸ್ಥಾನದಲ್ಲಿ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರು ನಾಡಿಗೆ ನೀಡಿರುವ ಕೊಡುಗೆಗಳು ಇಂದಿಗೂ ಚಿರಸ್ಥಾಯಿಯಾಗಿ ಉಳಿದಿವೆ. ರಾಜ್ಯ ಸೇರಿದಂತೆ ದೇಶದ ಉನ್ನತಿಗೆ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದ ಕೊಡುಗೆ ಅಪಾರ ಎಂದರು.

ಧಾರ್ಮಿಕ ಗುರು ಮಹಮ್ಮದ್ ಖಾಸಿಂ ತಬ್ಬಲಿಕ್ ಜಮಾತ್ ಧಾರ್ಮಿಕ ಸಮ್ಮೇಳನ ಕುರಿತು ಮಾತನಾಡಿದರು. ನಾಗಮಂಗಲ ತಾಲೂಕು ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಎನ್.ದಿವಾಕರ್, ಕೊಪ್ಪ ಗ್ರಾಪಂ ಅಧ್ಯಕ್ಷ ಕೆ.ಪಿ.ನವೀನ್ ಕುಮಾರ್, ರೈತ ಮುಖಂಡ ನಂಜುಂಡಯ್ಯ, ವಕೀಲರಾದ ರಮೇಶ್, ಕೊಪ್ಪ ಆರಕ್ಷಕ ಠಾಣೆ ಇನ್‌ಸ್ಪೆಕ್ಟರ್ ವೆಂಕಟೇಶ್, ಸ್ಥಳೀಯ ಮುಖಂಡರಾದ ರಮೇಶ್, ಶಿವಣ್ಣ, ಪುಟ್ಟಸ್ವಾಮಿ, ಶ್ರೀನಿವಾಸ್, ಕೃಷ್ಣೇಗೌಡ, ಮಧು, ಕುಮಾರ್, ಅಭಿನವ ಭಾರತಿ ಶಾಲೆ ಅಧ್ಯಕ್ಷ ಶಿವಮೂರ್ತಿ, ಮುಖಂಡರಾದ ಶಿವಣ್ಣ, ಕೊಪ್ಪ ಮೋಹನ್, ಕಿಸರ್ ಅಹಮದ್ ಸೇರಿದಂತೆ ವಿವಿಧೆಡೆಗಳಿಂದ ಆಗಮಿಸಿದ್ದ ಮುಸ್ಲಿಂ ಬಾಂಧವರು ಸಭೆಯಲ್ಲಿ ಭಾಗವಹಿಸಿದ್ದರು.

ಶ್ರೀರಂಗಪಟ್ಟಣದಲ್ಲಿ ಪ್ರತಿಭಾ ಕಾರಂಜಿ



ಶ್ರೀರಂಗಪಟ್ಟಣ, ನ.12– ಮಕ್ಕಳಲ್ಲಿರುವ ಪ್ರತಿಭೆ ಹೊರ ತೆಗೆಯುವ ಉದ್ದೇಶದಿಂದ ಸರ್ಕಾರ ಪ್ರತಿಭಾ ಕಾರಂಜಿ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ತಿಳಿಸಿದರು. ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಮತ್ತು ಕ್ಷೇತ್ರ ಸಮನ್ವಯಾಧಿಕಾರಿ ಕಚೇರಿ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಭೆಗೆ ಸರಿಯಾದ ಸ್ಥಾನ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಎಲ್ಲರೂ ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಮಾತ್ರ ಪ್ರತಿಭೆಗಳಿಗೆ ಅವಕಾಶಗಳು ದೊರೆಯಲು ಸಾಧ್ಯ. ಮಕ್ಕಳು ಸಹ ಸರಿಯಾದ ಸಮಯದಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಿ ತಾಲೂಕು ಹಾಗೂ ಜಿಲ್ಲೆಗೆ ಕೀರ್ತಿ ತರಬೇಕು ಎಂದರು. ಕಾರ್ಯಕ್ರಮದಲ್ಲಿ 477 ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿಗಳಿಗೆ ವೈಯಕ್ತಿಕ ಹಾಗೂ ಸಾಮೂಹಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ವೈಯಕ್ತಿಕ ವಿಭಾಗದಲ್ಲಿ ಒಟ್ಟು 22 ಸ್ಪರ್ಧೆಗಳು, ಸಾಮೂಹಿಕ ವಿಭಾಗದಲ್ಲಿ 9 ಸ್ಪರ್ಧೆಗಳು ನಡೆದವು. ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದವರನ್ನು ಜಿಲ್ಲಾಮಟ್ಟಕ್ಕೆ ಆಯ್ಕೆ ಮಾಡಲಾಯಿತು. ಈ ವೇಳೆ ಕ್ಷೇತ್ರ ಬಿಇಓ ಅನಂತರಾಜು, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಜೆ ಶ್ರೀನಿವಾಸ್, ಶಿಕ್ಷಕರ ಸಂಘದ ಅಧ್ಯಕ್ಷ ಲೋಕೇಶ್, ಕಾಲೇಜು ಪ್ರಾಂಶುಪಾಲ ಅಶೋಕ್, ಶಿಕ್ಷಣ ಸಂಯೋಜಕಿ ಡಾ.ಪ್ರತಿಮಾ, ಇಸಿಓ ರಾಮಚಂದ್ರ ಜಾನಪದ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿದ್ದಲಿಂಗು ಇತರರಿದ್ದರು.

ಹೈನುಗಾರಿಕೆ ಕುಟುಂಬ ನಿರ್ವಹಣೆಗೆ ಸಹಕಾರಿ

ಮನ್‌ಮುಲ್ ನಿರ್ದೇಶಕ ಕಾಡೇನಹಳ್ಳಿ ರಾಮಚಂದ್ರು



ಪಾಂಡವಪುರ, ನ.12– ಹೈನುಗಾರಿಕೆ ಗ್ರಾಮೀಣ ಪ್ರದೇಶದ ಸಾವಿರಾರು ಕುಟುಂಬ ನಿರ್ವಹಣೆಗೆ ಸಹಕಾರಿಯಾಗಿದೆ ಎಂದು ಮನ್‌ಮುಲ್ ನಿರ್ದೇಶಕ ಕಾಡೇನಹಳ್ಳಿ ರಾಮಚಂದ್ರು ತಿಳಿಸಿದರು.

ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಮನ್‌ಮುಲ್‌ನಿಂದ ಆಯೋಜಿಸಿದ್ದ ಮೃತ ರಾಸುಗಳ ಮಾಲೀಕರಿಗೆ ವಿಮಾ ಚೆಕ್, ರೈತ ಕಲ್ಯಾಣ ಟ್ರಸ್ಟ್‌ನಿಂದ ಮರಣ ನಿಧಿ, ಡೇರಿ ಕಟ್ಟಡ ನಿರ್ಮಾಣಕ್ಕೆ ಸಹಾಯ ಧನದ ಚೆಕ್ ಹಾಗೂ ಕೇಂದ್ರ ಸರ್ಕಾರದ ಎನ್‌ಪಿಡಿ ಯೋಜನೆಯಡಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಬಿಎಂಸಿ ಕೇಂದ್ರಗಳಿಗೆ ಇ–ಮ್ಯಾಟ್ ಯಂತ್ರಗಳನ್ನು ವಿತರಿಸಿ ಮಾತನಾಡಿದರು.

ಹಾಲಿನ ಗುಣಮಟ್ಟದಲ್ಲಿ ತಾಲೂಕು ಎರಡನೇ ಸ್ಥಾನದಲ್ಲಿದೆ. ಉತ್ಪಾದಕರು ಗುಣಮಟ್ಟಕ್ಕೆ ಆದ್ಯತೆ ನೀಡಿದರೆ ಮೊದಲ ಸ್ಥಾನಕ್ಕೆ ತಲುಪುತ್ತೇವೆ. ಅಲ್ಲದೇ ಸರ್ಕಾರದ ಪ್ರೋತ್ಸಾಹ ಧನ ವಾಪಸ್ಸಾಗುವುದಿಲ್ಲ. ರೈತರು ರಾಸುಗಳನ್ನು ನಿರ್ವಹಣೆ ಮಾಡಿದರೆ ಉತ್ತಮ ಹಾಲು ಪಡೆಯಬಹುದು ಎಂದು ತಿಳಿಸಿದರು.

ಸಹಕಾರ ಕ್ಷೇತ್ರದಲ್ಲಿ ಬದಲಾವಣೆ ತರಬೇಕೆಂಬ ಆಸೆಯಿಂದ ಕೆಲಸ ಮಾಡುತ್ತಿದ್ದೇನೆ. ಇದಕ್ಕೆ ಎಲ್ಲರ ಸಹಕಾರ ಅಗತ್ಯ. ನ.14ರಿಂದ 20ರವರೆಗೆ ಸಹಕಾರ ಸಪ್ತಾಹ ನಡೆಯುತ್ತಿದೆ. ನ.18ರಂದು ಪಟ್ಟಣದ ಟಿಎಪಿಸಿಎಂಎಸ್ ರೈತ ಸಭಾಂಗಣದಲ್ಲಿ ಸಪ್ತಾಹ ಆಚರಿಸಲಾಗುವುದು. ಡೈರಿ ಕಾರ್ಯದರ್ಶಿಗಳು, ಅಧ್ಯಕ್ಷರು ತಪ್ಪದೇ ಸಪ್ತಾಹಕ್ಕೆ ಬರಬೇಕು ಎಂದು ಮನವಿ ಮಾಡಿದರು.

ಕೇಂದ್ರ ಸರ್ಕಾರ ಎನ್‌ಪಿಡಿ ಯೋಜನೆಯಡಿ ಮಂಡ್ಯ ಹಾಲು ಒಕ್ಕೂಟಕ್ಕೆ 30 ಕೋಟಿ ನೀಡಿದೆ. ಈ ಅನುದಾನದಲ್ಲಿ ತಾಲೂಕಿನ 28 ಬಿಎಂಸಿ ಕೇಂದ್ರಗಳಿಗೆ ಇ–ಮ್ಯಾಟ್ ಯಂತ್ರಗಳನ್ನು ವಿತರಿಸಲಾಗುತ್ತಿದೆ. ಈ ಯಂತ್ರದ ಬೆಲೆ 5,21,395 ರೂ.ಗಳಾಗಿದ್ದು, ಎನ್‌ಡಿಪಿ ಅನುದಾನದಲ್ಲಿ 3,3,600 ಭರಿಸಲಾಗುವುದು. ಒಕ್ಕೂಟ 87,460 ಭರಿಸುತ್ತದೆ. ಹಾಲು ಉತ್ಪಾದಕರ ಸಹಕಾರ ಸಂಘ 1.49 ಲಕ್ಷ ಕೊಡಬೇಕು. ಈ ಹಣವನ್ನು 10 ಸಮಾನ ಕಂತುಗಳಲ್ಲಿ ಡೈರಿಗಳಿಂದ ಪಡೆಯಲಾಗುವುದು ಎಂದರು.

ಇ–ಮ್ಯಾಟ್ ಯಂತ್ರದಿಂದ ಹಾಲಿನ ಗುಣಮಟ್ಟವನ್ನು ಕೇವಲ 30 ರಿಂದ 40 ಸೆಕೆಂಡ್‌ಗಳಲ್ಲಿ ಪರೀಕ್ಷಿಸಬಹುದಾಗಿದೆ. ಹಾಲಿಗೆ ಸುಕ್ರೋಸ್, ನೀರು, ಯೂರಿಯ, ಸಕ್ಕರೆ, ಗೆಣಸಿನ ಪೌಡರ್ ಸೇರಿದಂತೆ ಏನೇ ಮಿಶ್ರಣ ಮಾಡಿದರೂ ಈ ಯಂತ್ರದ ಸಹಾಯದಿಂದ ತಿಳಿಯಬಹುದು ಎಂದರು.

ಈ ವೇಳೆ ಸಹಕಾರ ಇಲಾಖೆ ಸಹಾಯಕ ನಿಬಂಧಕ ನಾಗಭೂಷಣ್, ಮನ್‌ಮುಲ್ ಉಪ ವ್ಯವಸ್ಥಾಪಕ ಆರ್.ಪ್ರಸಾದ್, ವ್ಯವಸ್ಥಾಪಕಿ ನಿವೇದಿತಾ, ಮಾರ್ಗ ವಿಸ್ತರಣಾಧಿಕಾರಿ ಹೆಚ್.ಎನ್.ಉಷಾ, ಜಗದೀಶ್, ಅಭಿಲಾಷ್, ಪ್ರಜ್ವಲ್ ಇತರರಿದ್ದರು.

ನಾಲೆಗಳಿಗೆ ತಡೆಗೋಡೆ ನಿರ್ಮಿಸಲು ಒತ್ತಾಯ



ಮಂಡ್ಯ, ನ.12– ಜಿಲ್ಲಾದ್ಯಂತ ಇತ್ತೀಚೆಗೆ ನಾಲೆ ದುರಂತಗಳು ಹೆಚ್ಚಾಗಿ ಸಂಭವಿಸುತ್ತಿದ್ದು, ಇದನ್ನು ತಡೆಗಟ್ಟಲು ಜಿಲ್ಲೆಯ ಪ್ರತಿ ನಾಲೆಗಳ ಬಳಿ ಕಡ್ಡಾಯವಾಗಿ ತಡೆಗೋಡೆಗಳನ್ನು ನಿರ್ಮಿಸಬೇಕು ಎಂದು ಕಾಂಗ್ರೆಸ್ ಮುಖಂಡ ಅಸಾದುಲ್ಲಾ ಖಾನ್ ಒತ್ತಾಯಿಸಿದರು.

ಈ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೊನ್ನೆಯಷ್ಟೇ ಪಾಂಡವಪುರ ತಾಲೂಕಿನ ಬನಘಟ್ಟ ಬಳಿ ವಿ.ಸಿ.ನಾಲೆಗೆ ಕಾರು ಬಿದ್ದು ಐವರು ಜಲಸಮಾಧಿಯಾಗಿದ್ದಾರೆ. ತಡೆಗೋಡೆ ಇಲ್ಲದ್ದಿದ್ದರೆ ಈ ದುರ್ಘಟನೆ ಸಂಭವಿಸುತ್ತಿರಲಿಲ್ಲ. ಇದೇ ರೀತಿ ಗಾಮನಹಳ್ಳಿ, ಶಿವಳ್ಳಿ ಹಾಗೂ ಕನಗನ ಮರಡಿಯಲ್ಲೂ ಇಂತಹ ದುರ್ಘಟನೆ ಸಂಭವಿಸಿದೆ. ಈ ಸ್ಥಳಗಳಲ್ಲಿ ತಡೆಗೋಡೆ ನಿರ್ಮಿಸಿದ್ದರೇ ಇಂತಹ ಘಟನೆ ನಡೆಯುತ್ತಿರಲಿಲ್ಲ. ಈ ರೀತಿ ದುರಂತಗಳು ಸಂಭವಿಸುತ್ತಿದ್ದರೂ, ಜಿಲ್ಲಾಡಳಿತ ತಡೆಗೋಡೆ ನಿರ್ಮಿಸಲು ಮುಂದಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲೆಯ ಹಲವು ಕಡೆ ನಾಲೆಗಳು, ಕೆರೆಗಳ ಪಕ್ಕದಲ್ಲೇ ರಸ್ತೆ ಹಾದು ಹೋಗಲಿದ್ದು, ಬಹುತೇಕ ಕಡೆ ತಡೆಗೋಡೆ ಗಳೇ ಇಲ್ಲ. ಇದರಿಂದ ಗ್ರಾಮೀಣ ಜನರಿಗೆ ಸಮಸ್ಯೆಯಾಗುತ್ತಿದೆ. ಹೀಗಾಗಿ ಜಿಲ್ಲೆಯಲ್ಲಿ ನಾಲೆಗಳ ಬಗ್ಗೆ ಸರ್ವೇ ನಡೆಸಿ, ಕೂಡಲೇ ತಡೆಗೋಡೆ ನಿರ್ಮಿಸಲು ಮುಂದಾಗಬೇಕೆಂದು ಒತ್ತಾಯಿಸಿದರು.

ಇಂತಹ ದುರ್ಘಟನೆಯಿಂದ ಇನ್ನೆಷ್ಟು ಮಂದಿ ಪ್ರಾಣ ಹೋಗಬೇಕೋ ತಿಳಿಯುತ್ತಿಲ್ಲ. ಏಕೆಂದರೆ ಬನಘಟ್ಟ ಬಳಿ ದುರಂತ ನಡೆದ ಮೇಲೆ ತಡೆಗೋಡೆ ನಿರ್ಮಿಸಲಾಗಿದೆ. ಅದೇ ರೀತಿ ಕನಗನ ಮರಡಿ ದುರಂತ ನಡೆದ ಬಳಿಕ ಅಲ್ಲಿಯೂ ತಡೆಗೋಡೆ ನಿರ್ಮಿಸಲಾಯಿತು. ದುರಂತ ನಡೆದ ಬಳಿಕ ಕ್ರಮ ಕೈಗೊಂಡರೆ ಪ್ರಯೋಜನವಿಲ್ಲ. ಹೀಗಾಗಿ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದರು.

ಜಿಲ್ಲೆಯ ಎಲ್ಲಾ ಶಾಸಕರು ಈ ಬಗ್ಗೆ ಮಾಹಿತಿ ಕಲೆಹಾಕಿ ತಡೆಗೋಡೆ ನಿರ್ಮಿಸಲು ಸರ್ಕಾರದ ಮೇಲೆ ಒತ್ತಡ ಹೇರಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು ಎಂದು ಸಲಹೆ ನೀಡಿದರು.

ಶ್ರೀ ನೀಲಕಂಠಸ್ವಾಮಿ ಮಠದ ನೂತನ ಮುಖ್ಯದ್ವಾರ ಉದ್ಘಾಟನೆ



ಮೈಸೂರು, ನ.12(ಎಸ್‌ಬಿಡಿ)– ನಗರದ ಅಗ್ರಹಾರದಲ್ಲಿರುವ ಶ್ರೀ ನೀಲಕಂಠಸ್ವಾಮಿ ಮಠದ ನೂತನ ಮುಖ್ಯದ್ವಾರವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಭಾನುವಾರ ಉದ್ಘಾಟಿಸಿದರು.

ಇದೇ ವೇಳೆ ಮಠದ ಮುಂಭಾಗದ ರಸ್ತೆಗೆ ಅಳವಡಿಸಿರುವ 'ಶ್ರೀ ನೀಲಕಂಠ ಮಠ ರಸ್ತೆ' ನಾಮಫಲಕವನ್ನು ಮೇಯರ್ ಶಿವಕುಮಾರ್ ಅನಾವರಣಗೊಳಿಸಿದರು. ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಮಠದ ಸೇವಾಕರ್ತರಾದ ಸೋಮಶೇಖರ್, ಶ್ರೀಮತಿ ನಾಗರತ್ನ, ಮಲ್ಲಿಕಾರ್ಜುನಪ್ಪ ಮತ್ತಿತರರನ್ನು ಸನ್ಮಾನಿಸಿದರು. ಎಂ.ವಿ.ಪರಶಿವಮೂರ್ತಿ ಅವರ 'ಐತಿಹಾಸಿಕ ಐಸಿರಿ ಶ್ರೀ ನೀಲಕಂಠಸ್ವಾಮಿ ಮಠ' ಪುಸ್ತಕವನ್ನು ಸ್ಥಳೀಯ ಕಾರ್ಪೊರೇಟರ್ ಬಿ.ವಿ.ಮಂಜುನಾಥ್ ಬಿಡುಗಡೆ ಮಾಡಿದರು. ಈ ವೇಳೆ ಲೇಖಕರಾದ ಎಂ.ವಿ.ಪರಶಿವಮೂರ್ತಿ ಅವರನ್ನು ಸುತ್ತೂರು ಶ್ರೀಗಳು ಅಭಿನಂದಿಸಿ, ಆಶೀರ್ವದಿಸಿದರು.

ಆಶೀರ್ವಚನ ನೀಡಿದ ಸುತ್ತೂರು ಶ್ರೀಗಳು, ಶ್ರೀ ನೀಲಕಂಠಸ್ವಾಮಿ ಮಠದ ಪರಂಪರೆ, ಇತಿಹಾಸ, ಮೈಸೂರು ಸಂಸ್ಥಾನದೊಂದಿಗಿನ ಬಾಂಧವ್ಯವನ್ನು ಬಣ್ಣಿಸಿದರು. ಪ್ರತಿಷ್ಠಿತ ಮಠಗಳಲ್ಲಿ ಒಂದಾಗಿರುವ ಶ್ರೀ ನೀಲಕಂಠಸ್ವಾಮಿ ಮಠ, ಪ್ರಭಾವಶಾಲಿಯೂ ಹೌದು. ನೀಲಕಂಠ ಶಿವನಂತೆ ಮಠದ ಶ್ರೀಗಳಾದ ವಿದ್ವಾನ್ ಸಿದ್ದಮಲ್ಲಸ್ವಾಮಿಗಳು ಯಾವ ತೊಂದರೆ ಎದುರಾದರೂ ನಗುತ್ತಲೇ ಸ್ವೀಕರಿಸುತ್ತಾರೆ. ಸಮಾಜದ ಯಾವುದೇ ಸಮಸ್ಯೆಯನ್ನು ತಮ್ಮದೆಂದು ಭಾವಿಸಿ, ಅದನ್ನು ಪರಿಹರಿಸುವಲ್ಲಿ ಕಾಳಜಿ ತೋರುತ್ತಾರೆ. ಎಲ್ಲರೊಂದಿಗೆ ಆತ್ಮೀಯ ಬಾಂಧವ್ಯ ಹೊಂದಿರುವ ಶ್ರೀಗಳು ಮಠದ ಪಾರಂಪರಿಕ ಸೇವೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ ಎಂದು ನುಡಿದರು.

ಶಾಸಕ ಶ್ರೀವತ್ಸ ಮಾತನಾಡಿ, ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಗಿದ್ದ ಬೆನ್ನುಫಣಿ ಬಾಧೆಯನ್ನು ಚಾಮುಂಡಿಬೆಟ್ಟ ತಪ್ಪಲಲ್ಲಿರುವ ಅರಮನೆ ಶ್ರೀ ಪಂಚಗವಿ ಮಠದ ಶಿವಯೋಗಿ ಶ್ರೀ ಶಿವಬಸವ ಸ್ವಾಮೀಜಿ ಯೋಗಶಕ್ತಿಯಿಂದ ತೆಗೆದುಕೊಂಡಿದ್ದರು. ಈ ವಿಷಯ ತಿಳಿದ ಶ್ರೀ ನೀಲಕಂಠ ಶಿವಯೋಗಿಗಳು, ಶ್ರೀ ಶಿವಬಸವ ಸ್ವಾಮೀಜಿಯನ್ನು ಭೇಟಿ ಮಾಡಿ, ನಿಮಗಿನ್ನೂ ಚಿಕ್ಕವಯಸ್ಸು ತಮ್ಮಿಂದ ಸಾಕಷ್ಟು ಲೋಕಕಲ್ಯಾಣ ಕಾರ್ಯಗಳಾಗಬೇಕು. ನನಗೆ ವಯಸ್ಸಾಗಿದೆ ಹಾಗಾಗಿ ನಾನೇ ವ್ಯಾಧಿಯನ್ನು ಪಡೆಯುತ್ತೇನೆಂದು ಹಾಗೆಯೇ ಮಾಡಿದರೆಂದು ಪುಸ್ತಕದಿಂದ ತಿಳಿದುಕೊಂಡೆ. ಲೋಕಸೇವೆಗೆ ಕಿರಿಯರನ್ನು ಮುಂದೆ ಬಿಟ್ಟ ಶ್ರೀಗಳ ನಿರ್ಧಾರ ನಿಜಕ್ಕೂ ಮಾದರಿ. ದೇವಸ್ಥಾನಗಳ ಜೊತೆಗೆ ಮಠಗಳಿಂದಲೂ ಪ್ರಸಿದ್ಧಿಯಾಗಿರುವ ಮೈಸೂರಿನಲ್ಲಿ ನಾವು–ನೀವೆಲ್ಲಾ ಇರುವುದೇ ಪುಣ್ಯ ಎಂದರು.

ಮೇಯರ್ ಶಿವಕುಮಾರ್, 'ಶ್ರೀ ನೀಲಕಂಠಸ್ವಾಮಿ ಮಠದ ರಸ್ತೆ' ನಾಮಫಲಕ ಉದ್ಘಾಟಿಸಿದ್ದು ನನ್ನ ಸೌಭಾಗ್ಯ ಎಂದರೆ, ಕಾರ್ಪೊರೇಟರ್ ಬಿ.ವಿ.ಮಂಜುನಾಥ್, ರಸ್ತೆ ನಾಮಕರಣ ಹಾಗೂ ಅಭಿವೃದ್ಧಿ ಸಂಬಂಧ ಮಾಹಿತಿ ಹಂಚಿಕೊಂಡರು.

ಶ್ರೀ ನೀಲಕಂಠಸ್ವಾಮಿ ಮಠದ ವಿದ್ವಾನ್ ಶ್ರೀ ಸಿದ್ದಮಲ್ಲಸ್ವಾಮೀಜಿ, ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಮುಡುಗುಂಡ ಮಠದ ಶ್ರೀಕಂಠ ಸ್ವಾಮೀಜಿ, ಕುಂದೂರು ಮಠದ ಡಾ.ಶ್ರೀ ಶರತ್ ಚಂದ್ರ ಸ್ವಾಮೀಜಿ, ಮೂಡುಗೂರು ಮಠದ ಶ್ರೀಗಳು, ಖಾರಾಪುರ ಮಠದ ಶ್ರೀ ಬಸವರಾಜ ಸ್ವಾಮೀಜಿ, ಹರವೆ ಮಠದ ಶ್ರೀ ಸರ್ಪಭೂಷಣ ಸ್ವಾಮೀಜಿ, ಹಂಗಳ ಮಠದ ಶ್ರೀಗಳು, ಬರಡನಪುರದ ಮಠದ ಶ್ರೀಗಳು, ದಂಡಿಕೆರೆ ಮಠದ ಶ್ರೀಗಳು, ಚಿಕ್ಕತುಪ್ಪೂರು ಮಠದ ಶ್ರೀಗಳು ಸೇರಿದಂತೆ ವಿವಿಧ ಮಠಾಧೀಶರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಮೈಸೂರಲ್ಲಿ 'ಹಂಸಗೀತೆ' ಸಂಗೀತ ರಸಸಂಜೆ

ಸಂಗೀತ ವಿಶಿಷ್ಟ, ವ್ಯಾಪಕ ಕಲೆ; ಸಿಪಿಕೆ




ಮೈಸೂರು, ನ.12(ಎಂಕೆ)– ಸಂಗೀತ ಲಲಿತ ಕಲೆಗಳಲ್ಲಿ ಒಂದಾಗಿದ್ದು, ವಿಶಿಷ್ಟ ಹಾಗೂ ವ್ಯಾಪಕವಾದ ಕಲೆಯಾಗಿದೆ. ಎಲ್ಲಾ ಕಲೆಯೂ ಸಂಗೀತದ ಅವಸ್ಥೆಯತ್ತ ತುಳಿಯುತ್ತವೆ ಎಂದು ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಹೇಳಿದರು.

ಮೈಸೂರು ಕಲಾಮಂದಿರದಲ್ಲಿ ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ ವತಿಯಿಂದ ಕಲಾವಿದರ ಕಲ್ಯಾಣ ನಿಧಿಗಾಗಿ ಆಯೋಜಿಸಿದ್ದ ನಾದಬ್ರಹ್ಮ ಹಂಸಲೇಖ ರಚಿತ ಹಾಡುಗಳ 'ಹಂಸಗೀತೆ' ಸಂಗೀತ ರಸಸಂಜೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂಗೀತವೆಂಬುದು ಅತ್ಯುನ್ನತ ಹೊಳಪು. ಸಂಗೀತ ದೈವಿ ಕಲೆಯಾಗಿದ್ದು, ಭಗವಂತನ ಸಾಕ್ಷಾತ್ಕಾರದ ಸ್ವರೂಪಿತ ಸಾಧನ ಎನ್ನಬಹುದು ಎಂದು ತಿಳಿಸಿದರು.

ಸಂಗೀತ ಏನಿಲ್ಲವಾದರೂ ನಮ್ಮ ಹೃದಯಕ್ಕೆ ರಸಮತೆಯನ್ನು ಉಂಟು ಮಾಡುತ್ತದೆ. ಮನಸ್ಸನ್ನು ಪ್ರಫುಲ್ಲಗೊಳಿಸುತ್ತದೆ. ಅಲ್ಲದೆ ಇದೊಂದು ಉಲ್ಲಾಸದ ಮಾಧ್ಯಮವಾಗಿದ್ದು, ನಮ್ಮ ಚಿತ್ತವನ್ನು ಹರಳಿಸಿ, ಮರುಳು ಮಾಡುತ್ತದೆ. ಸಂಗೀತ ಎಲ್ಲಾ ರಸಗಳಿಗೂ ಕಿರೀಟ ಪ್ರಾಯವಾದ ಶಾಂತ ರಸದ ಅನುಭೂತಿಯನ್ನುಂಟುಮಾಡುತ್ತದೆ. ಸಂಗೀತಕ್ಕೆ ರೋಗ ನಿರಸನ ಶಕ್ತಿಯೂ ಉಂಟು ಎಂದು ಸಂಗೀತದ ಮಹತ್ವ ತಿಳಿಸಿಕೊಟ್ಟರು.

ಬಳಿಕ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್‌ನ ಸೇವಾ ಕಾರ್ಯವನ್ನು ಶ್ಲಾಘಿಸಿದರು. ನಂತರ ನಾದಬ್ರಹ್ಮ ಹಂಸಲೇಖ ಸಂಗೀತ ಸಂಯೋಜನೆಯ ಹಲವು ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿದ ಕಲಾವಿದರು, ಪ್ರೇಕ್ಷರಿಗೆ ರಸದೌತಣ ನೀಡಿದರು. ಮೇಲುಕೋಟೆ ವೆಂಗಿಪುರ ನಂಬಿಮಠದ ಇಳೈ ಆಳ್ವಾರ್ ಸ್ವಾಮೀಜಿ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಮಾಜ ಸೇವಕ ರಘುರಾಂ ವಾಜಪೇಯಿ, ಚಲನಚಿತ್ರ ನಿರ್ಮಾಪಕ ಪಾರ್ಥಸಾರಥಿ, ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್‌ನ ಗೌರವಾಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಉದ್ಯಮಿ ರವಿಗೌಡ, ನಿರ್ಮಲಾ ಮತ್ತಿತರರು ಉಪಸ್ಥಿತರಿದ್ದರು.

ವಸತಿ ಶಾಲೆ ವಿದ್ಯಾರ್ಥಿ ನಾಪತ್ತೆ



ನಂಜನಗೂಡು, ನ. 12– ವಸತಿ ಶಾಲೆ ವಿದ್ಯಾರ್ಥಿಯೋರ್ವ ನಾಪತ್ತೆಯಾಗಿರುವ ಬಗ್ಗೆ ತಾಲೂಕಿನ ಬಿಳಿಗೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಲೂಕಿನ ಪುಟ್ಟೇಗೌಡನಹುಂಡಿಯ ರಾಮಕೃಷ್ಣ ಮತ್ತು ಮಾಲತಿ ದಂಪತಿ ಪುತ್ರ ಅನಂತಕುಮಾರ್(15) ನಾಪತ್ತೆಯಾದವನಾಗಿದ್ದು, ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲೆಯ 10ನೇ ತರಗತಿ ವಿದ್ಯಾರ್ಥಿಯಾಗಿರುವ ಈತ ನವೆಂಬರ್ 4ರಂದು ಸಂಜೆ ವಸತಿನಿಲಯದಿಂದ ಹೊರಗೆ ಹೋದವನು ಮತ್ತೆ ವಾಪಸ್ಸಾಗಿಲ್ಲ ಎಂದು ಈತನ ತಾಯಿ ಮಾಲತಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಬಿಳಿಗೆರೆ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ. ಈತನ ಬಗ್ಗೆ ಮಾಹಿತಿ ಇರುವವರು ಮೈಸೂರು ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ 0821–2444800 ಅನ್ನು ಸಂಪರ್ಕಿಸುವಂತೆ ಪ್ರಕಟಣೆ ಕೋರಿದೆ.

ಪತ್ರಕರ್ತ ಶಾಂತರಾಜು ಅವರಿಗೆ ನುಡಿನಮನ



ಮೈಸೂರು, ನ.12(ಎಸ್‌ಬಿಡಿ)– ಇತ್ತೀಚೆಗೆ ನಿಧನರಾದ ಪತ್ರಕರ್ತ ಹಾಗೂ ದಲಿತ ಚಿಂತಕ ಶಾಂತರಾಜು ಅವರಿಗೆ ನುಡಿನಮನ ಕಾರ್ಯಕ್ರಮವನ್ನು ಕರ್ನಾಟಕ ದಲಿತ ವೆಲ್‌ಫೇರ್ ಟ್ರಸ್ಟ್ ವತಿಯಿಂದ ಹಮ್ಮಿಕೊಳ್ಳಲಾಗಿತ್ತು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ವಿಶ್ವಮೈತ್ರಿ ಬುದ್ಧವಿಹಾರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಾಂಧಿನಗರದ ಉರಿಲಿಂಗಿಪೆದ್ದಿಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಮಾತನಾಡಿ, ಪತ್ರಿಕೋದ್ಯಮಿ, ಹೋರಾಟಗಾರ ಶಾಂತರಾಜು ಅವರ ಅಗಲಿಕೆ ಸಮಾಜಕ್ಕೆ ತುಂಬಲಾರದ ನಷ್ಟ, ಅವರ ಸಾಧನೆ, ಹೋರಾಟ, ನಡೆದು ಬಂದ ಹಾದಿಯ ಬಗ್ಗೆ ಮುಂದಿನ ಯುವಪೀಳಿಗೆಗೆ ತಿಳಿಸುವ ಉದ್ದೇಶದಿಂದ ಪುಸ್ತಕವೊಂದನ್ನು ಹೊರತರಲಾಗುವುದು ಎಂದು ತಿಳಿಸಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಶಾಂತರಾಜು ಡಾ.ಬಿ.ಆರ್.ಅಂಬೇಡ್ಕರ್ ಸಿದ್ಧಾಂತಗಳಿಂದ ಪ್ರಭಾವಿತರಾಗಿ ಆರ್‌ಎಸ್‌ಎಸ್‌ನಿಂದ ಹೊರಬಂದು ಯುವ ಜನಾಂಗವನ್ನು ಸಂಘಟಿಸುವ ಮೂಲಕ ಅವರಲ್ಲಿ ಸಮ ಸಮಾಜದ ಕನಸನ್ನು ಬಿತ್ತಿದರು. ಸರಳ–ಸಜ್ಜನಿಕೆಯ ವ್ಯಕ್ತಿಯಾಗಿದ್ದ ಅವರು ಕಿರಿಯರನ್ನೂ ಅತ್ಯಂತ ಗೌರವದಿಂದ ಮಾತನಾಡಿಸುತ್ತಿದ್ದರು. ಅಂಬೇಡ್ಕರ್ ಚಿಂತನೆಗಳನ್ನು ಮೈಗೂಡಿಸಿಕೊಂಡು ಸಾಮಾಜಿಕ ಹೋರಾಟ ನಡೆಸಿದರು. ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ನೀಡುತ್ತಿದ್ದರು. ಜನ ಸಾಮಾನ್ಯರ ನೋವುಗಳನ್ನು ಅರ್ಥೈಸಿಕೊಂಡು ಹೋರಾಟ ರೂಪಿಸುತ್ತಿದ್ದರು. ಜನಸೇವೆಗೆ ತಮ್ಮ ಬದುಕು ಮುಡಿಪಾಗಿಡುವ ಮೂಲಕ ಮಾದರಿ ಯಾದರು ಎಂದರು. ಕಾರ್ಯಕ್ರಮದಲ್ಲಿ ಲೇಖಕರಾದ ನಾ. ದಿವಾಕರ, ಪ್ರೊ.ನಂಜರಾಜ ಅರಸು, ಸಿದ್ದಸ್ವಾಮಿ, ನಿವೃತ್ತ ಪ್ರಾಧ್ಯಾಪಕ ಪ್ರೊ.ಶಬ್ಬೀರ್ ಮುಸ್ತಾಫ, ಸಾಹಿತಿಗಳಾದ ಮಾಯಿಗೌಡ, ಬನ್ನೂರು ಕೆ.ರಾಜು, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ನಿವೃತ್ತ ಪ್ರಾಧ್ಯಾಪಕ ಪ್ರೊ.ಮಹೇಶ್‌ಚಂದ್ರ ಗುರು, ಪ್ರಾಧ್ಯಾಪಕ ಪ್ರೊ.ಡಿ.ಆನಂದ್, ರೈತ ಹೋರಾಟ ಗಾರ ಹೊಸಕೋಟೆ ಬಸವರಾಜು, ದಲಿತ ವೆಲ್ ಫೇರ್ ಟ್ರಸ್ಟ್‌ನ ಚಿಕ್ಕಂದಾನಿ, ಶಿವಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಅಭಿವೃದ್ಧಿಗೆ ಜಿ.ಟಿ.ದೇವೇಗೌಡ, ಡಾ.ಸಿ.ಎನ್.ಅಶ್ವತ್ ನಾರಾಯಣ್ ಶ್ರಮಿಸಿದ್ದಾರೆ



ಮೈಸೂರು, ನ.12(ಎಸ್‌ಪಿಎನ್)– ಮೈಸೂರಿನ ಅಭಿವೃದ್ಧಿಗೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಮಾಜಿ ಡಿಸಿಎಂ ಡಾ.ಸಿ.ಎನ್. ಅಶ್ವತ್‌ನಾರಾಯಣ್, ತಮ್ಮ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಸಾಕಷ್ಟು ಕೊಡುಗೆ ನೀಡಿದ್ದಾರೆ ಎಂದು ಸಂಸದ ಪ್ರತಾಪ ಸಿಂಹ ಗುಣಗಾನ ಮಾಡಿದರು.

ಮೈಸೂರು ತಾಲೂಕು ಜಯಪುರ ಹೋಬಳಿಯ ದೇವಮ್ಮ ಪಟೇಲ್ ಚಿಕ್ಕ ಅಂಕೇಗೌಡ ಸಮುದಾಯ ಭವನದಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಹಾಗೂ ಸಾಧಕರಿಗೆ ಸನ್ಮಾನಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಶಾಸಕ ಜಿ.ಟಿ.ದೇವೇಗೌಡ ಅವರು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಕುಡಿಯುವ ನೀರು ಸರಬರಾಜಿಗೆ ಹೆಚ್ಚಿನ ಆದ್ಯತೆ ನೀಡಿದ್ದರಲ್ಲದೆ, ಮೈಸೂರು ಹೊರವಲಯದ ಅಭಿವೃದ್ಧಿ, ರಿಂಗ್‌ರೋಡ್ ಅಭಿವೃದ್ಧಿ, ಮಂಡಕಳ್ಳಿ ವಿಮಾನ ನಿಲ್ದಾಣ ಅಭಿವೃದ್ಧಿಗೂ ಸಹಕಾರ ನೀಡಿದ್ದಾರೆ ಎಂದರು.

ಉನ್ನತ ಶಿಕ್ಷಣ ಮತ್ತು ಐಟಿ–ಬಿಟಿ ಇಲಾಖೆಯ ಮಾಜಿ ಸಚಿವ ಡಾ.ಎಂ.ಅಶ್ವತ್ ನಾರಾಯಣ ಅವರು, ಐಟಿ–ಬಿಟಿ, ಸ್ಟಾರ್ಟ್‌ಅಪ್‌ಗಳು ಮೈಸೂರಿಂದ ಕಾರ್ಯಾಚರಣೆ ನಡೆಸಲು ಕ್ರಮಕೈಗೊಂಡಿದ್ದರು. ಚಾಮರಾಜನಗರದಲ್ಲಿ ವಿವಿ ಸ್ಥಾಪನೆಗೆ ಹೆಚ್ಚಿನ ಆದ್ಯತೆ ನೀಡಿದ್ದರಲ್ಲದೆ, ಉನ್ನತ ಶಿಕ್ಷಣ ಇಲಾಖೆಯಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸಿ, ಉನ್ನತ ಶಿಕ್ಷಣ ಕ್ಷೇತ್ರ ಬದಲಾವಣೆಗೆ ಸಾಕಷ್ಟು ಶ್ರಮಿಸಿದ್ದಾರೆ ಎಂದರು.

ಪ್ರಧಾನಿ ಮೋದಿ ಅಧಿಕಾರಾವಧಿಯಲ್ಲಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೇ ಆಗಿದೆ. ಈ ಯೋಜನೆ ಮೈಸೂರಿನ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದ ಅವರು, ಮೈಸೂರು–ಕೊಡಗು ಮತದಾರರು ನನ್ನನ್ನು ಎರಡು ಬಾರಿ ಗೆಲ್ಲಿಸಿದ್ದಾರೆ. ಅವರ ಋಣ ನನ್ನ ಮೇಲಿದೆ. ಮುಂದಿನ ದಿನಗಳಲ್ಲಿ ಮೈಸೂರಿನ ಅಭಿವೃದ್ಧಿಗೆ ಮತ್ತಷ್ಟು ಶ್ರಮಿಸುವುದಾಗಿ ಘೋಷಿಸಿದರು. ಈ ವೇದಿಕೆಯಲ್ಲಿ ಸನ್ಮಾನಿತರಾಗಿರುವ ಮಾವಿನಹಳ್ಳಿ ನಿವಾಸಿ ಎಂ.ಮಂಜು ಅವರು, ನ್ಯಾಯಾಧೀಶರಾಗಿ ಆಯ್ಕೆಯಾಗಿರುವುದು ಹೆಮ್ಮೆಯ ವಿಷಯ. ಅಲ್ಲದೆ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿರುವ ಎಸ್.ವೈದ್ಯನಾಥ್ ಅವರಿಗೂ ತಮ್ಮ ವೃತ್ತಿ ಜೀವನದಲ್ಲಿ ಮತ್ತಷ್ಟು ಜನಾನುರಾಗಿ ಕೆಲಸ ಮಾಡಲಿ ಎಂದು ಆಶಿಸಿದರು. ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್, ವಕೀಲರಾದ ಸಿ.ಅಪ್ಪಾಜಿಗೌಡ, ಹೇಮಂತ್ ಕುಮಾರ್ ಸೇರಿದಂತೆ ಇತರೆ ಮುಖಂಡರು ಹಾಜರಿದ್ದರು.

ಕೊಡವರಿಗೆ ಸಂವಿಧಾನಿಕ ಭದ್ರತೆಯ ಅಗತ್ಯವಿದೆ

ಜನಜಾಗೃತಿ ಸಭೆಯಲ್ಲಿ ಎನ್.ಯು.ನಾಚಪ್ಪ ಪ್ರತಿಪಾದನೆ



ಮಡಿಕೇರಿ,ನ.12– ಆದಿಮಸಂಜಾತ ಕೊಡವ ಜನಾಂಗಕ್ಕೆ ಸಂವಿಧಾನದ ಭದ್ರತೆಯ ಅಗತ್ಯವಿದೆ. ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆ ನೀಡುವುದು ಮತ್ತು ಕೊಡವರನ್ನು ಎಸ್.ಟಿ ಪಟ್ಟಿಗೆ ಸೇರಿಸುವುದು ಅನಿವಾರ್ಯವಾಗಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಪ್ರತಿಪಾದಿಸಿದ್ದಾರೆ.

ಸಿಎನ್‌ಸಿ ವತಿಯಿಂದ ನೆಲಜಿ ನಾಡ್ ಮಂದ್‌ನಲ್ಲಿ ನಡೆದ ಪಾದಯಾತ್ರೆ ಮತ್ತು ಕೊಡವ ಜನಜಾಗೃತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಭಾರತದ ಸಂವಿಧಾನ ಪರಿಶೀಲನಾ ಆಯೋಗವು ಶಿಫಾರಸ್ಸು ಮಾಡಿರುವ ವರದಿಯನ್ವಯ ಕೊಡವ ಲ್ಯಾಂಡ್ ಸ್ವಯಂ ಶಾಸನದ ಜನ್ಮ ಭೂಮಿಯನ್ನು ರಚಿಸಬೇಕು. ಸಂವಿಧಾನದಲ್ಲಿ ಮೂಲ ವಂಶಸ್ಥ ಜನಾಂಗಕ್ಕೆ ಯಾವುದೇ ವಿಶೇಷ ಪರಿಚ್ಛೇದಗಳ ಷರತ್ತು ಇಲ್ಲದಿರುವುದರಿಂದ ಕೊಡವರನ್ನು ಎಸ್.ಟಿ ಪಟ್ಟಿಗೆ ಸೇರಿಸುವುದು ಅನಿವಾರ್ಯವಾಗಿದೆ. ಆದ್ದರಿಂದ ಉಚ್ಚ ನ್ಯಾಯಾಲಯದ ಆದೇಶದಂತೆ, ಕೊಡವ ಜನಾಂಗದ ನ್ಯಾಯಯುತ, ಸೂಕ್ಷ್ಮ, ಸಮಗ್ರ ಕುಲಶಾಸ್ತ್ರ ಅಧ್ಯಯನ ಆರಂಭಿಸಬೇಕು ಎಂದು ಒತ್ತಾಯಿಸಿದರು.

ಕೊಡವ ಸಾಂಪ್ರದಾಯಿಕ ಉಡುಪಿನಲ್ಲಿ ಕೋವಿಯೊಂದಿಗೆ ಪಾಲ್ಗೊಂಡಿದ್ದ ಕೊಡವ, ಕೊಡವತಿಯರು ಮಾನವ ಸರಪಳಿಯನ್ನು ರಚಿಸಿದರು. ಸೂರ್ಯ–ಚಂದ್ರ, ಮಾತೃ ಭೂಮಿ, ದೈವಿಕ ವಸಂತ ಕಾವೇರಿ, ಸಂವಿಧಾನ ಮತ್ತು ಗುರುಕಾರೋಣ ಹೆಸರಿನಲ್ಲಿ ಸಿಎನ್‌ಸಿಯ ಕೊಡವ ಲ್ಯಾಂಡ್ ಹೋರಾಟಕ್ಕೆ ಬೆಂಬಲ ಸೂಚಿಸಿ ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಅಪ್ಪುಮಣಿಯಂಡ ಗೌರಿ, ಅಪ್ಪುಮಣಿಯಂಡ ಶೈಲ, ನಂದಿನೆರವಂಡ ಪಾರ್ವತಿ, ಅಪ್ಪುಮಣಿಯಂಡ ಎಂ.ರಘು ಸುಬ್ಬಯ್ಯ, ಕೈಬುಲೀರ ಅಯ್ಯಪ್ಪ, ಮಲೆಯಂಡ ಕುಟ್ಟಪ್ಪ, ಅಪ್ಪುಮಣಿಯಂಡ ಬನ್ಸಿ ಭೀಮಯ್ಯ, ಮಲೆಯಂಡ ಈರಪ್ಪ, ಮಲೆಯಂಡ ಎಂ.ವಿಜು ಅಪ್ಪಚ್ಚ, ಅಲ್ಲಾರಂಡ ಸತೀಶ್, ಕೋಟೆರ ಕಿರಣ್, ಮಲೆಯಂಡ ವಿಜು, ಬಾಳೆಯಡ ತಿಮ್ಮಯ್ಯ, ಅಪ್ಪುಮಣಿಯಂಡ ಕಿಶು ಮೇದಪ್ಪ, ಮಣವಟ್ಟೀರ ಎಂ.ಪಾಪು, ಮಂಡೀರ ನಂಜಪ್ಪ, ಚಿಯಕಪೂವಂಡ ನವೀನ್ ನಾಚಪ್ಪ, ಮಲೆಯಂಡ ಕೌಶಿಕ್, ಚಿಯಕಪೂವಂಡ ಸುಜಾ ಪೆಮ್ಮಯ್ಯ, ನಾಪನೆರವಂಡ ಬಸಪ್ಪ, ಚಿಯಕಪೂವಂಡ ಉಮೇಶ್, ಮಲೆಯಂಡ ಅಯ್ಯಪ್ಪ ದೇವತಕ್ಕ ನಾಪನೆರವಂಡ ಪೊನ್ನಪ್ಪ, ನೆಲಜಿ ನಾಡ್ ತಕ್ಕ ಬದ್ದಂಜೆಟ್ಟಿರ ನಾಣಯ್ಯ, ಕಲಿಯಂಡ ಪ್ರಕಾಶ್, ಅರೆಯಡ ಗಿರೀಶ್ ಮತ್ತಿತರರು ಪಾದಯಾತ್ರೆ ಹಾಗೂ ಜನಜಾಗೃತಿ ಸಭೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪುರಸ್ಕೃತ

ಡಾ.ಕಲ್ಯಾಟಂಡ ಬಿ.ಗಣಪತಿ ಅವರಿಗೆ ಕಲ್ಯಾಟಂಡ ಐನ್‌ಮನೆಯಲ್ಲಿ ಸನ್ಮಾನ



ನಾಪೋಕ್ಲು,ನ.12– ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪಡೆದ ಮೈಸೂರಿನ 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕಲ್ಯಾಟಂಡ ಬಿ.ಗಣಪತಿ ಮತ್ತು ಶ್ರೀಮತಿ ರ‍್ಯಾಲಿ ಗಣಪತಿ ಅವರನ್ನು ಕಕ್ಕಬ್ಬೆ ಕುಂಜಿಲ ಗ್ರಾಮದ ಕಲ್ಯಾಟಂಡ ಐನ್‌ಮನೆಯಲ್ಲಿ ಸನ್ಮಾನಿಸಿ, ಗೌರವಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ. ಕೆ.ಬಿ. ಗಣಪತಿ ಅವರು, ಕುಟುಂಬಗಳ ನಡುವೆ ಒಗ್ಗಟ್ಟು, ಸಾಮರಸ್ಯ ಅಗತ್ಯ. ಕಲ್ಯಾಟಂಡ ಕುಟುಂಬದಲ್ಲಿ ವಾರ್ಷಿಕವಾಗಿ 3–4 ಬಾರಿ ಕುಟುಂಬಸ್ಥರ ಸಮ್ಮುಖದಲ್ಲಿ ವಿವಿಧ ಕಾರ್ಯಕ್ರಮದಲ್ಲಿ ನಡೆಯುತ್ತಿರುವುದು ಸಂತಸ ತಂದಿದೆ ಎಂದರು.

ಮನುಷ್ಯ ಸಮಾಜ ಜೀವಿ. ಕುಟುಂಬದ ಎಲ್ಲರೂ ಒಗ್ಗಟ್ಟಿನಿಂದ ಇದ್ದರೆ ಕುಟುಂಬದ ಏಳಿಗೆ ಸಾಧ್ಯ. ಪ್ರತಿಯೊಬ್ಬರು ಶ್ರೀ ಕೃಷ್ಣ ಪರಮಾತ್ಮನ ಮನೋಭಾವನೆ ಹೊಂದಿರಬೇಕು. ಮತ್ತೊಬ್ಬರ ಕಷ್ಟವನ್ನು ಅರಿತು ಅವರಿಗೆ ಸಹಕಾರ ನೀಡುವ ಗುಣ ಬೆಳೆಸಿಕೊಳ್ಳಬೇಕು ಎಂದರು.

ಕುಟುಂಬದ ಎಲ್ಲಾ ಸದಸ್ಯರು ಒಗ್ಗಟ್ಟನ್ನು ಕಾಪಾಡಿಕೊಳ್ಳಬೇಕು. ಕುಟುಂಬದ ಮಕ್ಕಳ ಶಿಕ್ಷಣ ಮತ್ತು ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಉನ್ನತ ವಿದ್ಯಾಭ್ಯಾಸದ ಬಗ್ಗೆ ಒತ್ತು ನೀಡುವ, ಉತ್ತೇಜಿಸುವ ಕೆಲಸ ಮಾಡಬೇಕು ಎಂದು ಅವರು ಸಿಕ್ಕ ಅವಕಾಶಗಳನ್ನು ಉಪಯೋಗಿಸಿಕೊಂಡು ದೃಢ ನಿರ್ಧಾರದಿಂದ ಮುನ್ನಡೆದರೆ ಯಶಸ್ಸು ಸಾಧ್ಯ ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಲ್ಯಾಟಂಡ ಅಪ್ಪಚ್ಚು ವಹಿಸಿದ್ದರು. ಕಾರ್ಯಕ್ರಮವನ್ನು ಉದ್ದೇಶಿಸಿ ಕುಟುಂಬದ ಹಿರಿಯರಾದ ಪ್ರೊ. ಕಲ್ಯಾಟಂಡ ಪೂಣಚ್ಚ, ಕಲ್ಯಾಟಂಡ ಅಯ್ಯಪ್ಪ, ಕಲ್ಯಾಟಂಡ ಮುತ್ತಪ್ಪ ಮಾತನಾಡಿದರು. ವೇದಿಕೆಯಲ್ಲಿ ಕಲ್ಯಾಟಂಡ ಕುಟುಂಬದ ಅಧ್ಯಕ್ಷ ಕಲ್ಯಾಟಂಡ ಚಿಣ್ಣಪ್ಪ, ಕಲ್ಯಾಟಂಡ ರ‍್ಯಾಲಿ ಗಣಪತಿ, ಕಲ್ಯಾಟಂಡ ಶಾರದ ಅಪ್ಪಣ್ಣ ಸೇರಿದಂತೆ ಕುಟುಂಬದ ಸದಸ್ಯರು ಹಾಜರಿದ್ದರು.

ಕಲ್ಯಾಟಂಡ ಜಾನ್ಸಿ ಗಣಪತಿ ಪ್ರಾರ್ಥಿಸಿದರೆ, ಕಲ್ಯಾಟಂಡ ಪ್ರೊ.ಪೂಣಚ್ಚ ಸ್ವಾಗತಿಸಿ ಕಲ್ಯಾಟಂಡ ತೇಜಸ್ವಿನಿ ನಿರೂಪಿಸಿ, ಕಲ್ಯಾಟಂಡ ರಮೇಶ್ ಚಂಗಪ್ಪ ವಂದಿಸಿದರು.

ಪುರಾತನ ದೇವಸ್ಥಾನದ ಆವರಣದಲ್ಲಿ ನಿಧಿ ಪತ್ತೆ

ಸಿದ್ದಾಪುರ, ನ.12– ಪುರಾತನ ದೇವಸ್ಥಾನವೊಂದರ ತಡೆಗೋಡೆ ನಿರ್ಮಾಣಕ್ಕೆ ಪಾಯ ತೆಗೆಯುತ್ತಿದ್ದ ಸಂದರ್ಭದಲ್ಲಿ ತಾಮ್ರದ ಎರಡು ಡಬ್ಬಿಯಲ್ಲಿ ಅರ್ಧ



ಕೆಜಿಯಷ್ಟು ಚಿನ್ನದಂತೆ ಹೋಲುವ ಆಭರಣಗಳು ವಿರಾಜಪೇಟೆ ತಾಲೂಕಿನ ಅಮ್ಮತ್ತಿ–ಸಿದ್ದಾಪುರ ಮಾರ್ಗದ ಆನಂದಪುರದಲ್ಲಿರುವ ಪುರಾತನ ಈಶ್ವರ ದೇವಸ್ಥಾನದಲ್ಲಿ ಪತ್ತೆಯಾಗಿದೆ.

ಟಾಟಾ ಕಾಫಿ ಸಂಸ್ಥೆಗೆ ಸೇರಿದ ತೋಟದೊಳಗಿರುವ ಪುರಾತನ ದೇವಸ್ಥಾನ ತಡಗೋಡೆ ನಿರ್ಮಾಣಕ್ಕಾಗಿ ಮಣ್ಣನ್ನು ತೆಗೆಯುತ್ತಿದ್ದ ಸಂದರ್ಭ ಸುಮಾರು ಮೂರರಿಂದ ನಾಲ್ಕು ಅಡಿ ಅಂತರದಲ್ಲಿ ಎರಡು ತಾಮ್ರದ ಡಬ್ಬಿಗಳಲ್ಲಿ ನಿಧಿ ಪತ್ತೆಯಾಗಿದೆ. ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಆಗಮಿಸಿದ ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರು ಪರಿಶೀಲನೆ ನಡೆಸಿ ತಹಶೀಲ್ದಾರ್ ಪ್ರದೀಪ್ ಕುಮಾರ್ ನಿಧಿ ಆಭರಣಗಳನ್ನು ವಶಕ್ಕೆ ಪಡೆದುಕೊಂಡು ಜಿಲ್ಲಾಧಿಕಾರಿ ಕಚೇರಿಗೆ ರವಾನಿಸಿದ್ದಾರೆ. ಈ ಸಂದರ್ಭ ಸಿದ್ದಾಪುರ ಠಾಣಾಧಿಕಾರಿ ರಾಘವೇಂದ್ರ, ಕಂದಾಯ ಪರಿವೀಕ್ಷಕ ಅನಿಲ್, ಗ್ರಾಮಾಡಳಿತ ಅಧಿಕಾರಿಗಳಾದ ಪ್ರವೀಣ್, ಹೋಮಪ್ಪ ಸೇರಿದಂತೆ ಮತ್ತಿತರರಿದ್ದರು.



ಗುಡ್ಡೆಹೊಸೂರಿನ ಸಾಗರ್‌ಗೆ ರೈತ ಸಾಧಕ ಪ್ರಶಸ್ತಿ

ಗುಡ್ಡೆಹೊಸೂರು, ನ.12– ಇತ್ತೀಚೆಗೆ ಪೊನ್ನಂಪೇಟೆಯ ಸಿ.ಐ.ಟಿ ಕಾಲೇಜಿನಲ್ಲಿ ನಡೆದ ಕೃಷಿ ಯಂತ್ರ ಮೇಳದಲ್ಲಿ 5 ಮಂದಿ ಸಾಧಕರನ್ನು ಸನ್ಮಾನಿಸಿ, ಗೌರವಿಸಲಾಯಿತು. ಪ್ರತಿ ತಾಲೂಕಿನಿಂದ ಒಬ್ಬರಂತೆ ಪ್ರಶಸ್ತಿಗೆ ಆಯ್ಕೆಯಾಗಿದ್ದರು. ಕುಶಾಲನಗರ ತಾಲೂಕು ಬಸವನಹಳ್ಳಿ ಗ್ರಾಮದ ನಿವಾಸಿ ಗುಡ್ಡೆಹೊಸೂರಿನ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾದ ಬಿ.ಎಂ.ಸಾಗರ್ ಅವರ ಹೈನುಗಾರಿಕೆ ಮತ್ತು ರೇಷ್ಮೆ ಬೆಳೆಗಳಲ್ಲಿ ಸಾಧನೆಗಾಗಿ ಪ್ರಶಸ್ತಿ ಪಡೆದರು. ಅದೇ ರೀತಿ ವಿರಾಜಪೇಟೆ ತಾಲೂಕಿನ ರೈತರಾದ ಚಂದ್ರಶೇಖರ್ ಅವರನ್ನು ಗೌರವಿಸಲಾಯಿತು.



ಬರ ನಿರ್ವಹಣೆ ಜವಾಬ್ದಾರಿಯಿಂದ ನಿಭಾಯಿಸಿ

ಮಡಿಕೇರಿ, ನ.12– ಕಳೆದ ಜುಲೈ ಕೊನೆ ವಾರದಲ್ಲಿ ಸುರಿದ ಧಾರಾಕಾರ ಮಳೆಯಿಂದ ಉಂಟಾದ ಹಾನಿ ಸಂಬಂಧ ವರದಿ ನೀಡುವುದರೊಂದಿಗೆ ಹಾಗೂ ಬರ ನಿರ್ವಹಣೆಯನ್ನು ಜವಾಬ್ದಾರಿಯಿಂದ ನಿಭಾಯಿಸುವಂತೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಎಂಜಿನಿಯರ್‌ಗಳಿಗೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಸ್ಪಷ್ಟ ನಿರ್ದೇಶನ ನೀಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ 'ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ' ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜುಲೈ ಕೊನೆ ವಾರದಲ್ಲಿ ಸುರಿದ ಧಾರಾಕಾರ ಮಳೆ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿದಾಗ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸೂಚಿಸಿದ್ದಾರೆ. ಅದರಂತೆ ಅಂಗನವಾಡಿ, ಶಾಲೆ ಹಾಗೂ ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದಂತೆ ಹಾನಿ ಬಗ್ಗೆ ಮಾಹಿತಿ ಪಟ್ಟಿಯನ್ನು ತಾಲೂಕುವಾರು ಒದಗಿಸುವಂತೆ ನಿರ್ದೇಶನ ನೀಡಿದರು.

ಬರ ನಿರ್ವಹಣೆ ಸಂಬಂಧಿಸಿದಂತೆ ಸರ್ಕಾರ ಈಗಾಗಲೇ ಕೊಡಗು ಜಿಲ್ಲೆಗೆ 7.50 ಕೋಟಿ ರೂ. ಬಿಡುಗಡೆ ಮಾಡಿದೆ. ಆ ನಿಟ್ಟಿನಲ್ಲಿ ಗ್ರಾಮೀಣ, ಪಟ್ಟಣ ಹಾಗೂ ನಗರ ಪ್ರದೇಶಗಳಲ್ಲಿ ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಗಮನಹರಿಸಬೇಕು. ಜೊತೆಗೆ ಜಾನುವಾರುಗಳಿಗೆ ಮೇವು ಪೂರೈಕೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಅವರು ಸೂಚಿಸಿದರು.

ಈ ಬಾರಿ ಕೊಡಗು ಜಿಲ್ಲೆಯ 5 ತಾಲೂಕನ್ನು ಬರ ಪೀಡಿತವೆಂದು ಘೋಷಿಸಲಾಗಿದ್ದು, ಮುಂದಿನ ಜನವರಿ, ಫೆಬ್ರವರಿ, ಮಾರ್ಚ್ ತಿಂಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಸಾಧ್ಯತೆ ಇದೆ. ಆದ್ದರಿಂದ ಈ ಬಗ್ಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಂಬಂಧಪಟ್ಟ ಎಂಜಿನಿಯರ್‌ಗಳಿಗೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು. ಬರ ನಿರ್ವಹಣೆಗೆ ಯಾವುದೇ ರೀತಿಯ ಹಣದ ಕೊರತೆ ಇಲ್ಲ. ಸರ್ಕಾರ ಕೊಡಗು ಜಿಲ್ಲೆಗೆ ಈಗಾಗಲೇ 750 ಲಕ್ಷ ರೂ. ಬಿಡುಗಡೆ ಮಾಡಿದೆ. ಆದ್ದರಿಂದ ಅಧಿಕಾರಿಗಳು ಪ್ರಥಮ ಆದ್ಯತೆಯಲ್ಲಿ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಅವರು ಸ್ಪಷ್ಟ ನಿರ್ದೇಶನ ನೀಡಿದರು.

ಜಿ.ಪಂ.ಸಿಇಒ ವರ್ಣಿತ್ ನೇಗಿ ಅವರು ಮಾತನಾಡಿ ಜಲಜೀವನ್ ಮಿಷನ್ ಯೋಜನೆಯಡಿ ಕುಡಿಯುವ ನೀರು ಸಂಪರ್ಕ ಕಲ್ಪಿಸಲಾಗುತ್ತದೆ. ಜೊತೆಗೆ ಗ್ರಾಪಂ ವ್ಯಾಪ್ತಿಯಲ್ಲಿ ಶಾಶ್ವತ ಕುಡಿಯುವ ನೀರಿನ ಮೂಲಗಳನ್ನು ಗುರುತಿಸಿ, ಕುಡಿಯುವ ನೀರು ಪೂರೈಕೆಗೆ ಅಗತ್ಯ ಕ್ರಮವಹಿಸಬೇಕು ಎಂದು ಸೂಚಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎಸ್.ವೀಣಾ ಅವರು ಮಾಹಿತಿ ನೀಡಿ ಕೊಡಗು ಜಿಲ್ಲೆಯಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ವಾಡಿಕೆ ಮಳೆ 223 ಮಿ.ಮೀ. ಆಗಿದ್ದು, ಈ ಬಾರಿ 251 ಮಿ.ಮೀ. ಮಳೆಯಾಗಿದೆ. ಹಾಗೆಯೇ ಅಕ್ಟೋಬರ್ ತಿಂಗಳಲ್ಲಿ ವಾಡಿಕೆ ಮಳೆ 197 ಮಿ.ಮೀ. ಆಗಿದ್ದು, ಈ ಬಾರಿ 166 ಮಿ.ಮೀ. ಮಳೆಯಾಗಿದೆ. ನವೆಂಬರ್ ತಿಂಗಳಲ್ಲಿ ವಾಡಿಕೆ ಮಳೆ 74 ಮಿ,ಮೀ. ಆಗಿದ್ದು, ಈ ಬಾರಿ ನವೆಂಬರ್ ಮೊದಲ ವಾರದಲ್ಲಿ 45 ಮಿ.ಮೀ. ಮಳೆಯಾಗಿದೆ ಎಂದು ವಿವರಿಸಿದರು.

ದಲಿತ ಸಂಘರ್ಷ ಸಮಿತಿ–ಕರ್ನಾಟಕಕ್ಕೆ ಗೋಪಾಲ್ ನೇಮಕ

ವಿರಾಜಪೇಟೆ, ನ12– ದಲಿತ ಸಂಘರ್ಷ ಸಮಿತಿ–ಕರ್ನಾಟಕ ಕೊಡಗು ಜಿಲ್ಲಾ ಸಮಿತಿ ಸಂಚಾಲಕರಾಗಿ ವಿರಾಜಪೇಟೆ ಶಿವಕೇರಿಯ ಹೆಚ್.ಜಿ.ಗೋಪಾಲ್



ಅವರನ್ನು ನೇಮಕ ಮಾಡಲಾಗಿದೆ. ರಾಜ್ಯ ದಲಿತ ಸಂಘರ್ಷ ಸಮಿತಿಯ ಬೆಂಗಳೂರಿನಲ್ಲಿ ಕೇಂದ್ರ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಬೆಂಗಳೂರು ವಿಭಾಗಿಯ ಸಂಚಾಲಕ ಮಂಜುನಾಥ್ ಅಣ್ಣಯ್ಯ ನೇಮಕ ಮಾಡಿ ಆದೇಶಿಸಿದ್ದಾರೆ.

ಡಿಸೆಂಬರ್‌ನಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ಸಮಾವೇಶ

ಚಾಮರಾಜನಗರ, ನ.12– ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ವಿಭಾಗದ ವತಿಯಿಂದ ಡಿಸೆಂಬರ್‌ನಲ್ಲಿ ಕಾರ್ಮಿಕ ಸಮಾವೇಶವನ್ನು ಹಮ್ಮಿಕೊಳ್ಳಲಾಗುವುದು ಎಂದು ಡಿ.ಎನ್. ನಟರಾಜು ಹೇಳಿದರು.



ನಗರದ ಪ್ರವಾಸಿಮಂದಿರದಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, ಕೆಪಿಸಿಸಿ ಕಾರ್ಮಿಕ ರಾಜ್ಯಾಧ್ಯಕ್ಷರಾದ ಪುಟ್ಟಸ್ವಾಮಿ ಗೌಡರ ಆದೇಶದ ಮೇರೆಗೆ ಜಿಲ್ಲೆಯಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ಸಮಾವೇಶವನ್ನು ನಡೆಸಿ, ಕಾಂಗ್ರೆಸ್ ಕಾರ್ಮಿಕ ವಿಭಾಗವನ್ನು ತಳಮಟ್ಟದಿಂದ ಸಂಘಟಿಸಲಾಗುವುದು. ಈ ಕಾರ್ಮಿಕ ಸಂಘಟನೆ ಬಲಿಷ್ಠ ಸಂಘಟನೆಯಾಗಿದ್ದು, ಸರ್ಕಾರದ ವತಿಯಿಂದ ದೊರೆಯುವ ಸವಲತ್ತುಗಳನ್ನು ಕಾರ್ಮಿಕರಿಗೆ ಪ್ರಾಮಾಣಿಕವಾಗಿ ತಪಿಸುವ ಮೂಲಕ ಕಾಂಗ್ರೆಸ್ ಕಾರ್ಮಿಕ ವಿಭಾಗವನ್ನು ಬಲಿಷ್ಠಗೊಳಿಸಲು ಶ್ರಮಿಸಬೇಕು ಎಂದರು. ಮುಂಬರುವ ಲೋಕಸಭಾ ಚುನಾವಣೆ, ಜಿ.ಪಂ., ತಾ.ಪಂ.ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವ ಮೂಲಕ ದಿವಂಗತ ಮಾಜಿ ಸಂಸದರಾದ ಆರ್.ಧ್ರುವನಾರಾಯಣ್, ಮಾಜಿ ಸಚಿವ ಎಚ್.ಎಸ್.ಮಹದೇವಪ್ರಸಾದ್ ಅವರ ಆತ್ಮಕ್ಕೆ ಶಾಂತಿ ದೊರಕಿಸುವ ಕೆಲಸ ಮಾಡಬೇಕಿದೆ ಎಂದರು.

ಜಿಲ್ಲಾ ಕಾರ್ಮಿಕ ವಿಭಾಗದ ಅಧ್ಯಕ್ಷ ಎಸ್ ಮಹೇಶ್ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಜಿಲ್ಲಾ ಕಾರ್ಯಾಧ್ಯಕ್ಷರಾದ ದೊಡ್ಡರಾಯಪೇಟೆ ಮೂರ್ತಿ, ಉಪಾಧ್ಯಕ್ಷ ಎಂ.ಆನಂದ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕುಮಾರ್ ನಾಯಕ್ ಕೆಪಿಸಿಸಿ ಕಾರ್ಮಿಕ ವಿಭಾಗದ ಜಿಲ್ಲಾ ಉಸ್ತುವಾರಿ ಸಿದ್ದರಾಜು , ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್, ಎಂ ಮಾದೇಶ್, ಕೊಳ್ಳೇಗಾಲ ಕಾರ್ಮಿಕ ವಿಭಾಗದ ಅಧ್ಯಕ್ಷರು, ರಾಜಕುಮಾರ್ ಜಿಲ್ಲಾ ಉಪಾಧ್ಯಕ್ಷರು, ಹಾಗೂ ಕಾರ್ಮಿಕ ವಿಭಾಗದ ಜಿಲ್ಲಾ ಕಾರ್ಯದರ್ಶಿ ನಂಜಪ್ಪ ಇತರರು ಭಾಗವಹಿಸಿದ್ದರು.

ನಾನು ಕೂಡಾ ಲೋಕಸಭಾ ಬಿಜೆಪಿ ಟಿಕೆಟ್ ಆಕಾಂಕ್ಷಿ

ಚಾಮರಾಜನಗರ, ನ.12– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಮೀಸಲು ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ ಎಂದು ಮಾಜಿ ಶಾಸಕ ಸಿ. ರಮೇಶ್ ಹೇಳಿದರು. ಲೋಕಸಭೆಯಲ್ಲಿ 5 ಮೀಸಲು ಕ್ಷೇತ್ರಗಳಿದ್ದು, ಅದರಲ್ಲಿ ಒಂದಾದ ಚಾಮರಾಜನಗರ ಕ್ಷೇತ್ರವನ್ನು ಎಡಗೈ ಸಮುದಾಯದವರಿಗೆ ನೀಡಬೇಕು ಎಂದು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.



ಬಿಜೆಪಿಯಲ್ಲಿ ನಾನು ಹಿರಿಯ ಮುಖಂಡನಾಗಿದ್ದು, ನನಗೆ ಮೊದಲ ಆದ್ಯತೆ ಕೊಡಬೇಕು. ಇಲ್ಲವೇ ಯುವ ನಾಯಕರಿಗೆ ಟಿಕೆಟ್ ನೀಡುವುದಾದರೆ, ನನ್ನ ಮಗ ಆರ್. ಅರ್ಜುನ್‌ಗೆ ಟಿಕೆಟ್ ನೀಡಬೇಕು ಎಂದು ಮನವಿ ಮಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಷ್ಟು ಸುಳ್ಳು ಹೇಳುವವರು ಯಾರೂ ಇಲ್ಲ ಎಂದು ಸಿಎಂ ವಿರುದ್ಧ ವಾಗ್ದಾಳಿ ನಡೆಸಿದ ಅವರು, ನಗರಸಭೆಗೆ ಅಧ್ಯಕ್ಷ ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಸುವಲ್ಲಿ ವಿಫಲರಾಗಿದ್ದಾರೆ. ಮೇಜರ್ ಕಮ್ಯೂನಿಟಿಗಳನ್ನು ನಿರ್ನಾಮ ಮಾಡುವಲ್ಲಿ ಮುಂದಾಗಿದ್ದಾರೆ ಎಂದು ಆರೋಪ ಮಾಡಿದರು.

ಸದಾಶಿವ ಆಯೋಗದ ಪ್ರಕಾರ ಎಡಗೈ ಸಮುದಾಯಕ್ಕೆ ಶೇ.6ರಷ್ಟು, ಬಲಗೈ ಸಮುದಾಯಕ್ಕೆ ಶೇ. 5 ರಷ್ಟು ಸ್ಥಾನಮಾನ ರಾಜಕೀಯದಲ್ಲಿ ಸಿಗಬೇಕು. ಆದರೆ, ಎಡಗೈನವರಿಗೆ 2, ಬಲಗೈನವರಿಗೆ 3 ಮಂತ್ರಿಸ್ಥಾನ ಸಿಕ್ಕಿದೆ ಎಂದರು. ಮುಂಬರುವ ದಿನಗಳಲ್ಲಿ ರಾಜಕೀಯದಲ್ಲಿ ಏರಪೇರಾಗಲಿದ್ದು, ನೈಜ ಕಾಂಗ್ರೆಸ್ಸಿಗರು, ನಕಲಿ ಕಾಂಗ್ರೆಸ್ಸಿಗರನ್ನು ಹೊರಹಾಕಲಿದ್ದಾರೆ ಎಂದು ಭವಿಷ್ಯ ನುಡಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ವೆಂಕಟೇಶ್, ಮಹದೇವ, ಪುಟ್ಟಯ್ಯ ಇದ್ದರು.

ಮಾದಪ್ಪನ ಬೆಟ್ಟದಲ್ಲಿ ದೀಪಾವಳಿ ಜಾತ್ರೆ ಆರಂಭ

- 5 ದಿನಗಳ ಕಾಲ ಬೆಟ್ಟದಲ್ಲಿ ಜಾತ್ರಾ ಮಹೋತ್ಸವ
- ರಾಜ್ಯದ ವಿವಿಧೆಡೆಯಿಂದ ಲಕ್ಷಾಂತರ ಭಕ್ತರ ಆಗಮನ



ಚಾಮರಾಜನಗರ, ನ.12– ಜಿಲ್ಲೆಯ ಪ್ರಸಿದ್ಧ ಯಾತ್ರಾ ಸ್ಥಳ ಮಲೆ ಮಹದೇಶ್ವರಸ್ವಾಮಿ ಬೆಟ್ಟದಲ್ಲಿ ಶನಿವಾರದಿಂದ ದೀಪಾವಳಿ ಜಾತ್ರಾ ಮಹೋತ್ಸವ ಚಾಲನೆಗೊಂಡಿದ್ದು, ಎಲ್ಲೆಡೆ ಸಂಭ್ರಮ ಮನೆ ಮಾಡಿದೆ.

ಐದು ದಿನಗಳ ಕಾಲ ನಡೆಯುವ ಜಾತ್ರಾ ಮಹೋತ್ಸವದ ಅಂಗವಾಗಿ ಬೆಟ್ಟದಲ್ಲಿ ಕಳೆದೊಂದು ತಿಂಗಳಿನಿಂದ ಸಕಲ ಸಿದ್ಧತೆ ಕೈಗೊಳ್ಳಲಾಗಿದ್ದು, ಧಾರ್ಮಿಕ ಪೂಜಾ ಕೈಂಕರ್ಯಗಳು ನಡೆಯುತ್ತಿವೆ.

ಜಾತ್ರೆಯ ಮೊದಲ ದಿನವಾದ ಶನಿವಾರ ಮಾದಪ್ಪನಿಗೆ ಎಣ್ಣೆ ಮಜ್ಜನ ಸೇವೆ ಸಂಭ್ರಮದಿಂದ ನಡೆಯಿತು. ಎರಡನೇ ದಿನವಾದ ಭಾನುವಾರ ನರಕ ಚತುರ್ದಶಿ ಅಂಗವಾಗಿ ವಿಶೇಷ ಸೇವೆಗಳು ಹಾಗೂ ಉತ್ಸವಾದಿಗಳು ನಡೆಯಿತು. ನ. 13ರಂದು ಅಮಾವಾಸ್ಯೆಯ ಪ್ರಯುಕ್ತ ಹಾಲರವಿ ಉತ್ಸವ ಹಾಗೂ ಬೇಡಗಂಪಣ ಸಮುದಾಯದ ವಿಧಿವಿಧಾನದಲ್ಲಿ ಉತ್ಸವಾದಿಗಳು, ಬಿಳಿ ಆನೆ ಉತ್ಸವಗಳು ನೆರವೇರಲಿವೆ. ನ. 14ರಂದು ಬೆಳಗ್ಗೆ 8.50ರಿಂದ 9.50ರ ನಡುವೆ ಮಹದೇಶ್ವರಸ್ವಾಮಿಯ ಬ್ರಹ್ಮ ರಥೋತ್ಸವ ನಡೆಯಲಿದ್ದು, ಇದಕ್ಕಾಗಿ ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿದ್ದು, ಬಣ್ಣ–ಬಣ್ಣದ ಬಟ್ಟೆಗಳಿಂದ ಮಾದಪ್ಪನ ರಥ ಸಿದ್ಧಗೊಂಡಿದೆ.

ಭಕ್ತರಿಗೆ ವಿಶೇಷ ಸೌಕರ್ಯ: ಜಾತ್ರೆಯಲ್ಲಿ ಲಕ್ಷಾಂತರ ಭಕ್ತರು ಭಾಗವಹಿಸುವ ನಿರೀಕ್ಷೆ ಇರುವುದರಿಂದ ಭಕ್ತಾದಿಗಳ ಅನುಕೂಲಕ್ಕಾಗಿ ನೆರಳಿನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ನಿರಂತರ ಅನ್ನ ದಾಸೋಹದ ವ್ಯವಸ್ಥೆ ಕಲ್ಪಿಸಲಾಗಿದೆ.

ಜೊತೆಗೆ ಕ್ಷೇತ್ರಕ್ಕೆ ರಾಜ್ಯದ ನಾನಾ ಭಾಗಗಳಿಂದ ಕಾಲ್ನಡಿಗೆಯಲ್ಲಿ ಬರುವಂತಹ ಭಕ್ತರಿಗೆ ತಾಳಬೆಟ್ಟದಿಂದ ಕ್ಷೇತ್ರದವರೆಗೆ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಅಲ್ಲಲ್ಲಿ ತಂಗಲು ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಕಂಗೊಳಿಸುತ್ತಿರುವ ಮಾದಪ್ಪನ ಸನ್ನಿಧಿ: ದೇವಾಲಯದ ರಾಜಗೋಪುರ, ಮುಖ್ಯದ್ವಾರ ಹಾಗೂ ಇತರ ದ್ವಾರಗಳನ್ನು ತಳಿರು ತೋರಣ, ಹೂಗಳಿಂದ ಅಲಂಕರಿಸಲಾಗಿದೆ. ಅಲ್ಲದೇ ದೇವಾಲಯ ಹಾಗೂ ಸಾಲೂರು ಮಠಕ್ಕೆ ತೆರಳುವ ಮಾರ್ಗವನ್ನು ಹಾಗೂ ಪ್ರಮುಖ ರಸ್ತೆಗಳಲ್ಲಿ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದೆ. ಮಾದಪ್ಪನ ದೇಗುಲಕ್ಕೆ ಮಾಡಲಾಗಿರುವ ಆಕರ್ಷಕ ವಿದ್ಯುತ್ ದೀಪಾಲಂಕಾರ ನೋಡುಗರನ್ನು ಆಕರ್ಷಿಸುತ್ತಿದೆ. ವಿದ್ಯುತ್ ದೀಪಾಲಂಕಾರದಿಂದ ಮಾದಪ್ಪನ ಸನ್ನಿಧಿ ಕೈಲಾಸದ ರಾಜಧಾನಿಯಂತೆ ಕಂಗೊಳಿಸುತ್ತಿದೆ.

500ಕ್ಕೂ ಹೆಚ್ಚು ಬಸ್ ವ್ಯವಸ್ಥೆ: ಜಾತ್ರೆಗೆ ರಾಜ್ಯದ ವಿವಿಧೆಡೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಾರೆ. ಹೀಗಾಗಿ ಚಾಮರಾಜನಗರ ಜಿಲ್ಲೆಯ ಎಲ್ಲಾ ಬಸ್ ಡಿಪೋಗಳಿಂದ ಸುಮಾರು 500ಕ್ಕೂ ಹೆಚ್ಚು ಬಸ್ ಸೌಲಭ್ಯವನ್ನು ಕಲ್ಪಿಸಲಾಗಿದೆ.

ದೀಪಾವಳಿ ಹಬ್ಬದ ಸಂದರ್ಭವಾಗಿರುವುದರಿಂದ ಬೆಂಗಳೂರು ಹಾಗೂ ಮೈಸೂರು ಭಾಗಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವರು. ಜೊತೆಗೆ ಜಿಲ್ಲೆಯ ವಿವಿಧೆಡೆಯಿಂದಲೂ ಬರುವ ಭಕ್ತರಿಗೆ ತೊಂದರೆಯಾಗಬಾರದು ಎನ್ನುವ ನಿಟ್ಟಿನಲ್ಲಿ ಹೆಚ್ಚಿನ ಸಂಚಾರ ವ್ಯವಸ್ಥೆ ಕಲ್ಪಿಸಲಾಗಿದೆ ಎನ್ನುತ್ತಾರೆ ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಮಾಹಿತಿ ನೀಡಿದ್ದಾರೆ.

ಸೂಕ್ತ ಬಂದೋಬಸ್ತ್: ಬೆಟ್ಟಕ್ಕೆ ಹೋಗಲು ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸುವ ಸಲುವಾಗಿ ತಾಳಬೆಟ್ಟದಲ್ಲಿ ಬಸ್ ನಿಲ್ದಾಣ ಮಾಡಲಾಗಿದೆ. ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ಸಂಚಾರಕ್ಕೆ ತಡೆಯೊಡ್ಡಲಾಗಿದೆ. ಜಾತ್ರಾ ಮಹೋತ್ಸವದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯಬಾರದೆಂದು ಮುನ್ನೆಚ್ಚರಿಕೆ ಕ್ರಮ ವಹಿಸಿ ಪೊಲೀಸ್ ಇಲಾಖೆಯಿಂದ ಕೆಎಸ್‌ಆರ್‌ಪಿ ತುಕಡಿ, ಜಿಲ್ಲೆಯ ವಿವಿಧೆಡೆಯಿಂದ ಪೊಲೀಸ್ ಅಧಿಕಾರಿಗಳು ಹಾಗೂ ಹೋಂ ಗಾರ್ಡ್ಸ್‌ಗಳನ್ನು ನಿಯೋಜಿಸಲಾಗಿದೆ. ಒಟ್ಟಾರೆ 550 ಜನರ ಪೊಲೀಸ್ ಹಾಗೂ ಹೋಂ ಗಾರ್ಡ್ಸ್ ಸಿಬ್ಬಂದಿ ನಿಯೋಜಿಸಲಾಗಿದೆ.

ರಾಜ್ಯ ಮಟ್ಟದ ಚೆಸ್ ಪಂದ್ಯಾವಳಿ ಯಶಸ್ವಿ ಮುಕ್ತಾಯ





ಚಾಮರಾಜನಗರ, ನ.12– ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ (ಪದವಿ ಪೂರ್ವ) ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಪದವಿ ಪೂರ್ವ ಕಾಲೇಜುಗಳ ರಾಜ್ಯ ಮಟ್ಟದ ಚೆಸ್ ಪಂದ್ಯಾವಳಿ ಯಶಸ್ವಿಯಾಗಿ ಮುಕ್ತಾಯವಾಯಿತು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದ್ದ ಚೆಸ್ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ಗಣ್ಯರು ವಿಜೇತರಿಗೆ ಟ್ರೋಫಿ ವಿತರಿಸಿದರು.

ಸಮಾರಂಭವನ್ನುದ್ದೇಶಿಸಿ ಮಾತನಾಡಿದ ವಿಧಾನಪರಿಷತ್ತಿನ ಸದಸ್ಯರಾದ ಮರಿತಿಬ್ಬೇಗೌಡ, ಗಡಿ ಜಿಲ್ಲೆ ಚಾಮರಾಜನಗರದಲ್ಲಿ ರಾಜ್ಯ ಮಟ್ಟದ ಚೆಸ್ ಪಂದ್ಯಾವಳಿ ಆಯೋಜನೆಗೊಂಡು ಯಶಸ್ವಿಯಾಗಿರುವುದು ಹೆಮ್ಮೆಯ ವಿಚಾರವಾಗಿದೆ. ಕ್ರೀಡೆಯಲ್ಲಿ ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕು. ವ್ಯಕ್ತಿತ್ವ ಶಿಸ್ತು ರೂಪಿಸಲು ಸಹಕಾರಿಯಾಗುವ ಕ್ರೀಡಾ ಚಟುವಟಿಕೆಗಳಲ್ಲಿ ಪ್ರತಿಯೊಬ್ಬರೂ ಭಾಗವಹಿಸಬೇಕು ಎಂದರು.

ಏಕಾಗ್ರತೆ, ಚತುರತೆ, ಬುದ್ಧಿವಂತಿಕೆ ಸಾಮರ್ಥ್ಯದ ಚದುರಂಗ ಆಟ ನಮ್ಮ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಇದೆ. ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಕ್ರೀಡೆಗಳಲ್ಲಿ ಪಾಲ್ಗೊಂಡಾಗ ಉತ್ಸಾಹ ಹೆಚ್ಚುತ್ತದೆ. ಶಿಕ್ಷಣದ ಜತೆ ಕ್ರೀಡೆಗಳತ್ತಲೂ ಒಲವು ತೋರಬೇಕು ಎಂದು ಮರಿತಿಬ್ಬೇಗೌಡ ಅವರು ಸಲಹೆ ಮಾಡಿದರು. ನಗರಸಭಾ ಸದಸ್ಯರಾದ ಮಹೇಶ್ ಅವರು ಮಾತನಾಡಿ, ವಿದ್ಯಾರ್ಥಿಗಳು ಮೊಬೈಲ್ ಮೇಲಿನ ಆಕರ್ಷಣೆಯಿಂದ ಹೊರಬಂದು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು ಒಳಿತು. ವಿದ್ಯಾರ್ಥಿಗಳಿಗೆ ಈ ನಿಟ್ಟಿನಲ್ಲಿ ಉತ್ತೇಜನ ನೀಡಬೇಕು ಎಂದು ತಿಳಿಸಿದರು.

ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಸಿ.ಮಂಜುನಾಥ ಪ್ರಸನ್ನ ಅವರು ಮಾತನಾಡಿ ರಾಜ್ಯ ಮಟ್ಟದ ಚೆಸ್ ಪಂದ್ಯಾವಳಿ ಜಿಲ್ಲೆಯಲ್ಲಿ ಯಶಸ್ವಿಯಾಗಲು ಅನೇಕರು ಶ್ರಮಿಸಿದ್ದಾರೆ. ಈ ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸುವುದಾಗಿ ನುಡಿದರು.

ಪಂದ್ಯಾವಳಿಯ ಮುಖ್ಯ ತೀರ್ಪುಗಾರರಾದ ವರ್ಲ್ಡ್ ಚೆಸ್ ಫೆಡರೇಶನ್‌ನ ರವಿಕಿರಣ್, ಇನ್ನಿತರ ಪ್ರಮುಖ ತೀರ್ಪುಗಾರರಾದ ದರ್ಶನ್, ಭರತ್, ಕಿಶೋರ್, ಕಾಂತರಾಜು, ಪ್ರಾಚಾರ್ಯರ ಸಂಘದ ಅಧ್ಯಕ್ಷರಾದ ಪ್ರಮೋದ್,ಕಾರ್ಯದರ್ಶಿ ಬಸವರಾಜಪ್ಪ, ಸ್ವಾಮಿ, ಸರ್ಕಾರಿ ನೌಕರರ ಸಂಘದ ಸದಸ್ಯರಾದ ಮೂರ್ತಿ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ರಾಜ್ಯ ಮಟ್ಟದ ಚೆಸ್ ಪಂದ್ಯಾವಳಿ ವಿಜೇತರು

ಚಾಮರಾಜನಗರ, ನ.12– ನಗರದಲ್ಲಿ ನಡೆದ ಪದವಿ ಪೂರ್ವ ವಿಭಾಗದ ವಿದ್ಯಾರ್ಥಿಗಳ ರಾಜ್ಯ ಮಟ್ಟದ ಚೆಸ್ ಪಂದ್ಯಾವಳಿ ವಿಜೇತರ ವಿವರ ಇಂತಿದೆ

ಬಾಲಕರ ವಿಭಾಗ: ಪ್ರಥಮ ಸ್ಥಾನ–ಧನುಷ್ ರಾಮ್.ಎಂ.(ದಕ್ಷಿಣ ಕನ್ನಡ), ದ್ವಿತೀಯ ಸ್ಥಾನ –ಕೋಮಲ್ ಶ್ರೀವತ್ಸವ್ ಸಜ್ಜಾ(ಬೆಂಗಳೂರು ದಕ್ಷಿಣ), ತೃತೀಯ ಸ್ಥಾನ –ಮಾನ್ವಿತ್ ಕಣಜಲು(ದಕ್ಷಿಣ ಕನ್ನಡ), ನಾಲ್ಕನೇ ಸ್ಥಾನ– ಲೀಲಾಜೈ ಕೃಷ್ಣ. ಎನ್.(ಚಿಕ್ಕಮಗಳೂರು), ಐದನೇ ಸ್ಥಾನ –ಕಾರ್ತಿಕ್. ಆರ್.(ಉಡುಪಿ), ಆರನೇ ಸ್ಥಾನ–ರಿಷಿತ್ ಎಸ್.ಗೌಡ, (ಮೈಸೂರು), ಏಳನೇ ಸ್ಥಾನ–ಶ್ರೀಕರ ದರ್ಭ(ಬೆಳಗಾವಿ)

ಬಾಲಕಿಯರ ವಿಭಾಗ: ಪ್ರಥಮ ಸ್ಥಾನ–ಪ್ರಸಿದ್ಧಿ ಭಟ್ (ಮೈಸೂರು), ದ್ವಿತೀಯ ಸ್ಥಾನ– ಮೂಲ ಗ್ರೀಷ್ಮಾ(ಶಿವಮೊಗ್ಗ), ತೃತೀಯ ಸ್ಥಾನ – ಪಾಂಡೆ ವೇದಾನ್ಷಿ(ಬೆಂಗಳೂರು ದಕ್ಷಿಣ), ನಾಲ್ಕನೇ ಸ್ಥಾನ– ಛಾಯಾಸಿ. ಪೂಜಾರಿ (ಉಡುಪಿ), ಐದನೇ ಸ್ಥಾನ– ಸಾನ್ವಿ ಎಸ್. ಬಲ್ಲಾಳ್(ಉಡುಪಿ), ಆರನೇ ಸ್ಥಾನ –ಯಶಸ್ವಿನಿ ಎಸ್.ದೋಂಗ್ರೆ (ಬೆಂಗಳೂರು ಉತ್ತರ), ಏಳನೇ ಸ್ಥಾನ– ಅರ್ಚನ ಎಸ್.ಇಂದ್ರಾಲಿ(ಧಾರವಾಡ)

ಒಂದನೇ ಪುಟದಿಂದ

ಜೆಡಿಎಸ್ ಬರ ಅಧ್ಯಯನ

70 ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಬ್ಯಾಂಕ್, ಸೊಸೈಟಿ ಹಾಗೂ ಖಾಸಗಿಯಾಗಿ ಲಕ್ಷಾಂತರ ರೂಪಾಯಿ ಸಾಲ ಮಾಡಿ ಬೆಳೆದಿರುವ ರೈತರು ಬೆಳೆ ನಷ್ಟದಿಂದಾಗಿ ಸಾಲದ ಸುಳಿಗೆ ಸಿಲುಕಿದ್ದಾರೆ. ಮಾಡಿದ ಸಾಲಕ್ಕೆ ಬಡ್ಡಿ ಕಟ್ಟಲಾಗದೆ ಕಂಗಾಲಾಗಿದ್ದಾರೆ. ಈ ಹಿನ್ನೆಲೆ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಮಾಜಿ ಶಾಸಕರು ಇಂದು ಮೈಸೂರು ಜಿಲ್ಲೆಯಲ್ಲಿ ಬರ ಅಧ್ಯಯನ ನಡೆಸಿದರು. ಮೈಸೂರಿನ ಹುಣಸೂರು ತಾಲೂಕು ಬೆಟ್ಟದೂರು ಗ್ರಾಮಕ್ಕೆ ಭೇಟಿ ನೀಡಿ ಬರ ಪರಿಸ್ಥಿತಿ ಅವಲೋಕಿಸಿದರು.

ಈ ವೇಳೆ ಮಾತನಾಡಿದ ಜಿ.ಟಿ.ದೇವೇಗೌಡರು, ಪ್ರೇಮಮ್ಮ ಎಂಬ ರೈತ ಮಹಿಳೆ 5 ಎಕರೆಯಲ್ಲಿ ಮುಸುಕಿನ ಜೋಳ ಬೆಳೆದಿದ್ದಾರೆ. ಸೊಸೈಟಿಯಿಂದ 2.75 ಲಕ್ಷ ಹಾಗೂ ಖಾಸಗಿಯಾಗಿ 3 ಲಕ್ಷ ರೂ. ಸಾಲ ಪಡೆದು ಬೆಳೆದಿರುವ ಬೆಳೆ ಮಳೆ ಇಲ್ಲದೆ ಒಣಗಿದೆ. ಲಕ್ಷಾಂತರ ರೂ. ನಷ್ಟಕ್ಕೊಳಗಾಗಿರುವ ರೈತ ಮಹಿಳೆಯೊಬ್ಬರ ಗೋಳಿನ ಕಥೆ ಇದು. ಇಂತಹ ಲಕ್ಷಾಂತರ ರೈತರು ನಷ್ಟಕ್ಕೊಳಗಾಗಿ ಸಂಕಷ್ಟದಲ್ಲಿದ್ದಾರೆ. ಆದರೆ ರಾಜ್ಯ ಕಾಂಗ್ರೆಸ್ ಸರ್ಕಾರ ಈ ತನಕ ನಯಾ ಪೈಸೆ ಪರಿಹಾರ ನೀಡಿಲ್ಲ ಎಂದು ಆರೋಪಿಸಿದರು.

ಮೈಸೂರು ಜಿಲ್ಲೆಯಲ್ಲಿ 85 ಸಾವಿರ ಹೆಕ್ಟೇರ್‌ನಲ್ಲಿ 70 ಕೋಟಿ ಬೆಳೆ ನಷ್ಟವಾಗಿದೆ ಎಂದು ಅಧಿಕಾರಿಗಳು ಅಧ್ಯಯನ ಮಾಡಿ ಅಂದಾಜಿಸಿದ್ದಾರೆ. ಆದರೆ ಈ ಸರ್ವೆಯಲ್ಲಿ ಕಬ್ಬು, ಹೊಗೆಸೊಪ್ಪು ಸೇರಿದಂತೆ ಹಲವು ಬೆಳೆ ಕೈ ಬಿಟ್ಟಿದ್ದಾರೆ. ಮುಂಗಾರು ವೇಳೆಯೇ ಈ ಸರ್ವೆ ಮಾಡಿಸಿದ್ದರೆ ಸುಮಾರು 2 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟವಾಗಿರುವ ಲೆಕ್ಕ ಸಿಗುತ್ತಿತ್ತು. ರಾಜ್ಯ ಸರ್ಕಾರ ನಿಖರವಾದ ಸರ್ವೆ ಕೂಡ ನಡೆಸಿಲ್ಲ ಎಂದು ದೂರಿದರು.

ಕಲ್ಲಿದ್ದಲು ಖರೀದಿಗೆ ಬಜೆಟ್‌ನಲ್ಲಿ ಹಣ ಇಟ್ಟಿಲ್ಲ. ಇದರಿಂದ ವಿದ್ಯುತ್ ಅಭಾವ ಹೆಚ್ಚಾಗಿದೆ. ರೈತರ ಪಂಪ್‌ಸೆಟ್‌ಗಳಿಗೆ ಹಗಲು ಬದಲು ರಾತ್ರಿ ವೇಳೆ ವಿದ್ಯುತ್ ನೀಡುತ್ತಾರೆ. ರಾತ್ರಿ ವೇಳೆ ನೀರು ಹಾಯಿಸಲು ಹೋದಾಗ ರೈತರು ಹುಲಿ, ಚಿರತೆ ಸೇರಿದಂತೆ ಇತರೆ ಕಾಡು ಪ್ರಾಣಿಗಳಿಂದ ಸಾವನ್ನಪ್ಪುತ್ತಿದ್ದಾರೆ. ಇಂತಹ ಸ್ಥಿತಿಯಲ್ಲಿ ಸಂಕಷ್ಟದಲ್ಲಿರುವ ರೈತರನ್ನು ಭೇಟಿ ಮಾಡಿ ಅವರಿಗೆ ಧೈರ್ಯ ತುಂಬುತ್ತಿದ್ದೇವೆ ಎಂದು ಸ್ಪಷ್ಟಪಡಿಸಿದರು.

ವಿರೋಧ ಪಕ್ಷಗಳು ಮಾಡುತ್ತಿರುವ ಬರ ಅಧ್ಯಯನ ವ್ಯರ್ಥ ಎಂದು ಟೀಕಿಸುತ್ತಾರೆ. ರಾಜ್ಯವನ್ನಾಳುತ್ತಿರುವ ನೀವಾದರೂ ಬರ ಅಧ್ಯಯನ ಮಾಡುತ್ತಿಲ್ಲ, ಹೀಗಿರುವಾಗ ನಾವು ಬರ ಅಧ್ಯಯನ ಮಾಡಿದರೆ ಏನು ತಪ್ಪು ಎಂದು ಪ್ರಶ್ನಿಸಿದರು.

ಬೆಳೆ ನಷ್ಟದಿಂದ ರೈತರು ಬಹಳ ನೊಂದಿದ್ದಾರೆ. ತಮ್ಮ ನೋವಿಗೆ ಸ್ಪಂದಿಸದ ಸರ್ಕಾರದ ವಿರುದ್ಧ ಆಕ್ರೋಶಭರಿತರಾಗಿದ್ದಾರೆ. ಇದರಿಂದ ಡಿಸೆಂಬರ್ 4ರಂದು ಬೆಳಗಾವಿಯಲ್ಲಿ ರಾಜ್ಯಾದ್ಯಂತ ಎಲ್ಲಾ ರೈತರು ಸೇರುತ್ತಾರೆ ಎಂದರು.

ಕೂಡಲೇ ಬರ ಪರಿಹಾರ ಬಿಡುಗಡೆ ಮಾಡದಿದ್ದರೆ ಬೆಳಗಾವಿಯಲ್ಲಿ ಅಧಿವೇಶನ ನಡೆಸಲು ವಿರೋಧ ಪಕ್ಷಗಳು ಬಿಡುವುದಿಲ್ಲ. ಜೊತೆಗೆ ವಿಧಾನಸಭೆಗೆ ಹೋಗದಂತೆ ರೈತರು ತಡೆದು ಮುತ್ತಿಗೆ ಹಾಕುತ್ತಾರೆ. ರೈತರ ಈ ಹೋರಾಟಕ್ಕೆ ನಮ್ಮ ಬೆಂಬಲವು ಇದೆ ಎಂದು ಜಿ.ಟಿ.ದೇವೇಗೌಡರು ಭರವಸೆ ನೀಡಿದರು. ಬರ ಪರಿಹಾರ ನೀಡುವಂತೆ ಕೇಳಿದರೆ ಕೇಂದ್ರ ಸರ್ಕಾರದ ಕಡೆ ಬೊಟ್ಟು ಮಾಡಿ ತೋರಿಸುತ್ತಾರೆ. ಹಿಂದಿನ ಬಿಜೆಪಿ ಸರ್ಕಾರ ಕೇಂದ್ರ ಸರ್ಕಾರವನ್ನು ನೆಚ್ಚಿಕೊಳ್ಳದೆ 2,600 ಕೋಟಿ ರೂಪಾಯಿ ಬರ ಪರಹಾರ ನೀಡಿ ರೈತರ ನೋವಿಗೆ ಸ್ಪಂದಿಸಿತ್ತು. ಆದರೆ ಈಗಿನ ಕಾಂಗ್ರೆಸ್ ಸರ್ಕಾರ ತನ್ನ ಬಾಬ್ತಾಗಿ ನಯಾ ಪೈಸೆ ಹಣ ನೀಡಿಲ್ಲ ಎಂದು ಕಿಡಿಕಾರಿದರು. ಶಾಸಕ ಜಿ.ಡಿ.ಹರೀಶ್ ಗೌಡ, ಮಾಜಿ ಶಾಸಕರಾದ ಸಾ.ರಾ.ಮಹೇಶ್, ಅಶ್ವಿನಿಕುಮಾರ್, ಕೆ.ಮಹದೇವ್ ಸೇರಿದಂತೆ ಹಲವು ಜೆಡಿಎಸ್ ಮುಖಂಡರು ಬರ ಅಧ್ಯಯನದಲ್ಲಿ ಭಾಗಿಯಾಗಿದ್ದರು.

ರೈತರ ಹೊಣೆ ಏಕೆ ಹೊರುತ್ತಿಲ್ಲ?

ರೈತರ ಸಾಲ ಮನ್ನಾ ಮಾಡಿದರು. ನೀವು ಕೂಡ ಸಾಲ ಮನ್ನಾ ಮಾಡಿ ರೈತರಿಗೆ ನೆರವಾಗಿ ಎಂದು ಶಾಸಕ ಜಿ.ಟಿ. ಹರೀಶ್‌ಗೌಡ ಮನವಿ ಮಾಡಿದರು.

ರೈತರು ಹೊಸದಾಗಿ ಬೋರ್ ವೆಲ್ ತೆಗೆಸಿದ್ದರೆ ವಿದ್ಯುತ್ ಸಂಪರ್ಕ ನೀಡಲು ಟಿಸಿ ಅಳವಡಿಸದಂತೆ ಆದೇಶ ಹೊರಡಿಸಿದ್ದಾರೆ. ಹಾಗಾದರೆ ರೈತರು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಟಿಸಿ ಹಾಕಿಸಿಕೊಳ್ಳಲು ಸಾಧ್ಯವೆ ಎಂದು ಪ್ರಶ್ನಿಸಿದರು.

ಸಾಮಾನ್ಯ ಕಾಮಗಾರಿ ಕೈಗೊಳ್ಳಲು ಜಿಲ್ಲಾ ಪಂಚಾಯಿತಿ, ನಗರ ಸಭೆ ಹಾಗೂ ಲೋಕೋಪಯೋಗಿ ಇಲಾಖೆಯಲ್ಲಿ ಹಣವಿಲ್ಲ. ಬೇರೆ ಯೋಜನೆಗಳಿಗೂ ಸರ್ಕಾರ ಅನುದಾನ ನೀಡದೆ ಅಭಿವೃದ್ಧಿ ಶೂನ್ಯವಾಗಿದೆ ಎಂದು ಹರೀಶ್‌ಗೌಡ ಆಪಾದಿಸಿದರು.

ಸಮಾವೇಶ ಮುಂದೂಡಿಕೆ

ಬಿ.ವೈ.ವಿಜಯೇಂದ್ರ ಅಧಿಕಾರ ಸ್ವೀಕರಿಸುತ್ತಾರೆ ಎಂದು ಮಾಹಿತಿ ನೀಡಿದರು.

ಬಿಜೆಪಿ ಕಚೇರಿಯಲ್ಲಿ ಹೋಮ ಹವನ: ವಿಜಯೇಂದ್ರ ಅವರು ರಾಜ್ಯಾಧ್ಯಕ್ಷರಾಗಿ ಅಧಿಕಾರ ಸ್ವೀಕಾರ ಕಾರ್ಯಕ್ರಮಕ್ಕೆ ಬೆಂಗಳೂರಿನ ಬಿಜೆಪಿ ಮಲ್ಲೇಶ್ವರಂ ಕಚೇರಿಯಲ್ಲಿ ಭರದ ಸಿದ್ಧತೆಗಳು ನಡೆದಿವೆ. ನ.14ರ ರಾತ್ರಿಯಿಂದಲೇ ಜಗನ್ನಾಥ ಭವನದಲ್ಲಿ ಹೋಮ ಮತ್ತು ಪೂಜಾ ಕಾರ್ಯಗಳು ಆರಂಭವಾಗಲಿವೆ. ಹೀಗಾಗಿ ಕಚೇರಿಗೆ ಬಣ್ಣ ಬಳಿಯುವ ಕಾರ್ಯ ನಡೆದಿದೆ. ನಳಿನ್‌ಕುಮಾರ್ ಕಟೀಲ್ ಅವರು ನೂತನ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರಗೆ ಪಕ್ಷದ ಧ್ವಜ ಹಸ್ತಾಂತರ ಮಾಡಲಿದ್ದಾರೆ. ಇನ್ನು ಈ ಪದಗ್ರಹ ಕಾರ್ಯಕ್ರಮದಲ್ಲಿ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ನಿರ್ಗಮಿತ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಮತ್ತು ಇತರ ರಾಜ್ಯದ ಮುಖಂಡರು ಭಾಗವಹಿಸಲಿದ್ದಾರೆ.

ದೇವಾಲಯಕ್ಕೆ ದಾಖಲೆ ಆದಾಯ

ಸಾವಿರ ರೂ. ಟಿಕೆಟ್ ಮಾರಾಟದಿಂದ 2 ಕೋಟಿ 30 ಲಕ್ಷದ 91 ಸಾವಿರ ಬಂದರೆ, 300 ರೂ. ಟಿಕೆಟ್ ಮಾರಾಟದಿಂದ 1 ಕೋಟಿ 79 ಲಕ್ಷದ 65 ಸಾವಿರ 500 ರೂ. ಆದಾಯ ಸಂಗ್ರಹವಾಗಿದೆ. ಲಡ್ಡು ಪ್ರಸಾದ ಮಾರಾಟದಿಂದ ಕೂಡ 45 ಲಕ್ಷ 66 ಸಾವಿರದ 080 ರೂ. ಹಣ ಸಂಗ್ರಹವಾಗಿದೆ. ಒಟ್ಟು 4 ಕೋಟಿ 56 ಲಕ್ಷದ 22 ಸಾವಿರದ 580 ರೂ. ಆದಾಯ ಸಂಗ್ರಹವಾಗಿದೆ. ಹಾಸನಾಂಬೆ ದರ್ಶನೋತ್ಸವದ ಇತಿಹಾಸದಲ್ಲೆ ಇದು ಅತಿ ಹೆಚ್ಚಿನ ಆದಾಯವಾಗಿದೆ. ತಾಯಿ ದರ್ಶನಕ್ಕೆ ಇನ್ನೂ ಮೂರು ದಿನ ಬಾಕಿ ಇದ್ದು ಮತ್ತಷ್ಟು ಆದಾಯ ಸಂಗ್ರಹವಾಗಲಿದೆ. ಹಾಸನಾಂಬೆ ಸನ್ನಿಧಿಯಲ್ಲಿ ಎತ್ತ ನೋಡಿದರೂ ಜನ, ಕಣ್ಣು ಹಾಯಿಸಿದಲ್ಲೆಲ್ಲಾ ಜನ ಸಾಗರ ಕಂಡು ಬರುತ್ತಿದೆ. ಶಕ್ತಿ ದೇವತೆಯನ್ನ ನೋಡಬೇಕು, ಬೇಡಿದ ವರಣ ಕರುಣಿಸೋ ಆ ತಾಯಿ ಹಾಸನಾಂಬೆಗೆ ನಮಿಸಬೇಕು ಎಂದು ರಾಜ್ಯ, ಹೊರ ರಾಜ್ಯಗಳಿಂದ ಜನ ಹಾಸನಕ್ಕೆ ಬಂದು ತಾಯಿ ದರ್ಶನ ಮಾಡುತ್ತಿದ್ದಾರೆ. ವರ್ಷಕ್ಕೆ ಒಮ್ಮೆ ಮಾತ್ರ ದರ್ಶನ ನೀಡೊ ಶಕ್ತಿದೇವತೆಯ ಈ ವರ್ಷದ ದರ್ಶನ ಮಿಸ್ ಮಾಡಿಕೊಳ್ಳಬಾರದು ಎನ್ನೊ ಕಾತರ ಜನರಲ್ಲಿರುತ್ತದೆ. ಮುಂಜಾನೆ 5 ಗಂಟೆಯಿಂದಲೇ ಹಾಸನಾಂಬೆಯ ದರ್ಶನಕ್ಕೆ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವಿಯ ದರ್ಶನ ಮಾಡ್ತಾರೆ.

ವಿದೇಶಿ ಸೋಫಾ ಸೆಟ್ ಗಿಫ್ಟ್


ಎಂದು ಹೇಳಲಾಗುತ್ತಿದೆ. ಅದು ಹೌದಾ ಎಂಬುದು ಗೊತ್ತಿಲ್ಲ. ಈ ಎಲ್ಲರದ ಬಗ್ಗೆ ಸತ್ಯ ಹರಿಶ್ಚಂದ್ರರೇ ಉತ್ತರ ಕೊಡಬೇಕು ಎಂದು ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಕಿಡಿಕಾರಿದರು. ಪಂಚ ರಾಜ್ಯಗಳ ಚುನಾವಣೆ ಪ್ರಚಾರದಲ್ಲಿ ಗ್ಯಾರಂಟಿ ಯೋಜನೆಗಳು ಕರ್ನಾಟಕ ಜನರ ಬದುಕಿನ ಭಾಗ್ಯ ತೆರೆದಿದೆ ಎಂಬ ಕಾಂಗ್ರೆಸ್‌ನ ಭಜನೆ ಕೇಳುತ್ತಿದ್ದೇವೆ. ರಾಜ್ಯದಲ್ಲಿ ಡುಪ್ಲಿಕೇಟ್ ಮುಖ್ಯಮಂತ್ರಿ ಅಂತ ಒಬ್ಬರಿದ್ದಾರೆ. ಅವರು ತೆಲಂಗಾಣದಲ್ಲಿ ಚುನಾವಣಾ ಪ್ರಚಾರಕ್ಕೆ ಹೋಗಿ ನಗೆಪಾಟಲಿಗೀಡಾಗಿದ್ದಾರೆ. ನಮ್ಮ ರಾಜ್ಯದ ಜನರಿಗೆ ಗ್ಯಾರಂಟಿ ಹೆಸರಿನಲ್ಲಿ ಕಿವಿಗೆ ಹೂವು ಮುಡಿಸಿದ್ದಾರೆ. ಈಗ ತೆಲಂಗಾಣದಲ್ಲಿ ಹೋಗಿ ಅಲ್ಲಿನ ಮತದಾರರಿಗೆ ಸುಳ್ಳು ಭರವಸೆ ನೀಡುತ್ತಿದ್ದಾರೆ ಎಂದು ತೀವ್ರ ವಾಗ್ದಾಳಿ ನಡೆಸಿದರು. ತಮ್ಮ ಪಕ್ಷ ಅಧಿಕಾರಕ್ಕೆ ಬಂದರೇ 2 ಲಕ್ಷ ಸರ್ಕಾರಿ ಹುದ್ದೆ ಭರ್ತಿ ಮಾಡುತ್ತೇವೆ ಎಂದು ಸಿದ್ದರಾಮಯ್ಯ ಅವರು ತೆಲಂಗಾಣದಲ್ಲಿ ಹೇಳಿದ್ದಾರೆ. ಕರ್ನಾಟಕದಲ್ಲೇ 2 ಲಕ್ಷಕ್ಕೂ ಹೆಚ್ಚು ಸರ್ಕಾರಿ ಹುದ್ದೆಗಳು ಖಾಲಿ ಇವೆ. ಮೊದಲು ಇಲ್ಲಿ ಖಾಲಿ ಇರುವ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಿ ಎಂದು ಕುಮಾರಸ್ವಾಮಿ ಒತ್ತಾಯಿಸಿದರು. ಕರ್ನಾಟಕದಲ್ಲಿ 5,71,665 ಕೋಟಿ ರೂಪಾಯಿ ಸಾಲ ಈಗ ಇದೆ. ಇನ್ನು 85815 ಕೋಟಿ ರೂಪಾಯಿ ಸಾಲದ ಗುರಿ ಇಟ್ಟುಕೊಂಡಿದ್ದೀರಿ. ಸಾಲಕ್ಕೆ 56 ಕೋಟಿ ರೂಪಾಯಿ ಕಟ್ಟಬೇಕು. ಇದನ್ನು ನಿಮ್ಮ ಅಧಿಕಾರಿಗಳೇ ಹೇಳುತ್ತಿದ್ದಾರೆ. ಬರದಿಂದ ರಾಜ್ಯ ಅಸ್ತವ್ಯಸ್ತವಾಗಿದೆ. ಆದರೆ, ರಾಜ್ಯದಲ್ಲಿ ದುಡ್ಡಿಗೇನು ಬರ ಇಲ್ಲ, ಬ್ಲಾಕ್ ಮನಿಗೇನೂ ಕಡಿಮೆ ಇಲ್ಲ. ಒಬ್ಬರ ಮನೆಯಲ್ಲಿ 42 ಕೋಟಿ ರೂಪಾಯಿ ಸಿಕ್ಕಿದೆಯಲ್ಲವೇ? ಎಂದು ಎಚ್.ಡಿ. ಕುಮಾರಸ್ವಾಮಿ ಲೇವಡಿ ಮಾಡಿದರು.

ಗೂಡ್ಸ್ ವಾಹನ ಉರುಳಿ ಓರ್ವ ಸಾವು

ಚಿಂತೆಗೀಡಾಗಿದ್ದಾರೆ. ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಮಹದೇಶ್ವರ ಬೆಟ್ಟದಲ್ಲಿ ನಡೆಯುವ ಜಾತ್ರಾ ಮಹೋತ್ಸವ ಸಂದರ್ಭ ಹಾಗೂ ದೀಪಾವಳಿ ಅಮಾವಾಸ್ಯೆಯಲ್ಲಿ ಪೂಜೆ ಸಲ್ಲಿಸಿದರೆ ಒಳಿತಾಗಲಿದೆ ಎಂಬ ನಂಬಿಕೆ ಇರುವುದರಿಂದ ಗೆಳೆಯರೆಲ್ಲರೂ ಮಹದೇಶ್ವರ ಬೆಟ್ಟಕ್ಕೆ ಹೋಗುತ್ತಿದ್ದರು ಎಂದು ಗಾಯಾಳು ಪೋಷಕರು ತಿಳಿಸಿದ್ದಾರೆ.

ಮಡುಗಟ್ಟಿದ ಶೋಕ: ಇಂದು ಬೆಳಗ್ಗೆ ಮರಣೋತ್ತರ ಪರೀಕ್ಷೆ ಬಳಿಕ ಮೃತ ದರ್ಶನ್ ಮೃತದೇಹವನ್ನು ವಾರಸುದಾರರಿಗೆ ಒಪ್ಪಿಸಲಾಯಿತು. ಬಂಡೀಪಾಳ್ಯಕ್ಕೆ ಮೃತದೇಹ ತಂದ ಸಂದರ್ಭ ಬಂಡೀಪಾಳ್ಯದ ನಿವಾಸಿಗಳು ದುಃಖಿತರಾದರು. ಎಲ್ಲರೂ ಸ್ಥಳೀಯ ಅಂಗಡಿಗಳಲ್ಲಿ ಕೆಲಸ ಮಾಡಿ ಜೀವನ ಕಟ್ಟಿಕೊಳ್ಳುವ ಕನಸು ಕಾಣುತ್ತಿದ್ದ ಗೆಳೆಯರಾಗಿದ್ದರು. ಆದರೆ, ಅಪಘಾತದಲ್ಲಿ ನೋವನುಭವಿಸುವಂತಾಗಿದೆ ಎಂದು ದುಃಖ ವ್ಯಕ್ತಪಡಿಸಿದರು. ಮೃತ ದರ್ಶನ್ ಅವರ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟುವಂತಿತ್ತು. ಅಲ್ಲದೆ, ಸ್ಥಳೀಯರು ಅವರನ್ನು ಸಮಾಧಾನ ಮಾಡುತ್ತಿದ್ದ ದೃಶ್ಯ ಕಂಡು ಬಂದಿತು. ಈ ಸಂಬಂಧ ಮೇಗಳಾಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವ್ಯೋಮ ಮೂರುತಿ ಅಲ್ಲಮ, ಜಗದ ನಂಟ ಕೃತಿ ಬಿಡುಗಡೆ



ಮೈಸೂರು, ನ.12(ಜಿಎ)–ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮತ್ತು ಸಂವಹನ ಪ್ರಕಾಶನ ವತಿಯಿಂದ ನಗರದ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ. ಚಂದ್ರಶೇಖರಯ್ಯ ರಚನೆಯ 'ವ್ಯೋಮ ಮೂರುತಿ ಅಲ್ಲಮ' ಮತ್ತು 'ಜಗದ ನಂಟ' ಕೃತಿಗಳನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಕುಂದೂರು ಮಠದ ಅಧ್ಯಕ್ಷ ಡಾ. ಶರತ್‌ಚಂದ್ರ ಸ್ವಾಮೀಜಿ ಲೋಕಾರ್ಪಣೆಗೊಳಿಸಿದರು.

ನಂತರ ಡಾ. ಶರತ್‌ಚಂದ್ರ ಸ್ವಾಮೀಜಿ ಮಾತನಾಡಿ, ಪ್ರಸ್ತುತ ಪುಸ್ತಕ ಓದುಗರ ಸಂಖ್ಯೆ ಕಡಿಮೆ ಆಗುತ್ತಿರುವುದು ಬೇಸರದ ಸಂಗತಿ. ಎಲ್ಲರು ಮೊಬೈಲ್‌ನಲ್ಲಿ ಮುಳುಗಿ ಹೋಗಿದ್ದಾರೆ. ಇಂತಹ ಸಂದರ್ಭದಲ್ಲೂ ಮೈಸೂರಿನಲ್ಲಿ ಪುಸ್ತಕ ಓದುವವರು ಇದ್ದಾರೆ. ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮೈಸೂರಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರುತ್ತಿರುವುದು ಸಂತಸದ ವಿಚಾರ ಎಂದರು.

12ನೇ ಶತಮಾನದಲ್ಲಿ ಬಸವಣ್ಣ ಎದುರಿಸಿದ ಸಮಸ್ಯೆಗಳನ್ನು ಇಂದಿಗೂ ಕಾಣಬಹುದು. ನಮಗೆ ಸಮಸ್ಯೆಗಳನ್ನು ಎದುರಿಸುವ ಶಕ್ತಿಯನ್ನು ಐತಿಹಾಸಿಕ ಕಾದಂಬರಿಗಳು ನೀಡುತ್ತವೆ. ಐತಿಹಾಸಿಕ ಕಾದಂಬರಿ ರಚಿಸುವುದು ಅತ್ಯಂತ ಕಷ್ಟದ ಕೆಲಸ. ಐತಿಹಾಸಿಕ ಕಾದಂಬರಿ ರಚನೆ ಸಂದರ್ಭ ಐತಿಹಾಸಿಕ ಘಟನೆಗೆ ಧಕ್ಕೆ ಆಗದ ರೀತಿಯಲ್ಲಿ ರಚಿಸುವುದು ಸವಾಲಿನ ವಿಚಾರ ಎಂದು ಅಭಿಪ್ರಾಯಪಟ್ಟರು.

ಕನ್ನಡ ಪುಸ್ತಕ ಪ್ರಾಧಿಕಾರ ಮಾಜಿ ಅಧ್ಯಕ್ಷ ನಂದೀಶ್ ಹಂಚೆ ಮಾತನಾಡಿ, ಪುರಾಣವನ್ನು ಕಾದಂಬರಿ ಮಾಡುವುದು ಕಷ್ಟವೇನು ಅಲ್ಲ. ಆದರೆ ಐತಿಹಾಸಿಕ ಘಟನೆಯನ್ನು ಕಾದಂಬರಿಯನ್ನಾಗಿಸುವುದು ಬಹಳ ಕಷ್ಟದ ಕೆಲಸ. ಐತಿಹಾಸಿಕ ಘಟನೆ ಕುರಿತು ಕಾದಂಬರಿ ರಚಿಸುವ ಸಂದರ್ಭದಲ್ಲಿ ಐತಿಹಾಸಿಕ ಘಟನೆಗೆ ಧಕ್ಕೆ ಆಗದ ರೀತಿಯಲ್ಲಿ ಕೃತಿ ರಚಿಸಬೇಕು. ಇದು ಸವಾಲಿನ ಕೆಲಸ. ಈ ಸವಾಲನ್ನು ಡಾ. ಚಂದ್ರಶೇಖರಯ್ಯ ಸಮರ್ಥವಾಗಿ ಎದುರಿಸಿದ್ದಾರೆ ಎಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಬಿ.ವಿ. ವಸಂತಕುಮಾರ್ ಮಾತನಾಡಿ, ದೇಶ ದೇಶಗಳ ನಡುವೆ ನಡೆಯುತ್ತಿರುವ ಯುದ್ಧದ ಈ ಸಂದರ್ಭದಲ್ಲಿ ಬಸವಣ್ಣ ಅವರ ಅರಿವು ಮತ್ತು ದಾರಿ ಜಗತ್ತಿಗೆ ಅತ್ಯಂತ ಅವಶ್ಯಕ. ಬಿಜ್ಜಳ ಯುದ್ಧಕ್ಕೆ ಹೊರಡುವ ಸಂದರ್ಭ ಬಸವಣ್ಣ ಅವರ ಬಳಿ ಅಭಿಪ್ರಾಯ ಕೇಳುತ್ತಾರೆ. 'ಸಾಮ್ರಾಜ್ಯದಲ್ಲಿ ಸುಖ, ಶಾಂತಿ ನೆಲೆಸಬೇಕಾದರೆ ಯುದ್ಧದ ಭೀತಿ ಇರಲೇಬಾರದು' ಎಂದು ಬಸವಣ್ಣ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಪ್ರಸ್ತುತ ರಷ್ಯಾ–ಉಕ್ರೇನ್, ಇಸ್ರೇಲ್–ಹಮಾಸ್ ನಡುವೆ ನಡೆಯುತ್ತಿರುವ ಯುದ್ಧದ ಸಂದರ್ಭದಲ್ಲಿ ಬಸವ ಪ್ರಜ್ಞೆ ಹಾಗೂ ಡಾ.ಚಂದ್ರಶೇಖರಯ್ಯ ರಚಿಸಿದ ಕಾದಂಬರಿಗಳು ಕೇವಲ ಮನರಂಜನೆ ಮಾತ್ರವಲ್ಲದೆ ಅದು ನಮ್ಮ ಮನ ಪರಿವರ್ತನೆಗೆ ಪ್ರೇರಣೆಯಾಗಬಲ್ಲದು ಹಾಗೂ ಆತ್ಮಕಲ್ಯಾಣಕ್ಕೆ ದಾರಿ ತೋರಬಹುದು ಎಂದು ಅಭಿಪ್ರಾಯಪಟ್ಟರು.

ಬಾಗೇವಾಡಿಯ ಅಗ್ರಹಾರದಲ್ಲಿ ಬಸವಣ್ಣ ಹಾಗೂ ಬಸವಣ್ಣ ಅವರ ಶಿಕ್ಷಕರೊಬ್ಬರ ನಡುವೆ ಗಂಭೀರವಾದ ಚರ್ಚೆ ನಡೆಯುತ್ತದೆ. ಶಿಕ್ಷಕ ಹಾಗೂ ವಿದ್ಯಾರ್ಥಿಗಳ ನಡುವೆ ಚರ್ಚೆ ನಡೆಯದೆ ಹೋದರೆ ಹೊಸ ಸಾಧ್ಯತೆಗಳು ಹುಟ್ಟಿಕೊಳ್ಳಲು ಸಾಧ್ಯ ಇಲ್ಲ. ಆದರೆ, ಪ್ರಸ್ತುತ ವಿಶ್ವವಿದ್ಯಾಲಯ, ಶಾಲಾ, ಕಾಲೇಜುಗಳಲ್ಲಿ ವಿದ್ಯಾರ್ಥಿಗಳನ್ನು ಶಿಕ್ಷಕರು ಸ್ವತಂತ್ರ ಚಿಂತಕರನ್ನಾಗಿ ರೂಪಿಸುತ್ತಿಲ್ಲ. ಹಾಗಾಗಿ ನಮ್ಮ ಶೈಕ್ಷಣಿಕ ವ್ಯವಸ್ಥೆಯಲ್ಲಿ ನಾವು ಬಯಸಿದ ಸುಧಾರಣೆಗಳನ್ನು ತರಲು ಸಾಧ್ಯವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

> "ಇಂದು ಪುಸ್ತಕ ಓದುವವರ ಬರ ಬಂದಿದೆ. ಸರ್ಕಾರ ಗ್ರಂಥಾಲಯಗಳನ್ನು ನಿರ್ಮಾಣ ಮಾಡಿದೆ. ಆದರೆ, ಅವುಗಳನ್ನು ನಿರ್ವಹಣೆ ಮಾಡುತ್ತಿಲ್ಲ. ಇವುಗಳನ್ನು ಅನೇಕ ಪ್ರಕಾಶಕರು ನಂಬಿಕೊಂಡಿದ್ದಾರೆ. ಆದ್ದರಿಂದ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕೊಡುತ್ತಿರುವ ಅನುದಾನವನ್ನು ಗ್ರಂಥಾಲಯಗಳಿಗೆ ನೀಡಬೇಕು. ಇಲ್ಲವೇ ಸಾರ್ವಜನಿಕರಿಂದ ಸಂಗ್ರಹಿಸುವ ಗ್ರಂಥಾಲಯದ ಸೆಸ್ ತೆರಿಗೆಯನ್ನು ಬಳಕೆ ಮಾಡಬೇಕಿದೆ.
> –ಡಿ.ಎನ್. ಲೋಕಪ್ಪ, ಸಂವಹನ ಪ್ರಕಾಶನದ ಪ್ರಕಾಶಕ

ಶ್ರೀ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿಧಾನಪರಿಷತ್ ಸದಸ್ಯ ಡಿ. ತಿಮ್ಮಯ್ಯ, ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ. ಚಂದ್ರಶೇಖರ್, ಕೃತಿಯ ಕರ್ತೃ ಡಾ. ಚಂದ್ರಶೇಖರಯ್ಯ, ಸಂವಹನ ಪ್ರಕಾಶನದ ಪ್ರಕಾಶಕ ಡಿ.ಎನ್. ಲೋಕಪ್ಪ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಅಧ್ಯಕ್ಷ ಎಸ್. ಶಿವಮೂರ್ತಿ ಕಾನ್ಯ ಹಾಗೂ ಇತರರು ಇದ್ದರು.

ನಾಳೆ ಮೂಡಲಹುಂಡಿಯಲ್ಲಿ ಕೊಂಡೋತ್ಸವ



ಮೈಸೂರು.ನ.12(ಎಂಟಿವೈ)– ಬೆಳಕಿನ ಹಬ್ಬ ದೀಪಾವಳಿ ಅಂಗವಾಗಿ ಮೈಸೂರು ತಾಲೂಕಿನ ಮೂಡಲಹುಂಡಿ ಗ್ರಾಮದ ಕೊಂಡದ ಬಸವೇಶ್ವರರ ಕೊಂಡೋತ್ಸವ ಮಂಗಳವಾರ(ನ.14) ಸಂಜೆ 6ಕ್ಕೆ ವಿಜೃಂಭಣೆಯಿಂದ ಜರುಗಲಿದೆ.

ಕೊಂಡೋತ್ಸವದ ಹಿನ್ನೆಲೆಯಲ್ಲಿ ವರಕೋಡು ಗ್ರಾಮದ ಶ್ರೀ ಬಸವೇಶ್ವರ ದೇವಾಲಯದಿಂದ ಉತ್ಸವ ಮೂರ್ತಿ, ಬೀರೇಶ್ವರ ಹಾಗೂ ಬನ್ನಿಮಹಾಕಾಳೇಶ್ವರಿ ದೇವಿಯ ಉತ್ಸವ ಮೂರ್ತಿ, ದೇವಾಲಯದ ಬಸಪ್ಪ, ಪೂಜಾ ಕುಣಿತ ಹಾಗೂ ವಿವಿಧ ದೇವಾಲಯಗಳ ದೇವರ ಗುಡ್ಡರು ಮೆರವಣಿಗೆಯಲ್ಲಿ ಮೂಡಲಹುಂಡಿಗೆ ತಲುಪಲಿದ್ದಾರೆ. ನಂತರ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಸಾಗಿ ಸಂಜೆ 5.30ಕ್ಕೆ ಗ್ರಾಮದ ಸಮೀಪವಿರುವ ದೊಣ್ಣೆಕಲ್ಲು ಬೆಟ್ಟದಲ್ಲಿರುವ ಕೊಂಡದ ಬಸವೇಶ್ವರ ಗುಡಿಗೆ ತಲುಪಲಿದ್ದಾರೆ. ಈ ವೇಳೆ ವಿವಿಧ ಹರಕೆ ಹೊತ್ತವರು ಬಾಯಿ ಬೀಗದಾರಿಗಳಾಗಿ ಮೆರವಣಿಗೆಯಲ್ಲಿ ಸಾಗಲಿದ್ದಾರೆ.

ದೀಪಾವಳಿ ದಿನದಂದು ಕೊಂಡದ ಬಸವೇಶ್ವರರ ಕೊಂಡೋತ್ಸವ ಆಚರಿಸುವ ಪದ್ಧತಿಯಿದ್ದು, ಇದಕ್ಕಾಗಿ ವರಕೋಡು, ಮೂಡಲಹುಂಡಿ ಗ್ರಾಮಸ್ಥರು ಮನೆಗೊಂದು ಸೌದೆ ನೀಡಿ, ಸಂಗ್ರಹವಾದ ಸೌದೆಯನ್ನು ಕೊಂಡದ ಬಸವೇಶ್ವರ ಗುಡಿಗೆ ಕೊಂಡೊಯ್ದು ಮಧ್ಯಾಹ್ನ ಬೆಂಕಿ ಹಚ್ಚಿ ಕೆಂಡ ಸಿದ್ಧಪಡಿಸಲಾಗುತ್ತದೆ. ದೇವರ ಮೆರವಣಿಗೆ ಗುಡಿ ಬಳಿ ತಲುಪುತ್ತಿದ್ದಂತೆಯೇ ಕೆಂಡದ ರಾಶಿಯನ್ನು ಕೊಂಡದ ಕಟ್ಟೆಗೆ ಸುರಿದು ಗಾಳಿ ಬಿಸಿ ಶಾಖ ಹೆಚ್ಚಿಸಲಾಗುತ್ತದೆ. ವಿವಿಧ ಪೂಜೆ ಬಳಿಕ ಸಂಜೆ 6.30ಕ್ಕೆ ಕೊಂಡೋತ್ಸವಕ್ಕೆ ಚಾಲನೆ ದೊರೆಯಲಿದ್ದು, ಬಸವೇಶ್ವರ ದೇವಾಲಯ, ಶನೇಶ್ವರ ದೇವಾಲಯದ ದೇವರ ಗುಡ್ಡರು ಹಾಗೂ ಹರಕೆ ಹೊತ್ತಿರುವವರು ಕೊಂಡ ಹಾಯಲಿದ್ದಾರೆ. ಕೊಂಡೋತ್ಸವನ್ನು ವೀಕ್ಷಿಸಿ, ಪೂಜೆ ಸಲ್ಲಿಸಲು ಮೂಡಲಹುಂಡಿ, ವರಕೋಡು, ಬಡಗಲಹುಂಡಿ, ಕೆಂಪೇಗೌಡನಹುಂಡಿ, ಹೊಸಹುಂಡಿ, ಮೆಲ್ಲಹಳ್ಳಿ, ಉನಗನಹಳ್ಳಿ, ವಾಜಮಂಗಲ, ಮೈಸೂರು ಸೇರಿದಂತೆ ವಿವಿಧೆಡೆಯಿಂದ ಆಗಮಿಸಲಿದ್ದಾರೆ. ಮುಗಿದ ನಂತರ ದೇವರ ಮೆರವಣಿಗೆಯನ್ನು ಮೂಡಲಹುಂಡಿ ಗ್ರಾಮದ ಮೂಲಕ ವರಕೋಡು ಗ್ರಾಮಕ್ಕೆ ಕೊಂಡೊಯ್ದು ದೇವಾಲಯದಲ್ಲಿ ಉತ್ಸವ ಮೂರ್ತಿಯನ್ನು ಇಟ್ಟು, ದೀಪಾವಳಿಯ ಕೊಂಡೋತ್ಸವಕ್ಕೆ ತೆರೆ ಎಳೆಯಲಾಗುತ್ತದೆ.



ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ಲತಾ .ಎಸ್, ಕಾಸಿಯಾ ಆಡಳಿತ ಮಂಡಳಿ ಸದಸ್ಯ ಮಂಜುನಾಥ ಮತ್ತು ಮೈಸೂರು ಕೈಗಾರಿಕೆಗಳ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್‌ಕುಮಾರ್ ಜೈನ್ ಅವರು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ರವರನ್ನು ಭೇಟಿ ಮಾಡಿ ಜಿಲ್ಲೆಯ ಕೈಗಾರಿಕೆಗಳು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ವಿನಂತಿಸಿದರು.

ಬಡಗಲಹುಂಡಿಯಲ್ಲಿ ಇಂದು ಮಲೆ ಮಹದೇಶ್ವರರ ಹಾಲರವಿ ಉತ್ಸವ

ಮೈಸೂರು.ನ.12(ಎಂಟಿವೈ)– ದೀಪಾವಳಿ ಹಿನ್ನೆಲೆಯಲ್ಲಿ ಮೈಸೂರು ತಾಲೂಕಿನ ವರುಣ ಹೋಬಳಿ ಬಡಗಲಹುಂಡಿ ಗ್ರಾಮದಲ್ಲಿ ನಾಳೆ(ನ.13) ಬೆಳಗ್ಗೆ ಮಲೆ ಮಹದೇಶ್ವರರ ಹಾಲರವಿ ಉತ್ಸವ ಶ್ರದ್ಧಾಭಕ್ತಿಯಿಂದ ನೆರವೇರಲಿದೆ.

ಬಡಗಲಹುಂಡಿ ಗ್ರಾಮದಲ್ಲಿರುವ ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಾಲಯದಲ್ಲಿ 31 ವರ್ಷದ ಎಣ್ಣೆ ಮಜ್ಜನ ಹಾಗೂ ಹಾಲರವಿ ಉತ್ಸವ ನಡೆಸಲಾಗುತ್ತಿದ್ದು, ನರಕಚತುರ್ದಶಿ ದಿನವಾದ ಭಾನುವಾರ ಸಂಜೆಯಿಂದಲೇ ದೇವಾಲಯದಲ್ಲಿ ವಿವಿಧ ಪೂಜಾ ಕಾರ್ಯ ಜರುಗಿದ್ದು, ನ.13ರಂದು ಬೆಳಗ್ಗೆ 8 ಗಂಟೆಗೆ ವರಕೋಡು ಗ್ರಾಮದಲ್ಲಿರುವ ಕಲ್ಯಾಣಿಯಿಂದ ಹಾಲರವಿ ಉತ್ಸವ ಆರಂಭವಾಗಲಿದೆ. ಕಳಸ ಹೊತ್ತ ಹೆಣ್ಣು ಮಕ್ಕಳು ಹಾಲರವಿ ಉತ್ಸವದಲ್ಲಿ ಪಾಲ್ಗೊಳ್ಳಲಿದ್ದು, ಇದರೊಂದಿಗೆ ಬೀರೇಶ್ವರ ದೇವಾಲಯ ಬಸವ, ಪೂಜಾ ಕುಣಿತ, ವೀರಮಕ್ಕಳ ಕುಣಿತ, ಕಂಸಾಳೆ, ಕೊಂಬು, ಕಹಳೆ, ಸತ್ತಿಗೆ, ತಮಟೆ ಹಾಗೂ ಮಂಗಳವಾದ್ಯದ ತಂಡ ಮೆರವಣಿಗೆಯಲ್ಲಿ ಸಾಗಿ ಮೆರಗು ನೀಡಲಿದೆ. ಹಾಲರವಿ ಉತ್ಸವದಲ್ಲಿ ವರಕೋಡು, ಬಡಗಲಹುಂಡಿ, ಮೂಡಲಹುಂಡಿ, ಕೆಂಪೇಗೌಡನಹುಂಡಿ, ಹೊಸಹುಂಡಿ, ಮೆಲ್ಲಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳ ಗ್ರಾಮಸ್ಥರು ಪಾಲ್ಗೊಳ್ಳಲಿದ್ದಾರೆ.

ನಾಳೆಯಿಂದ ಅಖಿಲ ಭಾರತ ಸಹಕಾರ ಸಪ್ತಾಹ



ಮೈಸೂರು, ನ.12(ಜಿಎ)–70ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಈ ಬಾರಿ 'ಐದು ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮತ್ತು ಸುಸ್ಥಿರ ಅಭಿವೃದ್ಧಿಯ ಗುರಿಗಳು' ವಿಷಯದೊಂದಿಗೆ ನ.14 ರಿಂದ 20 ರವರೆಗೆ ಮೈಸೂರು ಜಿಲ್ಲೆಯ ವಿವಿಧ ತಾಲೂಕಿನಲ್ಲಿ ನಡೆಯಲಿದೆ ಎಂದು ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್.ವಿ.ರಾಜೀವ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ.14ರಂದು 'ಸಹಕಾರ ಸಂಘ ಸಂಸ್ಥೆಗಳಲ್ಲಿನ ಇತ್ತೀಚಿನ ಬೆಳವಣಿಗೆಗಳು' ಕುರಿತು ನಗರದ ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣದಲ್ಲಿ, ನ.15ರಂದು ಕೆ.ಆರ್. ನಗರ ತಾಲೂಕು ಚುಂಚನಕಟ್ಟೆಯ ಆದಿ ಚುಂಚನಗಿರಿ ಸಮುದಾಯ ಭವನದಲ್ಲಿ 'ಸಾಲೇತರ ಸಹಕಾರ ಸಂಘಗಳ ಪುನಃಶ್ಚೇತನ ಹಾಗೂ ಆರ್ಥಿಕ ಸೇರ್ಪಡೆ', ನ.16ರಂದು ಟಿ. ನರಸೀಪುರ ತಾಲೂಕು ಟಿಎಪಿಸಿಎಂಎಸ್ ಸಭಾಂಗಣದಲ್ಲಿ 'ಸಹಕಾರ ಸಂಸ್ಥೆಗಳನ್ನು ಡಿಜಿಟಲೀಕರಣಗೊಳಿಸಲು ತಾಂತ್ರಿಕತೆಯ ಅಳವಡಿಕೆ ಮತ್ತು ಉನ್ನತೀಕರಣ' ವಿಷಯ ಕುರಿತು ಮಂಥನ ನಡೆಯಲಿದೆ ಎಂದು.

ನ.17ರಂದು ಹುಣಸೂರು ಶಿಕ್ಷಕರ ಭವನದಲ್ಲಿ 'ಸಹಕಾರ ಸಂಸ್ಥೆಗಳಲ್ಲಿ ಸರಳ ವ್ಯಾಪಾರ ಪ್ರಕ್ರಿಯೆ ಮತ್ತು ಉದಯೋನ್ಮುಖ ವಲಯಗಳು' ವಿಷಯ, ನ.18ರಂದು ನಂಜನಗೂಡಿನ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ 'ಸಾರ್ವಜನಿಕ – ಖಾಸಗಿ – ಸಹಕಾರಿ ಸಹಭಾಗಿತ್ವವನ್ನು ಬಲಪಡಿಸುವುದು', ನ.19 ರಂದು ಪಿರಿಯಾಪಟ್ಟಣ ತಾಲೂಕು ಚಿಟ್ಟೇನಹಳ್ಳಿಯಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ 'ಮಹಿಳೆಯರು, ಯುವಜನ ಮತ್ತು ಅಬಲವರ್ಗಕ್ಕೆ ಸಹಕಾರ ಸಂಸ್ಥೆಗಳು' ಚರ್ಚೆ ನಡೆಯಲಿದ್ದು, ನ.20ರಂದು ಸರಗೂರಿನ ನಾಮಧಾರಿಗೌಡ ಸಮುದಾಯ ಭವನದಲ್ಲಿ 'ಸಹಕಾರ ಶಿಕ್ಷಣ ಮತ್ತು ತರಬೇತಿಯ ಪರಿಷ್ಕರಣೆ' ಕುರಿತು ನಡೆಯಲಿದ್ದು, ಜಿಲ್ಲೆಯಾದ್ಯಂತ 2,523 ಸಹಕಾರ ಸಂಘಗಳಿದ್ದು, ಈ ಎಲ್ಲವುಗಳ ಸಂಯುಕ್ತಾಶ್ರಯದಲ್ಲಿ ಈ ಸಪ್ತಾಹ ನಡೆಯಲಿದೆ. ಏಳು ದಿನಗಳ ಕಾಲ ಸಹಕಾರ ಸಂಘಗಳ ಮೂಲಕ ಸರ್ವಾಂಗೀಣ ಅಭಿವೃದ್ಧಿ ಕುರಿತಂತೆ ಚಿಂತನ ಮಂಥನ ನಡೆಯಲಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಸದಾನಂದ, ಮಹದೇವಸ್ವಾಮಿ, ಭೈರಪ್ಪ, ಪ್ರಶಾಂತ್, ಚಂದ್ರಶೇಖರ್ ಹಾಗೂ ವಿಶ್ವೇಶ್ವರಯ್ಯ ಮತ್ತಿತರರು ಉಪಸ್ಥಿತರಿದ್ದರು.

ತಾಯಮ್ಮಗೆ ಪಿಎಚ್.ಡಿ ಪದವಿ



ಮೈಸೂರು, ನ.12–ಡಾ. ಎಸ್.ಶಿವರಾಜಪ್ಪ ಅವರ ಮಾರ್ಗದರ್ಶನದಲ್ಲಿ ತಾಯಮ್ಮ ಅವರು ಗಾಂಧಿ ಅಧ್ಯಯನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಅಂತರ ಪ್ರೌಢಶಾಲಾ ವಾಲಿಬಾಲ್, ಥ್ರೋಬಾಲ್ ಪಂದ್ಯಾವಳಿ



ಮೈಸೂರು, ನ. 12–ಮೈಸೂರಿನ ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಪ್ರೌಢಶಾಲಾ ಬಾಲಕ ಮತ್ತು ಬಾಲಕಿಯರ ಅಂತರ ಶಾಲಾ ವಾಲಿಬಾಲ್ ಮತ್ತು ಥ್ರೋಬಾಲ್ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ಮುಖ್ಯಸ್ಥ ಡಾ.ಸಿ.ವೆಂಕಟೇಶ್ ಭಾಗವಹಿಸಿದ್ದರು. ಸಂಸ್ಥೆಯ ವ್ಯವಸ್ಥಾಪಕ ವಿಶ್ವಸ್ಥ ಡಾ.ಭವಾನಿಶಂಕರ್ ಅಧ್ಯಕ್ಷತೆ ವಹಿಸಿದ್ದರು. ಕ್ರೀಡೆಗಳು, ಯೋಗ ಸಹ ಶಿಕ್ಷಣದ ಒಂದು ಭಾಗವಾಗಿದ್ದು, ಅದಕ್ಕೂ ಮಹತ್ವವನ್ನು ನೀಡಬೇಕು, ಶಿಕ್ಷಕರ ಕಠಿಣ ಶ್ರಮ ಮತ್ತು ಅತ್ಯುತ್ತಮ ತರಬೇತಿಗಳಿಂದ ವಿದ್ಯಾರ್ಥಿಗಳು ವಿಶ್ವ ಮಟ್ಟದಲ್ಲಿ ಸಾಧನೆಗಳನ್ನು ಮಾಡಲು ಸಾಧ್ಯವಾಗಿದೆ, ಇದಕ್ಕೆ ಪ್ರೇರಕವಾಗಿ ವಿದ್ಯಾರ್ಥಿಗಳು ಸಹ ಶಿಸ್ತು ಮತ್ತು ಸಂಯಮ, ಶ್ರದ್ಧೆಯನ್ನು ತಮ್ಮ ಜೀವನದಲ್ಲಿ ರೂಢಿಸಿಕೊಳ್ಳಬೇಕೆಂದು ತಿಳಿಸಿದರು.

ಥ್ರೋಬಾಲ್ ಬಾಲಕ ವಿಭಾಗ: ಗೀತಾ ಶಿಶು ಶಿಕ್ಷಣ ಸಂಸ್ಥೆ (ಪ್ರಥಮ), ಮಹರ್ಷಿ ಪಬ್ಲಿಕ್ ಶಾಲೆ (ದ್ವಿತೀಯ), ಸಿಟಿಜನ್ಸ್ ಶಾಲೆ (ತೃತೀಯ).

ಥ್ರೋಬಾಲ್ ಬಾಲಕಿಯರ ವಿಭಾಗ: ಸರ್ಕಾರಿ ಆದರ್ಶ ವಿದ್ಯಾಲಯ (ಪ್ರಥಮ), ಮಹರ್ಷಿ ಪಬ್ಲಿಕ್ ಶಾಲೆ (ದ್ವಿತೀಯ), ಸಿಟಿಜನ್ಸ್ ಶಾಲೆ (ತೃತೀಯ).

ವಾಲಿಬಾಲ್ ಬಾಲಕರ ವಿಭಾಗ: ವಿಜಯ ವಿಠಲ ಶಾಲೆ (ಪ್ರಥಮ), ಶ್ರೀ ಕಾವೇರಿ ಶಾಲೆ (ದ್ವಿತೀಯ), ಗೀತ ಶಿಶು ಶಿಕ್ಷಣ ಸಂಸ್ಥೆ (ತೃತೀಯ)

ಬಿ.ವೈ.ವಿಜಯೇಂದ್ರ ಬಿಜೆಪಿಗೆ ತಾತ್ಕಾಲಿಕ ಅಧ್ಯಕ್ಷ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್



ಮೈಸೂರು,ನ.12(ಎಂಟಿವೈ)– ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ವೀರಶೈವ ಲಿಂಗಾಯತ ಸಮುದಾಯವನ್ನು ಓಲೈಸಿಕೊಳ್ಳುವ ಏಕೈಕ ದೃಷ್ಟಿಯಿಂದ ಶಾಸಕ ಬಿ.ವೈ.ವಿಜಯೇಂದ್ರ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ತಾತ್ಕಾಲಿಕವಾಗಿ ಆಯ್ಕೆ ಮಾಡಲಾಗಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಲೇವಡಿ ಮಾಡಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂನಿಯರ್ ನಾಯಕನಿಗೆ ಪಟ್ಟ ಕಟ್ಟಿ ವರ್ಷಾನುಗಟ್ಟಲೆ ದುಡಿದವರನ್ನು ಕಡೆಗಣಿಸಲಾಗಿದೆ. ವಿಧಾನಸಭಾ ಚುನಾವಣೆಯಲ್ಲಿ ಉದ್ದೇಶಪೂರ್ವಕವಾಗಿಯೇ ವೀರಶೈವ ಲಿಂಗಾಯಿತ ಸಮುದಾಯವನ್ನು ಕಡೆಗಣಿಸಿದ್ದ ಬಿಜೆಪಿ ನಾಯಕರು ಇದೀಗ ಲೋಕಸಭಾ ಚುನಾವಣೆಯಲ್ಲಿ ವೀರಶೈವ ಲಿಂಗಾಯಿತ ಸಮುದಾಯವನ್ನು ಓಲೈಸಿಕೊಳ್ಳಲು ಬಿ.ವೈ.ವಿಜಯೇಂದ್ರ ಅವರಿಗೆ ತಾತ್ಕಾಲಿಕ ಹುದ್ದೆ ನೀಡಿದ್ದಾರೆ. ಲೋಕಸಭಾ ಚುನಾವಣೆ ಮುಗಿದ ಬಳಿಕ ಮುಂಬರುವ ಜೂನ್ ನಂತರ ಆ ಸ್ಥಾನವನ್ನೂ ಕಿತ್ತುಕೊಳ್ಳಲಿದ್ದಾರೆ ಎಂದು ಆರೋಪಿಸಿದರು.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವ ಅಮಿತ್ ಶಾ, ಬಿ.ಎಲ್.ಸಂತೋಷ್ ಹಾಗೂ ಇನ್ನಿತರರು ಶೇಕ್ಸ್‌ಪಿಯರ್ ನಾಟಕದಂತೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಅವರಿಗೆ ಅಧ್ಯಕ್ಷ ಸ್ಥಾನ ನೀಡಿದ್ದಾರೆ. ಪಕ್ಷದಲ್ಲಿರುವ ಲಿಂಗಾಯತ ಸಮುದಾಯದ ಹಿರಿಯ ನಾಯಕರಾದ ಬಿ.ಸಿ.ಪಾಟೀಲ್, ಮುರುಗೇಶ ನಿರಾಣಿ, ವಿ.ಸೋಮಣ್ಣ, ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ತುಳಿದರು. ಜಗದೀಶ್ ಶೆಟ್ಟರ್, ಲಕ್ಷ್ಮಣ್ ಸವದಿಯನ್ನು ಪಕ್ಷದಿಂದ ಹೊರಗೆ ತಳ್ಳಿರುವ ಬಿಜೆಪಿ ನಾಯಕರು ಇದೀಗ ಓಲೈಕೆಯತ್ತ ಗಮನಹರಿಸಿದ್ದಾರೆ. ಇದರಿಂದ ವೀರಶೈವ ಲಿಂಗಾಯತ ಸಮಾಜ ಈ ನಾಟಕವನ್ನು ನಂಬಿ ಮತ್ತೆ ಯಾಮಾರಬಾರದು ಎಂದು ಮನವಿ ಮಾಡಿದರು.

ಬಿ.ವೈ.ವಿಜಯೇಂದ್ರ ನೇಮಕವನ್ನು ಕಾಂಗ್ರೆಸ್ ಸ್ವಾಗತಿಸುತ್ತದೆ. ನಮಗೆ ಯಾವ ಭಯವೂ ಇಲ್ಲ. ಯಡಿಯೂರಪ್ಪ ಅವರು ಸಿಎಂ ಸ್ಥಾನ ಕಳೆದುಕೊಳ್ಳಲು ಯಾರು ಕಾರಣ? 2012ರಲ್ಲಿ ಸಿಎಂ ಸ್ಥಾನ ಹೋಗಲು ಮತ್ತ್ಯಾರು ಕಾರಣ. ಯಡಿಯೂರಪ್ಪ ಅವರ ಸಹಿ ಮಾಡಿದ್ದು, ಆರ್‌ಟಿಜಿಎಸ್ ಮೂಲಕ ಹಣ ಪಡೆದಿದ್ದು ಯಾರು? ಎಂಬುದನ್ನು ಉತ್ತರಿಸಬೇಕು. ಸಂಸದ ಪ್ರತಾಪಸಿಂಹ 15 ದಿನಗಳಿಂದ ಕಾಣುತ್ತಿಲ್ಲ. ಮೋದಿ ನಮ್ಮ ದೇವರು ಎನ್ನುತ್ತಿದ್ದ ಅವರು ನಳೀನ್ ಕುಮಾರ್ ಕಟೀಲ್ ಅವರನ್ನು ಬದಲಿಸಲು ಕಾರಣವೇನು? ಎಂದು ತಿಳಿಸಬೇಕು. ಕರ್ನಾಟಕದಲ್ಲಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಪ್ರಭಾವ ಕಡಿಮೆಯಾದ್ದರಿಂದ ವಿಜಯೇಂದ್ರ ನೇಮಕ ಮಾಡಲಾಗಿದೆ ಎಂದು ಹೇಳಿದರು.

ಬಿಜೆಪಿ ಆಂತರಿಕ ಸಮೀಕ್ಷೆಯಲ್ಲಿ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ 2 ಸ್ಥಾನಗಳನ್ನು ಮಾತ್ರ ಗೆಲ್ಲಲಿದೆ ಎಂಬ ಮಾಹಿತಿ ಇದೆ. ಮೋದಿ ಮತ್ತು ಜೆಡಿಎಸ್ ಇದ್ದ ಮೇಲೆ ಬಿ.ಎಸ್.ಯಡಿಯೂರಪ್ಪ ಯಾಕೇ ಬೇಕು ಎಂಬುದನ್ನು ತಿಳಿಸುವಂತೆ ಒತ್ತಾಯಿಸಿದರು.

ಒಂದೂವರೆ ನಿಮಿಷಕ್ಕೆ ಸೀಮಿತವಾದ ಬರ ಅಧ್ಯಯನ: ಮೈಸೂರು ಜಿಲ್ಲೆಯಲ್ಲಿ ಬರ ಅಧ್ಯಯನ ಮಾಡುತ್ತಿರುವ ಜೆಡಿಎಸ್ ಮತ್ತು ಬಿಜೆಪಿ ನಾಯಕರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸಿ ಅನುದಾನ ತರಬೇಕು ಎಂದು ಒತ್ತಾಯಿಸಿದರು.

ತುಮಕೂರು ಜಿಲ್ಲೆಯ ಕ್ಯಾತಸಂದ್ರದಲ್ಲಿ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಬರ ಅಧ್ಯಯನ ಮಾಡಿದರು. ಅಲ್ಲಿ ಅವರು ವ್ಯಯಿಸಿದ್ದು ಒಂದೂವರೆ ನಿಮಿಷ. ಇಷ್ಟು ಸಮಯದಲ್ಲಿ ಏನು ಅಧ್ಯಯನ ಮಾಡಿದರು. ರಾಜ್ಯದಲ್ಲಿ 4.75 ಲಕ್ಷ ಕೋಟಿ ರೂ. ತೆರಿಗೆ ಸಂಗ್ರಹವಾಗುತ್ತದೆ. ಇದರಲ್ಲಿ ರಾಜ್ಯದ ಪಾಲು 2 ಲಕ್ಷ ಕೋಟಿ ರೂ. ನೀಡಬೇಕಿತ್ತು. 52 ಸಾವಿರ ಕೋಟಿ ರೂ. ನೀಡಲಾಗಿದೆ. ನರೇಗಾ ಅನುದಾನ, 15ನೇ ಹಣಕಾಸು ಅನುದಾನವನ್ನು ಕೊಟ್ಟಿಲ್ಲ. 7 ಜನ ಮಂತ್ರಿಗಳಲ್ಲಿ ಒಬ್ಬರು ಉಸಿರು ಬಿಡುತ್ತಿಲ್ಲ. ಕರ್ನಾಟಕದಲ್ಲಿ 223 ತಾಲೂಕು ಬರಗಾಲಕ್ಕೆ ಒಳಪಟ್ಟಿವೆ. ರಾಜ್ಯ ಸರ್ಕಾರ 900 ಕೋಟಿ ಮೀಸಲಿಟ್ಟು 300 ಕೋಟಿ ಬಿಡುಗಡೆ ಮಾಡಿದೆ. ಈಗ ಬರ ಅಧ್ಯಯನ ನಡೆಸುತ್ತಿರುವ ಬಿಜೆಪಿ, ಜೆಡಿಎಸ್ ನಾಯಕರು ವರದಿ ಕೊಟ್ಟು ಅನುದಾನ ತರಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಜಿ.ಪಂ. ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮಾಧ್ಯಮ ಸಂಚಾಲಕ ಕೆ.ಮಹೇಶ, ಸೇವಾದಳದ ಗಿರೀಶ್ ಇದ್ದರು.

ಇಂದು, ನಾಳೆ ಬೆಟ್ಟದಪುರದಲ್ಲಿ ದೀಪಾವಳಿ ಉತ್ಸವ

ಬೆಟ್ಟದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಬೆಳ್ಳಿ ಬಸಪ್ಪನ ಮೆರವಣಿಗೆ



ಬೆಟ್ಟದಪುರ, ನ.12– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಇತಿಹಾಸ ಪ್ರಸಿದ್ಧ ಶ್ರೀ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಹಾಗೂ ಗಿರಿಜಮ್ಮ ದೇವಿಯ ದೀಪಾವಳಿ ಉತ್ಸವ ಸೋಮವಾರ ಹಾಗೂ ಮಂಗಳವಾರ ಅದ್ದೂರಿಯಾಗಿ ನಡೆಯಲಿದೆ.

ದೀಪಾವಳಿ ಅಮಾವಾಸ್ಯೆ ದಿನವಾದ ಸೋಮವಾರ ಸಾವಿರಾರು ಭಕ್ತರು ಸಿಡಿಲು ಮಲ್ಲಿಕಾರ್ಜುನಸ್ವಾಮಿಯ ಬೆಟ್ಟ ಹತ್ತಿ ದೇವರಿಗೆ ಪೂಜೆ ಸಲ್ಲಿಸಿ, ದರ್ಶನ ಪಡೆಯಲಿದ್ದಾರೆ. ಮಂಗಳವಾರ ಮುಂಜಾನೆ ಗ್ರಾಮದ ಉಪ್ಪಾರ ಸಮಾಜದವರು ಬೆಳ್ಳಿಬಸಪ್ಪ ಮತ್ತು ಗಿರಿಜಮ್ಮ ದೇವಿಯನ್ನು ಬೆಟ್ಟದ ಮೇಲಿಂದ ಕೆಳಗಡೆ ತಂದು ಬೆಟ್ಟದ ಸುತ್ತಮುತ್ತಲಿನ ಸುಮಾರು 20 ಗ್ರಾಮಗಳಲ್ಲಿ ಉತ್ಸವ ನಡೆಸಲಿದ್ದಾರೆ.

ಬೆಟ್ಟದಪುರದ ಪ್ರಮುಖ ಬೀದಿಯಲ್ಲಿ ಮನೆಗಳ ಮುಂದೆ ಹಾಕಿದ್ದ ಹಸಿರು ಚಪ್ಪರಗಳ ಒಳಗೆ ದೇವರನ್ನು ಪೂಜಿಸಲಾಗುವುದು. ಬೆಳಗ್ಗೆ 9 ಗಂಟೆಗೆ ಗ್ರಾಮದ ಮಧ್ಯಭಾಗದ ದೇವಾಲಯದಲ್ಲಿ ವಿವಿಧ ಪೂಜೆ ನೆರವೇರಿಸಲಾಗುವುದು. ನಂತರ ಸಾವಿರಾರು ಭಕ್ತರು ದೀವಟಿಕೆಗೆ ಹಿಡಿದು ತಮ್ಮ ಇಷ್ಟಾರ್ಥ ನೆರವೇರಿಸುವಂತೆ ಪ್ರಾರ್ಥಿಸಿ ಉತ್ಸವದಲ್ಲಿ ಭಾಗವಹಿಸುವರು. ಬೆಟ್ಟದಪುರದ ತೋಪು, ಹರದೂರು, ಬೆಟ್ಟದತುಂಗಾ, ದೊಡ್ಡೇಗೌಡನಕೊಪ್ಪಲು, ಕುಡುಕೂರು, ಬಾರ್ಸೆ, ಕೂರ್ಗಲ್ಲು, ಈಚೂರು, ಭುವನಹಳ್ಳಿ, ಕೆಳಗನಹಳ್ಳಿ ಸೇರಿದಂತೆ ಬೆಟ್ಟದ ಸುತ್ತಮುತ್ತಲ ಗ್ರಾಮಸ್ಥರು ಜಾತ್ರೆ ಹಾಗೂ ಉತ್ಸವದಲ್ಲಿ ಭಾಗವಹಿಸಲಿದ್ದಾರೆ.

ಸೋಮವಾರ ಬೆಟ್ಟ ಹತ್ತುವ ಭಕ್ತರಿಗೆ ಹುಣಸೂರು ತಾಲೂಕಿನ ಗಾವಡಗೆರೆ ಮಠಾಧ್ಯಕ್ಷರಾದ ಶ್ರೀ ನಟರಾಜಸ್ವಾಮೀಜಿ ಹಾಗೂ ಬೆಟ್ಟದಪುರದ ಶ್ರೀ ಚನ್ನಬಸವ ದೇಶಿಕೇಂದ್ರಸ್ವಾಮೀಜಿ ನೇತೃತ್ವದಲ್ಲಿ ಅನ್ನದಾನ ಏರ್ಪಡಿಸಲಾಗಿದೆ. ಮಂಗಳವಾರ ರಾತ್ರಿ ಬೆಟ್ಟದಪುರದ ದೇವಾಲಯ ಗುಡಿ ಆವರಣದಲ್ಲಿ ಬೆಟ್ಟದಪುರದ ವೀರಶೈವ–ಲಿಂಗಾಯತ ಸಮಾಜದ ವತಿಯಿಂದ ಅನ್ನಸಂತರ್ಪಣೆ ಏರ್ಪಡಿಸಲಾಗಿದ್ದು, ಕೊನೆಗೆ ದೀವಟಿಗೆಯ ಪಂಜಿನ ಮೆರವಣಿಗೆಯೊಂದಿಗೆ ಎರಡು ದಿನಗಳ ದೇವರ ಉತ್ಸವಕ್ಕೆ ತೆರೆ ಬೀಳಲಿದೆ. ಪಂಜಿನ ಮೆರವಣಿಗೆ ನೋಡಲು ನೋಡಲು ಬೆಟ್ಟದಪುರಕ್ಕೆ ಮೈಸೂರು ಜಿಲ್ಲೆಯಾದ್ಯಂತ ಸಾವಿರಾರು ಜನರು ಆಗಮಿಸಲಿದ್ದಾರೆ.

ತಹಶೀಲ್ದಾರ್ ಕುಂಇ ಅಹಮದ್ ಮಾರ್ಗದರ್ಶನದಲ್ಲಿ ಬೆಟ್ಟದಪುರ ಸಿಪಿಐ ದೀಪಕ್ ಹಾಗೂ ಪಿಎಸ್ಐ ಪ್ರಕಾಶ್ ಎಂ.ಎತ್ತಿನಮನಿ ನೇತೃತ್ವದಲ್ಲಿ ಸುಮಾರು 200ಕ್ಕೂ ಹೆಚ್ಚು ಸಿಬ್ಬಂದಿಯೊಂದಿಗೆ ಬಂದೋಬಸ್ತ್ ಏರ್ಪಡಿಸಲಾಗಿದೆ.



ಶಾಸಕ ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷರಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ಹಂಚೀಪುರ ಗುರುಸ್ವಾಮಿ ನೇತೃತ್ವದಲ್ಲಿ ಸರಗೂರಿನಲ್ಲಿ ಸಂಭ್ರಮಾಚರಿಸಲಾಯಿತು. ಪಪಂ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸ್ಥಾಯಿ ಸಮಿತಿ ಅಧ್ಯಕ್ಷ ಉಮಾ ರಾಮಚಂದ್ರ, ಸದಸ್ಯರಾದ ನೂರಾಳಸ್ವಾಮಿ, ಶಿವಕುಮಾರ್, ನವೀನ್‌ಕುಮಾರ್, ಬಿಜೆಪಿ ಟೌನ್ ಪ್ರಧಾನ ಕಾರ್ಯದರ್ಶಿ ರಾಜೇಶ್, ಚೆನ್ನಪ್ಪ, ರವಿಕುಮಾರ್, ರವಿಗೌಡ, ರಂಗಸ್ವಾಮಿ, ರವಿ, ಅನಿಲ್, ಪ್ರಕಾಶ್ ಇದ್ದರು.

ಇಂದು ಕಾಲಭೈರವೇಶ್ವರ ಉತ್ಸವ

ಹಿರೀಕ್ಯಾತನಹಳ್ಳಿ: ಹುಣಸೂರು ತಾಲೂಕಿನ ಗಾವಡಗೆರೆಯಲ್ಲಿ ದೀಪಾವಳಿ ಅಮಾವಾಸ್ಯೆ ಪ್ರಯುಕ್ತ ಸೋಮವಾರ ಕಾಲಭೈರವೇಶ್ವರ ಸ್ವಾಮಿಯ ಉತ್ಸವ ನಡೆಯಲಿದೆ.

ದೇವಸ್ಥಾನ ಅಭಿವೃದ್ಧಿ ಸಮಿತಿ ವತಿಯಿಂದ ಬೆಳಗ್ಗೆಯಿಂದ ಅಭಿಷೇಕ, ಧಾರ್ಮಿಕ ಪೂಜಾ ಕೈಂಕರ್ಯ ನಡೆಯಲಿವೆ. ನಂತರ ಗ್ರಾಮದ ಕೆರೆಯಿಂದ ದೇವರನ್ನು ಅಲಂಕರಿಸಿ, ಕಳಸ ಹೊತ್ತ ಮಹಿಳೆಯರು, ಕುಣಿಗುಡ್ಡರು, ವಾದ್ಯಗಳ ಮೂಲಕ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಿದ್ದಾರೆ.

ಅನ್ನಸಂತರ್ಪಣೆ ನಡೆಯಲಿದೆ ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ಜಿ.ವಿ. ಶ್ರೀನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿದ್ದಪ್ಪಾಜಿ ದೇವಸ್ಥಾನ ನಿರ್ಮಾಣಕ್ಕೆ ಚಾಲನೆ



ನಂಜನಗೂಡು: ನಗರದ ಮೇದರ ಬೀದಿಯ ಸಿದ್ದಪ್ಪಾಜಿ ದೇವಸ್ಥಾನ ನಿರ್ಮಾಣ ಕಾಮಗಾರಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಮತ್ತು ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಭೂಮಿಪೂಜೆ ನೆರವೇರಿಸಿದರು.

ನಂತರ ಶಾಸಕ ದರ್ಶನ್‌ಧ್ರುವನಾರಾಯಣ್ ಮಾತನಾಡಿ, ಸಿದ್ದಪ್ಪಾಜಿ ದೇವಾಲಯ ನಿರ್ಮಾಣಕ್ಕೆ ಮೇದರ ಬೀದಿಯ ನಿವಾಸಿಗಳು ಮುಂದಾಗಿರುವುದು ಸಂತಸದ ವಿಷಯ. ಶಾಸಕರ ನಿಧಿಯಿಂದ ದೇಗುಲ ನಿರ್ಮಾಣಕ್ಕೆಅಗತ್ಯ ಅನುದಾನ ಮಂಜೂರು ಮಾಡಿಕೊಡುವ ಮೂಲಕ ಇಂತಹ ಪುಣ್ಯದ ಕೆಲಸಕ್ಕೆ ಕೈಜೋಡಿಸಲಿದ್ದೇನೆ. ಜತೆಗೆ ವೈಯಕ್ತಿಕವಾಗಿ ಸಹಾಯ ಮಾಡಲಾಗುವುದು. ಮೇದರ ಬೀದಿಯಲ್ಲಿ ಅತಿ ಮಳೆ ಬಂದಾಗ ನೀರು ತುಂಬಿಕೊಂಡು ತೊಂದರೆಯಾಗುತ್ತಿರುವ ಬಗ್ಗೆ ತಿಳಿದಿದೆ. ಈ ಸಮಸ್ಯೆ ಬಗೆಹರಿಸಲು ಕ್ರಮವಹಿಸುತ್ತೇನೆ ಎಂದು ಭರವಸೆ ನೀಡಿದರು.

ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ದೇಗುಲ ನಿರ್ಮಾಣ ಕಾರ್ಯಕ್ಕೆ ವೈಯಕ್ತಿಕವಾಗಿ ಸಹಾಯ ಮಾಡುವ ಜತೆಗೆ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಮತ್ತಷ್ಟು ಅನುದಾನ ಕೊಡಿಸುವುದಾಗಿ ತಿಳಿಸಿದರು.

ಇದೇ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ನಗರಸಭಾ ಸದಸ್ಯ ಮಹದೇವಪ್ರಸಾದ್, ಮುಖಂಡರಾದ ಶ್ರೀಧರ್, ಚಂದ್ರಶೇಖರ್, ಮೇದರ ಬೀದಿಯ ಯಜಮಾನರು ಇದ್ದರು.

ಗುಳುವಿನ ಅತ್ತಿಗುಪ್ಪೆಯಲ್ಲಿ ಬೋನಿಗೆ ಬಿದ್ದ ಚಿರತೆ



ಭೇರ್ಯ: ಸಮೀಪದ ಮಠದ ಕಾವಲು ರಕ್ಷಿತ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಜನರಿಗೆ ನಿತ್ಯ ಕಾಟಕೊಡುತ್ತಿದ್ದ ಚಿರತೆ ಕೊನೆಗೂ ಗುಳುವಿನ ಅತ್ತಿಗುಪ್ಪೆ ಗ್ರಾಮದಲ್ಲಿ ಭಾನುವಾರ ಬೋನಿಗೆ ಬಿದ್ದಿದೆ.

ಗ್ರಾಮದ ಮಂಜೇಗೌಡರ ತೋಟದಲ್ಲಿ ಚಿರತೆ ಸೆರೆ ಹಿಡಿಯಲು ಬೋನು ಇಡಲಾಗಿತ್ತು. ಮುಂಜಾನೆ ಬೋನಿಗೆ ಬಿದ್ದಿದೆ. ಹಲವಾರು ದಿನಗಳಿಂದ ಚಿರತೆ ಗುಳುವಿನ ಅತ್ತಿಗುಪ್ಪೆ, ಬಟಿಗನಹಳ್ಳಿ, ಮುಂಜನಹಳ್ಳಿ, ಗೇರದಡ, ಸೋಮನಹಳ್ಳಿ, ಸಂಬ್ರವಳ್ಳಿ, ಹೊಸಅಗ್ರಹಾರ ಗ್ರಾಮ ಸೇರಿದಂತೆ ಅನೇಕ ಕಡೆಗಳಲ್ಲಿ ಹಸು, ಕರು, ಮೇಕೆ, ನಾಯಿಗಳನ್ನು ತಿಂದು ಹಾಕುತ್ತಿತ್ತು. ಇದರಿಂದ ಬೇಸತ್ತ ಗ್ರಾಮಸ್ಥರು ಹಾಗೂ ರೈತರು ಅರಣ್ಯ ಇಲಾಖೆಗೆ ದೂರು ನೀಡಿದ್ದರು.

ಎರಡು ದಿನಗಳ ಹಿಂದೆ ಗುಳುವಿನ ಅತ್ತಿಗುಪ್ಪೆ ಗ್ರಾಮದ ರೈತ ಮಂಜೇಗೌಡರ ತೋಟದಲ್ಲಿ ಕಾಣಿಸಿಕೊಂಡಿದ್ದು, ತೋಟದ ಮಾಲೀಕ ಕೆ.ಆರ್.ನಗರ ತಾಲೂಕು ಅರಣ್ಯ ಅಧಿಕಾರಿಗಳ ಗಮನಕ್ಕೆ ತಂದಿದ್ದರು. ಬಳಿಕ ವಲಯ ಅರಣ್ಯಾಧಿಕಾರಿ ಎಂ.ಆರ್. ರಶ್ಮಿ, ಉಪವಲಯ ಅರಣ್ಯಾಧಿಕಾರಿ ಬಿ.ಎನ್.ಕುಮಾರ್ ಹಾಗೂ ಸಿಬ್ಬಂದಿಯೊಂದಿಗೆ ಭೇಟಿ ನೀಡಿ, ತೋಟದಲ್ಲಿ ಚಿರತೆಯ ಹೆಜ್ಜೆ ಗುರುತು ಪರಿಶೀಲಿಸಿ ಶನಿವಾರ ಬೋನು ಇಟ್ಟಿದ್ದರು. ಭಾನುವಾರ ಮುಂಜಾನೆ ಚಿರತೆ ಬೋನಿಗೆ ಬಿದ್ದಿದೆ. ಇದರಿಂದ ಈ ಭಾಗದ ಜನರ ಆತಂಕ ನಿವಾರಣೆಯಾಗಿದೆ.

ಬೋನಿಗೆ ಬಿದ್ದ ಚಿರತೆಯನ್ನು ಅರಣ್ಯ ಇಲಾಖೆಯ ವಾಹನದಲ್ಲಿ ಸಾಗಿಸಿ ಹುಣಸೂರಿನ ನಾಗರಹೊಳೆ ರಾಷ್ಟ್ರೀಯ ಅಭಯಾರಣ್ಯಕ್ಕೆ ಬಿಡಲಾಯಿತು. ಚಿರತೆ ಸೆರೆ ಕಾರ್ಯಾಚರಣೆಯಲ್ಲಿ ಕೆ.ಆರ್. ನಗರದ ಅರಣ್ಯ ಇಲಾಖೆಯ ಅರಣ್ಯ ರಕ್ಷಕ ಸ್ವಾಮೀಗೌಡ, ಮಹದೇವ್, ಗಿಡ್ಡೀರೆಗೌಡ, ಚಾಲಕ ಮಂಜು ಭಾಗವಹಿಸಿದ್ದರು.

ಕಸ ವಿಲೇವಾರಿಯಲ್ಲಿ ಮಹಿಳೆಯರ ಪಾತ್ರ ಮುಖ್ಯ



ಹುಣಸೂರು, ನ.12– ಕಸ ವಿಲೇವಾರಿ ಕಾರ್ಯದಲ್ಲಿ ಮಹಿಳೆಯರ ಪಾತ್ರ ಬಹುಮುಖ್ಯ. ಇದರಿಂದ ಗ್ರಾಮದ ಸ್ವಚ್ಛತಾ ಆಂದೋಲನ ಜಾಗೃತಿ ಮೂಡಿಸಬಹುದು ಎಂದು ಪಿಡಿಓ ರಾಘವೇಂದ್ರ ಪ್ರಸನ್ನ ಹೇಳಿದರು.

ತಾಲೂಕಿನ ಬನ್ನಿಕುಪ್ಪೆ ಗ್ರಾಮ ಪಂಚಾಯಿತಿ ಆವರಣದಲ್ಲಿ ಆಯೋಜಿಸಿದ 'ನನ್ನ ಕಸ ನನ್ನ ಜವಾಬ್ದಾರಿ' ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಮಹಿಳೆಯರು ದಿನನಿತ್ಯ ಹಸಿ ಮತ್ತು ಒಣ ಕಸಗಳನ್ನು ವಿಂಗಡಿಸಿ, ಗ್ರಾಮ ಪಂಚಾಯಿತಿಯ ವಾಹನಗಳಿಗೆ ನೀಡಿದರೆ ಗ್ರಾಮ ಸ್ವಚ್ಛವಾಗುತ್ತದೆ. ಇದಕ್ಕೆ ಪೂರಕವಾಗಿ ನಮ್ಮ ಗ್ರಾಮ ಪಂಚಾಯಿತಿಯ ಮಹಿಳಾ ಒಕ್ಕೂಟದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸ್ವಸಹಾಯಯ ಸಂಘಗಳ ಮಹಿಳೆಯರು ಸಹಕಾರ ನೀಡಬೇಕು ಎಂದರು.

ಪ್ಲಾಸ್ಟಿಕ್ ಅನ್ನು ಎಲ್ಲೆಂದರಲ್ಲಿ ಎಸೆಯುವುದರಿಂದ ಭೂಮಿಯ ತಾಪಮಾನ ಹಾಗೂ ಪರಿಸರ ಮಾಲಿನ್ಯದ ಮೇಲೆ ಆಗುವ ದುಷ್ಪರಿಣಾಮಗಳನ್ನು ನಾಗರಿಕರು ತಿಳಿದುಕೊಳ್ಳಬೇಕು. ಪ್ಲಾಸ್ಟಿಕ್ ವಸ್ತುಗಳು ಕೆರೆಕಟ್ಟೆ, ನದಿಗಳ ಮೂಲಕ ಸಾಗರದವರೆಗೆ ಸಾಗುತ್ತಿವೆ. ಇದರಿಂದ ಕೋಟ್ಯಾಂತರ ಜಲಚರ ಜೀವರಾಶಿಗಳು ಸಾಯುತ್ತಿದೆ ಎಂದು ತಿಳಿಸಿದರು.

ಎಸ್‌ಬಿಎಂನ ಸಂಪನ್ಮೂಲ ವ್ಯಕ್ತಿ ಜಗದೀಶ್ ಮಾತನಾಡಿ, ಪ್ಲಾಸ್ಟಿಕ್ ಅನ್ನು ಬೆಂಕಿಗೆ ಹಾಕುವುದರಿಂದ ಅದರ ಹೊಗೆ ಕ್ಯಾನ್ಸರ್, ಚರ್ಮ ರೋಗ ಮತ್ತು ಕಣ್ಣುಗಳಿಗೆ ತೊಂದರೆಯಾಗುತ್ತದೆ. 'ನನ್ನ ಕಸ ನನ್ನ ಜವಾಬ್ದಾರಿ' ಕುರಿತು ಜನಪ್ರತಿನಿಧಿಗಳು ಜನರ ನಡುವೆ ಸಂಪರ್ಕ ಸೇತುವೆಯಾಗಿ ಕೆಲಸ ಮಾಡಬೇಕು ಎಂದರು.

ಗ್ರಾಪಂ ಅಧ್ಯಕ್ಷ ಬಿ.ಆರ್.ಗೋವಿಂದನಾಯಕ ಕಾರ್ಯಾಗಾರ ಉದ್ಘಾಟಿಸಿದರು. ಐಟಿಸಿ ಔಟ್‌ರೀಚ್ ಸಂಸ್ಥೆಯ ಮುಖ್ಯಸ್ಥರು, ಮೈಸೂರು ತಾಲೂಕಿನ ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಸದಸ್ಯರು, ಎಂಬಿಕೆ ಹಾಗೂ ನಾಗನಹಳ್ಳಿ ಮಹಿಳಾ ಒಕ್ಕೂಟದ ಪದಾಧಿಕಾರಿಗಳು ಭಾಗವಹಿಸಿದ್ದರು.

ಹೊಮ್ಮರಗಳ್ಳಿ ಗ್ರಾಪಂ ವ್ಯಾಪ್ತಿ ಜನಸಂಪರ್ಕ ಸಭೆ



ಹಂಪಾಪುರ, ನ.12– ಹೆಚ್.ಡಿ.ಕೋಟೆ ತಾಲೂಕಿನ ಹೊಮ್ಮರಗಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಡ್ಡರಪಾಳ್ಯ, ಹೇರಗಳ್ಳಿ, ಅವರಗರೆ, ಬೆಸ್ತಾರ ಕಾಲೋನಿಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ನೇತೃತ್ವದಲ್ಲಿ ಜನಸಂಪರ್ಕ ಸಭೆ ನಡೆಯಿತು.

ಸಭೆಯಲ್ಲಿ ಅನಿಲ್ ಚಿಕ್ಕಮಾದು ಮಾತನಾಡಿ, ಗ್ರಾಮಸ್ಥರು ಹೊಮ್ಮರಗಳ್ಳಿ ನದಿಗೆ ಹೋಗುವ ರಸ್ತೆ, ದುರ್ಗಾ ಪರಮೇಶ್ವರಿ ದೇವಸ್ಥಾನದ ಮುಂಭಾಗದ ರಸ್ತೆ, ಅಂಬೇಡ್ಕರ್ ಭವನಕ್ಕೆ ಊಟದ ಹಾಲ್, ಚಾವಣಿ ವ್ಯವಸ್ಥೆಗೆ ಮನವಿ ಮಾಡಿದ್ದಾರೆ. ಈಗಾಗಲೇ ಹೊಮ್ಮರಗಳ್ಳಿ ಗ್ರಾಮದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಿಸಲಾಗಿದೆ. ಹಂಪಾಪುರ ಮತ್ತು ಹೊಮ್ಮರಗಳ್ಳಿ ಗ್ರಾಮ ಪಂಚಾಯಿತಿ ಸೇರಿದ ಗ್ರಾಮಗಳ ಕುಡಿಯುವ ನೀರು, ರಸ್ತೆ ಸೇರಿದಂತೆ ವಿವಿಧ ಕಾಮಗಾರಿಗಳಿಗೆ 300 ಕೋಟಿ ರೂ. ಅನುದಾನ ಮಂಜೂರು ಆಗಿದೆ ಎಂದರು.

ಮುಖ್ಯವಾಗಿ 1200 ಕೋಟಿ ರೂ. ವೆಚ್ಚದಲ್ಲಿ ಮೈಸೂರು–ಮಾನಂದವಾಡಿ ಹೆದ್ದಾರಿ ನಿರ್ಮಾಣಕ್ಕೆ ಸಿದ್ಧವಾಗಿದ್ದು, ಕಾಮಗಾರಿಗೆ ಶೀಘ್ರ ಚಾಲನೆ ನೀಡಲಾಗುವುದು. ಹೆಚ್.ಡಿ.ಕೋಟೆ ತಾಲೂಕಿನ ಎಲ್ಲಾ ಗ್ರಾಮಗಳ ಅಭಿವೃದ್ಧಿ ಕಾರ್ಯಗಳನ್ನು ಹಂತ ಹಂತವಾಗಿ ಮಾಡಲಾಗುವುದು ಎಂದು ತಿಳಿಸಿದರು.


ಸಭೆಯಲ್ಲಿ ಗ್ರಾಪಂ ಅಧ್ಯಕ್ಷೆ ರಾಮಮ್ಮ, ಪಿಡಿಓ ಗಣೇಶ್, ಕಾಂಗ್ರೆಸ್ ಮುಖಂಡರಾದ ಮುರಳಿಗೌಡ, ಜೈಪ್ರಕಾಶ್, ಹಿರೇಗೌಡ, ಶಿವಯ್ಯ, ಕೃಷ್ಣೇಗೌಡ, ವಿವಿಧ ಇಲಾಖೆಯ ಅಧಿಕಾರಿಗಳು, ಗ್ರಾಮದ ಮುಖಂಡರು ಇತರರು ಹಾಜರಿದ್ದರು.



ಹುಣಸೂರು ತಾಲೂಕಿನ ಕೊತ್ತೇಗಾಲ ಪ್ರಾಥಮಿಕ ಆರೋಗ್ಯ ಕೇಂದ್ರದ ನಿವೃತ್ತ ಹಿರಿಯ ಆರೋಗ್ಯ ಸುರಕ್ಷಣಾಧಿಕಾರಿ ಕೆ.ಎನ್.ರೋಹಿಣಿ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ಕೇಂದ್ರದ ವೈದ್ಯಾಧಿಕಾರಿ ಎಸ್.ಕೆ. ಡಾ. ರವಿಕುಮಾರ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಜಿ.ವಿ. ಶ್ರೀನಾಥ್, ವಿಶ್ವನಾಥ್, ಸಿದ್ದೇಗೌಡ, ಸುರೇಶ್, ಪ್ರಸನ್ನ, ಹಿರಿಯ ಆರೋಗ್ಯ ಸುರಕ್ಷಣಾಧಿಕಾರಿಗಳಾದ ಪ್ರಮೀಳಾ, ಸುಶೀಲಾ, ಲಲಿತಾ, ಮಮತಾ, ಪ್ರೇಮಲತಾ, ವಿನೂತ, ಸಿಂಧೂ, ಉಮೇಶ್, ಬಸವರಾಜ, ಕುಮಾರ್, ಗ್ರಾಪಂ ಕಾರ್ಯದರ್ಶಿ ಆನಂದ ಇದ್ದರು.

ರಾಜ್ಯಾಧ್ಯಕ್ಷರಾಗಿ ಬಿ.ವೈ.ವಿಜಯೇಂದ್ರ ನೇಮಕದಿಂದ ಬಿಜೆಪಿಗೆ ಆನೆಬಲ

ತಿ.ನರಸೀಪುರ, ನ.12– ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಪುತ್ರ ಹಾಗೂ ಶಾಸಕ ಬಿ.ವೈ.ವಿಜಯೇಂದ್ರ ನೇಮಕಗೊಂಡಿರುವುದರಿಂದ ಪಕ್ಷಕ್ಕೆ ಆನೆಬಲ ಬಂದಿದ್ದು, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ರಾಜ್ಯದ ಎಲ್ಲಾ 28 ಸ್ಥಾನಗಳಲ್ಲಿ ಜಯಭೇರಿ ಬಾರಿಸಲಿದೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರನ್ನು ಬೆಂಗಳೂರಿನ ಅವರ ಧವಳಗಿರಿ ನಿವಾಸದಲ್ಲಿ ಭೇಟಿ ಮಾಡಿ ಅಭಿನಂದಿಸಿ ಮಾತನಾಡಿದ ಅವರು, ವಿಜಯೇಂದ್ರ ಅವರ ನೇಮಕ ಪಕ್ಷದಲ್ಲಿ ನವಚೈತನ್ಯ ಮೂಡಿಸಿದ್ದು, ಯುವ ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿರುವುದರಿಂದ ಮುಂಬರುವ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಚುನಾವಣೆಗಳಲ್ಲೂ ಭರ್ಜರಿ ಗೆಲುವು ಸಾಧಿಸಲಿದೆ ಎಂದರು.


ಬಿ.ವೈ.ವಿಜಯೇಂದ್ರ ಅವರಿಗೆ ಲಿಂಗಾಯತರು, ಒಕ್ಕಲಿಗರು, ಕುರುಬರು, ಎಸ್‌ಸಿ, ಎಸ್‌ಟಿ ಸಮುದಾಯದ ಮತದಾರರು ಸೇರಿದಂತೆ ಎಲ್ಲಾ ಸಮುದಾಯದ ಮುಖಂಡರು ಬೆಂಬಲ ನೀಡಿ ಯುವ ನಾಯಕತ್ವನ್ನು ಬೆಂಬಲಿಸುವ ಲಕ್ಷಣಗಳು ಕಾಣುತ್ತಿದೆ. ಆದ್ದರಿಂದಲೇ ಅವರು ಬೂತ್ ಮಟ್ಟದಿಂದ ಪಕ್ಷವನ್ನು ಸಂಘಟಿಸಲು ಮುಂದಾಗಿದ್ದಾರೆ. ಇದಕ್ಕೆ ಪಕ್ಷದ ಎಲ್ಲಾ ಮುಖಂಡರು, ಕಾರ್ಯಕರ್ತರು ಕೈಜೋಡಿಸಬೇಕು. ವಿಜಯೇಂದ್ರ ನೇಮಕಕ್ಕೆ ನಮ್ಮ ಸಂಪೂರ್ಣ ಬೆಂಬಲ, ಸಹಕಾರವಿದೆ.

ಎಂ.ಪಿ.ನವೀನ್‌ಕುಮಾರ್‌ಗೆ ಪಿಎಚ್.ಡಿ



ಮೈಸೂರು, ನ.12– ಡಾ. ಎಂ. ನಂಜಯ್ಯ ಹೊಂಗನೂರು ಅವರ ಮಾರ್ಗದರ್ಶನದಲ್ಲಿ ಎಂ.ಪಿ. ನವೀನ್ ಕುಮಾರ್ ಅವರು ಜಾನಪದ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವಸ್ತುನಿಷ್ಠ ವರದಿಯಿಂದ ಸಮಾಜ ತಿದ್ದುವ ಕೆಲಸ



ಕೆ.ಆರ್.ನಗರ, ನ.12– ವಸ್ತುನಿಷ್ಠ ಮತ್ತು ಪ್ರಾಮಾಣಿಕ ವರದಿಗಳಿಂದ ಪತ್ರಕರ್ತರ ಗೌರವವನ್ನು ಹೆಚ್ಚಿಸುವ ಜತೆಗೆ ಸಮಾಜ ತಿದ್ದುವ ಕೆಲಸವಾಗುತ್ತದೆ ಎಂದು ಪುರಸಭೆ ಮುಖ್ಯಾಧಿಕಾರಿ ಡಾ.ಜಯಣ್ಣ ಅಭಿಪ್ರಾಯಪಟ್ಟರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ನಡೆದ ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕು ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬದ್ಧತೆಯಿಂದ ಅಧಿಕಾರಿಗಳು ಮತ್ತು ರಾಜಕಾರಣಿಗಳನ್ನು ತಿದ್ದುವ ಪತ್ರಕರ್ತರ ಕೆಲಸ ಇನ್ನೂ ಹೆಚ್ಚು ನಡೆಯಲಿ. ಚುನಾವಣೆ ಒಂದು ಪ್ರಕ್ರಿಯೆ ಅಷ್ಟೇ, ಚುನಾವಣೆ ನಂತರ ಸೋತ ಮತ್ತು ಗೆದ್ದ ಎಲ್ಲರೂ ಕರ್ತವ್ಯ ನಿರ್ವಹಿಸಬೇಕು ಎಂದು ಕಿವಿಮಾತು ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯ ನಾಲ್ಕನೇ ಅಂಗವಾಗಿರುವ ಪತ್ರಕರ್ತರು ಸಮಾಜದ ಏಳಿಗೆಗಾಗಿ ದುಡಿಯಬೇಕು. ಜಿಲ್ಲೆಯಲ್ಲಿ ಕೆ.ಆರ್.ನಗರ ತಾಲೂಕು ಪತ್ರಕರ್ತರ ಸಂಘವನ್ನು ಮಾದರಿ ಸಂಘವನ್ನಾಗಿಸುವ ಜವಾಬ್ದಾರಿ ನೂತನ ಆಡಳಿತ ಮಂಡಳಿಯ ಮೇಲಿದೆ. ಗ್ರಾಮಾಂತರ ಪ್ರದೇಶದಲ್ಲಿ ಯಾವುದೇ ವೇತನವಿಲ್ಲದೆ ಪತ್ರಿಕೆ ಹಂಚುವ ಮೂಲಕ ಸುದ್ದಿ ಮಾಡುವ ಪತ್ರಕರ್ತರು ಸಂಕಷ್ಟದಲ್ಲಿದ್ದಾರೆ. ಈ ಬಗ್ಗೆ ರಾಜ್ಯ ಸಂಘ ಹಾಗೂ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದು ಸರ್ಕಾರದ ಸಹಾಯ ಹಸ್ತ ಚಾಚುವ ಜತೆಗೆ ಬಸ್‌ಪಾಸ್, ಆರೋಗ್ಯ ವಿಮೆ ಸೇರಿದಂತೆ ಹತ್ತಾರು ಯೋಜನೆಗಳನ್ನು ರೂಪಿಸುವಂತೆ ಮನವಿ ಮಾಡಲಾಗಿದೆ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ ಮಾತನಾಡಿ, ಸಂಘ ಸಂಸ್ಥೆಗಳು ಒಂದು ಚೌಕಟ್ಟಿನ ಒಳಗಡೆ ಕೆಲಸ ನಿರ್ವಹಿಸಬೇಕಾಗುತ್ತದೆ. ಅಂತ ಕೆಲಸವನ್ನು ಪತ್ರಕರ್ತರ ಸಂಘ ನಿರ್ವಹಿಸುತ್ತಿದೆ ಎಂದು ತಿಳಿಸಿದರು.

ಗ್ರಾಮಾಂತರ ಉಪಾಧ್ಯಕ್ಷ ಧರ್ಮಪುರ ನಾರಾಯಣ ಮಾತನಾಡಿದರು. ಕಾರ್ಯಕ್ರಮದಲ್ಲಿ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ವಿನಯ್ ದೊಡ್ಡಕೊಪ್ಪಲು, ಉಪಾಧ್ಯಕ್ಷ ಸಿ.ಸಿ.ಮಹದೇವ್, ಪ್ರಧಾನ ಕಾರ್ಯದರ್ಶಿ ಬಿ.ಆರ್.ಮಹೇಶ್, ಖಜಾಂಚಿ ಕೆಂಪನಕೊಪ್ಪಲು ನಾಗೇಶ್, ಸಹಕಾರ್ಯದರ್ಶಿ ಹೆಚ್.ಎಲ್.ಆನಂದ್, ಕಾರ್ಯಕಾರಿ ಸಮಿತಿ ಸದಸ್ಯರಾದ ರಾಮಕೃಷ್ಣೇಗೌಡ, ಶಿಲ್ಪಾ ಶ್ರೀನಿವಾಸ್, ಮಹಮ್ಮದ್ ಸಬೀರ್‌ಖಾನ್, ಎಸ್.ಯೋಗಾನಂದ್, ಚುಂಚನಕಟ್ಟೆ ಮಧು, ರೋಜಾ ಮಹೇಶ್, ಕೃಷ್ಣಮೂರ್ತಿ ಅವರಿಗೆ ಚುನಾವಣಾಧಿಕಾರಿ ಬನ್ನೂರು ಕೆ.ರಾಜು ಪ್ರಮಾಣ ಪತ್ರ ನೀಡಿದರು.

ಪುರಸಭಾ ಸದಸ್ಯ ಉಮೇಶ್ ಸಂತೋಷ್‌ಗೌಡ, ಪುರಸಭೆ ಮಾಜಿ ಅಧ್ಯಕ್ಷ ನರಸಿಂಹರಾಜು, ಮಾಜಿ ಸದಸ್ಯ ಗುರುಶಂಕರ್, ಜೆಡಿಎಸ್ ವಕ್ತಾರ ಕೆ.ಎಲ್. ರಮೇಶ್, ಪತ್ರಕರ್ತರಾದ ಕೆ.ಟಿ.ರಮೇಶ್, ಎ.ಚೈತನ್ಯ, ಸಾಲಿಗ್ರಾಮ ಹರೀಶ್, ಕೆ.ಟಿ.ಮಂಜುನಾಥ್, ಪಂಡಿತ್ ನಾಟಿಕರ್, ಪ್ರಶಾಂತ್, ಜಿಲ್ಲಾ ಸಂಘದ ಕಾರ್ಯಕಾರಿಣಿ ಸದಸ್ಯ ದಾ.ರಾ.ಮಹದೇವ್, ಹುಣಸೂರು ತಾಲೂಕು ಸಂಘದ ಪ್ರಧಾನ ಕಾಯದರ್ಶಿ ನೆರಳಕುಪ್ಪೆ ಮಹದೇವ್, ರೈತ ಯುವ ವೇದಿಕೆ ಅಧ್ಯಕ್ಷ ಅರ್ಜುನಹಳ್ಳಿ ರಾಂಪ್ರಸಾದ್ ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ಜಿಗರ್ ಥಂಡ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗರಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲಿಯೋ (ಕ)	2 ಪ್ರದರ್ಶನಗಳು
ರಾಜಕಮಲ್	
ಟೈಗರ್–3 (ಹಿಂದಿ)	4 ಪ್ರದರ್ಶನಗಳು
ಸಂಗಂ	
ಟಗರುಪಲ್ಯ(ಕ)–2 ಆಟಗಳು	ಟೈಗರ್–3(ಹಿಂದಿ) 2 ಆಟಗಳು
ಲಿಡೋ	
ಗರಡಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಟೈಗರ್ ನಾಗೇಶ್ವರರಾವ್ (ತ)	4 ಪ್ರದರ್ಶನಗಳು
ಪ್ರಭಾ	
ಜಪಾನ್(ತ)	4 ಪ್ರದರ್ಶನಗಳು

DRC CINEMAS ಡಿಆರ್‌ಸಿ ಸಿನಿಮಾಸ್ ದೂ : 4240422/4241800

ಸ್ಕ್ರೀನ್ 1	**ಗರಡಿ (ಕ):** ಬೆ.10.10ಕ್ಕೆ, ಮ.1.10ಕ್ಕೆ, ರಾ.7ಕ್ಕೆ, ರಾ.9.55ಕ್ಕೆ, **ಟಗರುಪಲ್ಯ (ಕ):** ಸಂ.4.15ಕ್ಕೆ.
ಸ್ಕ್ರೀನ್ 2	**ಘೋಸ್ಟ್ (ಕ):** ಬೆ.10.10ಕ್ಕೆ, **ಜಿಗರ್‌ಥಂಡ ಡಬಲ್ x (ತ):** ಮ.1ಕ್ಕೆ, ಸಂ.6.50ಕ್ಕೆ, **ರೈಡ್ (ತ):** ಸಂ.4.25ಕ್ಕೆ, **ಟಗರುಪಲ್ಯ (ಕ):** ರಾ.10.05ಕ್ಕೆ.
ಸ್ಕ್ರೀನ್ 3	**ಜಪಾನ್ (ತ):** ಬೆ.10.15ಕ್ಕೆ, ಸಂ.4ಕ್ಕೆ, ರಾ.7ಕ್ಕೆ, **ಟಗರುಪಲ್ಯ (ಕ):** ಮ.1.20ಕ್ಕೆ, **ಬಂದ್ರ (ಮ):** ರಾ.10ಕ್ಕೆ.
ಸ್ಕ್ರೀನ್ 4	**ದಿ ಮಾರ್ವೆಲ್ಸ್ (3ಡಿ)(ಇಂ):** ಬೆ.8.30ಕ್ಕೆ, ಬೆ.10.45ಕ್ಕೆ, ಮ.1.05ಕ್ಕೆ, ಮ.3.25ಕ್ಕೆ, ಸಂ.5.40ಕ್ಕೆ, ರಾ.7.55ಕ್ಕೆ, ರಾ.10.15ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್ ದೂ : 2533444 / 2433456

ಸ್ಕ್ರೀನ್ 1	**ದಿ ಮಾರ್ವೆಲ್ಸ್ (3ಡಿ)(ಇಂ):** ಬೆ.9.30ಕ್ಕೆ, ಮ.12ಕ್ಕೆ, ಮ.2.30ಕ್ಕೆ, ಸಂ.5ಕ್ಕೆ, ರಾ.7.30ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	**ಗರಡಿ (ಕ):** ರಾ.10.15ಕ್ಕೆ, ಮ.1.20ಕ್ಕೆ, ರಾ.7.15ಕ್ಕೆ, **ಟಗರುಪಲ್ಯ (ಕ):** ಮ.12.55ಕ್ಕೆ, **ಜಿಗರ್‌ಥಂಡ ಡಬಲ್ x (ತ):** ರಾ.10.20ಕ್ಕೆ.
ಸ್ಕ್ರೀನ್ 3	**ಜಿಗರ್‌ಥಂಡ ಡಬಲ್ x (ತ):** ಬೆ.10.35ಕ್ಕೆ, ಮ.2.10ಕ್ಕೆ, ಸಂ.5.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 4	**ಜಪಾನ್ (ತ):** ಬೆ.9.30ಕ್ಕೆ, ಮ.12.45ಕ್ಕೆ, ಸಂ.4ಕ್ಕೆ, ರಾ.7.15ಕ್ಕೆ, ರಾ.10.30ಕ್ಕೆ.

MVC ಮೈಸೂರು ವಿಷನ್ ಸಿನಿಮಾ ದೂ : 0821–2973519

ಸ್ಕ್ರೀನ್ 1	**ಸೈಕಲ್ ಸವಾರಿ (ಕ):** ಬೆ.10.30ಕ್ಕೆ, **ಕ್ರೇಜಿ ಕೀರ್ತಿ (ಕ):** ಮ.1.30ಕ್ಕೆ, **ಗರುಡ ಪುರಾಣ (ಕ):** ಸಂ.4ಕ್ಕೆ, **ಬಸ್ರಿಕಟ್ಟೆ (ಕ):** ಸಂ.6.45ಕ್ಕೆ, **ಲಿಯೋ (ತ):** ರಾ.9.15ಕ್ಕೆ.
ಸ್ಕ್ರೀನ್ 2	**ಟಗರುಪಲ್ಯ (ಕ):** ಬೆ.10.45ಕ್ಕೆ, ಮ.1.40ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ.
ಸ್ಕ್ರೀನ್ 3	**ಲಿಯೋ (ತ):** ಮ.1.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	**ಘೋಸ್ಟ್ (ಕ):** ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.45ಕ್ಕೆ, **ಲಿಯೋ (ಕ):** ಮ.1.05ಕ್ಕೆ, **ಟಗರುಪಲ್ಯ (ಕ):** ರಾ.9.15ಕ್ಕೆ.

PVR CINEMAS ಪಿವಿಆರ್ ಸಿನಿಮಾಸ್ ಮೊ.ನಂ: 8951357139 ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್ (ಹಿಂ):** ಮ.3.50ಕ್ಕೆ, **ಭಗವಂತ್ ಕೇಸರಿ (ತೆ):** ರಾ.7.05ಕ್ಕೆ, **ಗಣಪತ್: ಎ ಹೀರೋ (ಹಿಂ):** ಸಂ.4.10ಕ್ಕೆ, **ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ):** ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, **ಲಿಯೋ (ಕ):** ಮ.12.45ಕ್ಕೆ, **ಲಿಯೋ (ತ):** ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, **ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ):** ರಾ.10ಕ್ಕೆ, **ಟಗರುಪಲ್ಯ (ಕ):** ಮ.1ಕ್ಕೆ, ರಾ.7ಕ್ಕೆ, **ತೇಜಸ್ (ಹಿಂ):** ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ಸ್ವಂತ ನಿರ್ಧಾರ ಕೈಗೊಳ್ಳುವ ಕಲೆ ಕರಗತವಾಗಿದೆ



ಮೈಸೂರು, ನ.12(ಎಸ್‌ಪಿಎನ್)– ಸರ್ಕಾರಿ ಶಾಲೆಗಳಲ್ಲಿ ಕಲಿತ ವಿದ್ಯಾರ್ಥಿಗಳು, ದೊಡ್ಡವರಾದ ಮೇಲೆ ಸ್ವಂತ ನಿರ್ಧಾರ ಮಾಡುವ ಕಲೆ ಕರಗತವಾಗಿರುತ್ತದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಡಿಡಿಪಿಐ ಹೆಚ್.ಕೆ.ಪಾಂಡು ಅಭಿಪ್ರಾಯಪಟ್ಟರು.

ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲೂಕಿನ ಬಾಚೇಗೌಡಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಎಂ.ಆರ್.ಶ್ರೀಕಂಠಯ್ಯ ಮತ್ತು ಎಸ್.ಸುಮಿತ್ರ ಸ್ಮರಣಾರ್ಥ ನಿರ್ಮಿಸಿದ್ದ ಮೂರು ಶಾಲಾ ಕೊಠಡಿಗಳನ್ನು ಶಾಲಾ ಶಿಕ್ಷಣ ಇಲಾಖೆಗೆ ಹಸ್ತಾಂತರಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ಕಲಿಕಾ ಸಂದರ್ಭದಲ್ಲಿ ಸ್ವ ಗುರುತಿಸುವಿಕೆ, ಸ್ವತಂತ್ರ್ಯ ಆಯ್ಕೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಈ ವಿದ್ಯಾರ್ಥಿಗಳು ದೊಡ್ಡವರಾದಾಗ ಸ್ವಂತ ನಿರ್ಧಾರ ಮಾಡುವ ಶಕ್ತಿ ವೃದ್ಧಿಯಾಗುತ್ತದೆ. ಪ್ರಾಥಮಿಕ ಹಂತದಲ್ಲಿ ಇದಕ್ಕೆ ಪೂರಕವಾಗುವಂತಹ ನಲಿ–ಕಲಿ, ಪ್ರಕೃತಿಯಲ್ಲಿನ ಮರ–ಗಿಡಗಳನ್ನು ಸ್ವಯಂ ಗುರುತಿಸುವಿಕೆ ಸೇರಿದಂತೆ ಸಮುದಾಯ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ ಎಂದರು.

ರಾಜ್ಯ ಸರ್ಕಾರ ಶಾಲಾ ಕಟ್ಟಡ, ಶೌಚಾಲಯ ನಿರ್ಮಾಣ ಸೇರಿದಂತೆ ಮೂಲಸೌಕರ್ಯಕ್ಕಾಗಿ ಸಾಕಷ್ಟು ಅನುದಾನ ನೀಡಿ, ಅಭಿವೃದ್ಧಿಸುತ್ತಿದೆ. ಇದಕ್ಕೆ ಪೂರಕವಾಗಿ ದಾನಿಗಳ ಮೂಲಕವೂ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಅಲ್ಲದೆ, ಬಾಚೇಗೌಡಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆ ಆಂಗ್ಲ ಮಾಧ್ಯಮವಾಗಿದ್ದು, ಇಲ್ಲಿ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ಶಾಲೆ ಹೋಬಳಿ ಮಟ್ಟದಲ್ಲಿ ಉತ್ತಮ ಶಾಲೆ ಎಂದು ಗುರುತಿಸಿಕೊಂಡಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಅಲ್ಲದೆ, ಈ ಶಾಲೆಯ ಅನತಿ ದೂರದಲ್ಲಿ ಶಾಲೆಗೆ ಸೇರಿದ ಎರಡೂವರೆ ಎಕರೆ ಜಾಗವಿದ್ದು, ಈ ಜಾಗದಲ್ಲಿ ಕ್ರೀಡಾಂಗಣ ನಿರ್ಮಿಸಲು ದಾನಿಗಳು ಕೈಜೋಡಿಸುವಂತೆ ಮನವಿ ಮಾಡಿದರಲ್ಲದೆ, ಹೈಟೆಕ್ ಮಾದರಿಯಲ್ಲಿ ಎಂ.ಆರ್.ಶ್ರೀಕಂಠಯ್ಯ ಮತ್ತು ಎಸ್.ಸುಮಿತ್ರ ಸ್ಮರಣಾರ್ಥ ಓಎಸ್‌ಎಎಟಿ ಸಂಸ್ಥೆಯಿಂದ ಮೂರು ಕೊಠಡಿಗಳನ್ನು ನಿರ್ಮಿಸಿಕೊಟ್ಟಿದ್ದು, ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸಹಕಾರ ನೀಡಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ದಾನಿಗಳು, ಹಿರಿಯ ಅಧಿಕಾರಿಗಳನ್ನು ಶಾಲಾ ಆವರಣಕ್ಕೆ ಎತ್ತಿನ ಗಾಡಿ ಮೇಲೆ ಕರೆತರಲಾಯಿತು. ಇದಕ್ಕೆ ಜಾನಪದ ತಂಡಗಳು ಸಾಥ್ ನೀಡಿದವು. ಈ ವೇಳೆ ಹೆಚ್.ಡಿ.ತಾಲೂಕು ಬಿಇಓ ಮಾರಯ್ಯ, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕ ಮರಿಕಾಳಯ್ಯ, ಎಸ್‌ಡಿಎಂಸಿ ಅಧ್ಯಕ್ಷ ಕುಮಾರ್, ಪದಾಧಿಕಾರಿಗಳು, ಸಹ ಶಿಕ್ಷಕರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಖ್ಯಾತನಾಮ ಸಾಹಿತಿಗಳ ತವರೂರು ಮೈಸೂರು




ಮೈಸೂರು, ನ.12(ಎಸ್‌ಪಿಎನ್)– ಪಾರಂಪರಿಕ ನಗರಿ, ಅರಮನೆಗಳ ನಗರಿ, ಸಾಂಸ್ಕೃತಿಕ ನಗರಿಗಳ ಜೊತೆಗೆ ಸಾಹಿತಿಗಳ ತವರೂರು ಮೈಸೂರು ಎಂದರೆ ತಪ್ಪಾಗಲಾರದು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಅಭಿಪ್ರಾಯಪಟ್ಟರು.

ಮೈಸೂರು ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಕರ್ನಾಟಕ ಅರಸು ಮಹಾಮಂಡಳಿ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಕರ್ನಾಟಕ ರಾಜ್ಯೋತ್ಸವ ಮತ್ತು ಅರಸು ಸಮುದಾಯ ಯುವ ಜನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಮೈಸೂರಿನಲ್ಲಿ ರಾಷ್ಟ್ರಕವಿ ಕುವೆಂಪು, ಸರಸ್ವತಿ ಸಮ್ಮಾನ್ ಪುರಸ್ಕೃತರಾದ ಡಾ.ಎಸ್.ಎಲ್.ಭೈರಪ್ಪ ತೀನಂಶ್ರೀ ಸೇರಿದಂತೆ ಅನೇಕ ಖ್ಯಾತನಾಮ ಸಾಹಿತಿಗಳು ನೆಲೆಸಿದ್ದರು ಎಂಬುದೇ ಮೈಸೂರಿಗರಾದ ನಮಗೆ ಹೆಮ್ಮೆಯ ವಿಷಯ ಎಂದು ತಿಳಿಸಿದರು.

ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂಬ ಹೆಸರು ನಾಮಕರಣ ಮಾಡಿ, 50 ವರ್ಷಗಳಾಗಿವೆ. ಈ ಹೆಸರು ನಾಮಕರಣ ಮಾಡಿದ್ದು, ಮೈಸೂರಿನ ನಾವು–ನೀವೆಲ್ಲರೂ ಹೆಮ್ಮೆ ಪಡುವ ಮಾಜಿ ಮುಖ್ಯಮಂತ್ರಿ ದಿ.ದೇವರಾಜ ಅರಸು. ಅಂತಹ ಇತಿಹಾಸ ಪುರುಷರ ಜಯಂತಿಯನ್ನು ರಾಜ್ಯ ಸರ್ಕಾರವೇ ಆಚರಿಸಬೇಕು. ಅವರ ಆಡಳಿತಾವಧಿಯಲ್ಲಿ ಹಿಂದುಳಿದ, ದಲಿತ, ಬಡವರಿಗೆ ಅನುಕೂಲವಾಗುವಂತಹ ಅನೇಕ ಯೋಜನೆಗಳನ್ನು ಜಾರಿಗೆ ತಂದರು. ಈ ವೇಳೆ ಹಿರಿಯ ಸಾಹಿತಿ ಪ್ರಧಾನ್ ಗುರುದತ್, ಲಯನ್ಸ್ ರಾಮರಾಜೇ ಅರಸು, ಶುಭ ಸಂಜಯ್ ಅರಸ್, ಆದರ್ಶ ಬಿ.ಅರಸ್, ಕೆಯುಎಂಸಿ ಟ್ರಸ್ಟ್ ಗೌರವಾಧ್ಯಕ್ಷರಾದ ಎಂ.ಎಲ್. ಬಸವರಾಜೇ ಅರಸ್, ಡಾ.ಎಂ.ಜಿ. ಆರ್.ಅರಸ್, ಅಧ್ಯಕ್ಷ ಬಿ.ಎಸ್.ಶ್ರೀಧರರಾಜ ಅರಸ್, ಹೆಚ್‌ಎಂಟಿ ಲಿಂಗರಾಜೇ ಅರಸ್ ಸೇರಿದಂತೆ ಇತರರಿದ್ದರು.

ಲೇಖಕ ರಂಗನಾಥ ಕಂಟನಕುಂಟೆ ಮೂರು ಕೃತಿಗಳ ಬಿಡುಗಡೆ



ಮೈಸೂರು, ನ.12(ಎಸ್‌ಪಿಎನ್)– ಲೇಖಕ ರಂಗನಾಥ ಕಂಟನಕುಂಟೆ ರಚಿತ 'ಪ್ರೇಮ ಬಿಕ್ಕು' ಮತ್ತು 'ಬಾಪುಬಟ್ಟೆ' (ಕವನ ಸಂಕಲನ), 'ಓದಿನ ಒಕ್ಕಲು' (ವಿಮರ್ಶಾ ಲೇಖನಗಳ ಸಂಕಲನ) ಪುಸ್ತಕಗಳನ್ನು ಶನಿವಾರ ಬಿಡುಗಡೆಗೊಳಿಸಲಾಯಿತು.

ಮೈಸೂರು ರಂಗಾಯಣ ಆವರಣದ ಶ್ರೀರಂಗ ಮಂದಿರದಲ್ಲಿ ಚಿಂತನ ಚಿತ್ತಾರ ಪ್ರಕಾಶನ ವತಿಯಿಂದ ಆಯೋಜಿಸಿದ್ದ ಸಮಾರಂಭದಲ್ಲಿ ಮೂರು ಪುಸ್ತಕಗಳನ್ನು ಹಿರಿಯ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ, ಕವಯತ್ರಿ ಪ್ರೊ.ಚ.ಸರ್ವಮಂಗಳ, ವಿಮರ್ಶಕ ಪ್ರೊ.ಸುಭಾಷ್ ರಾಜಮಾನೆ, ಪ್ರೊ.ಡಿ.ವಿಜಯಲಕ್ಷ್ಮೀ, ಚಿಂತನಚಿತ್ತಾರ ಪ್ರಕಾಶನದ ನಿಂಗರಾಜು ಚಿತ್ತಣ್ಣವರ್ ನೇತೃತ್ವದಲ್ಲಿ ಬಿಡುಗಡೆಗೊಳಿಸಿದರು.

ಮೊದಲಿಗೆ ಪ್ರೊ.ಸುಭಾಷ್ ರಾಜಮಾನೆ ಅವರು 'ಓದಿನ ಒಕ್ಕಲು' ಪುಸ್ತಕ ಕುರಿತು ಮಾತನಾಡಿ, ಲೇಖಕ ರಂಗನಾಥ ಕಂಟನಕುಂಟೆ ಬಹುಮುಖ ಪ್ರತಿಭೆಯಾಗಿದ್ದು, ನಾಟಕ, ಕಥೆ, ಕಾದಂಬರಿ, ವಿಮರ್ಶೆ ಸೇರಿದಂತೆ ಇತರೆ ಸಾಹಿತ್ಯದ ಎಲ್ಲಾ ಆಯಾಮಗಳಲ್ಲೂ ಗುರುತಿಸಿಕೊಂಡಿದ್ದಾರೆ. ಫೋಟೋಗ್ರಫಿ ಬಗ್ಗೆಯೂ ವಿಶೇಷ ಆಸಕ್ತಿ ಹೊಂದಿದ್ದು, ಒಮ್ಮೆ ನಾನು ಮತ್ತು ಲೇಖಕರು ಹುಬ್ಬಳ್ಳಿಯ ಸಾಧನಕೇರಿಯಲ್ಲಿರುವ ದ.ರಾ.ಬೇಂದ್ರೆ ಮನೆಗೆ ಹೋಗಿದ್ದೇವು. ಆ ಸಂದರ್ಭದಲ್ಲಿ ಅವರು ಬೇಂದ್ರೆ ಮನೆ ಮುಂದಿನ ಕೆರೆಯಲ್ಲಿನ ಪ್ರಕೃತಿ ಸೌಂದರ್ಯವನ್ನು ತಮ್ಮ ಕ್ಯಾಮರಾದಲ್ಲಿ ಸೆರೆ ಹಿಡಿಯುವಲ್ಲಿ ಮಗ್ನರಾಗಿದ್ದ ಪ್ರಸಂಗವನ್ನು ವಿವರಿಸಿದರು.

'ಓದಿನ ಒಕ್ಕಲು' ಕೃತಿಯಲ್ಲಿ ರಣಹದ್ದುಗಳ ಜೀವನ ಶೈಲಿ ಕುರಿತು ಲೇಖನ ಬರೆದಿದ್ದಾರೆ. ರಣಹದ್ದು ಅಮೇರಿಕಾ ರಾಷ್ಟ್ರೀಯ ಪಕ್ಷಿ ಎಂದು ಘೋಷಿಸಿದ್ದು, ಇದರ ಜೀವನ ಶೈಲಿ, ಆಹಾರ ಕ್ರಮ, ಆಹಾರ ಬೇಟೆಯಾಡುವ ಕ್ರಮವನ್ನು ಎಳೆಎಳೆಯಾಗಿ ಬಿಡಿಸಿದ್ದಾರೆ ಎಂದರು.

ನಂತರ ಮಹಾರಾಜ ಕಾಲೇಜಿನ ಕನ್ನಡ ಪ್ರಾಧ್ಯಾಪಕಿ ಪ್ರೊ.ಡಿ.ವಿಜಯಲಕ್ಷ್ಮಿ ಅವರು 'ಪ್ರೇಮ ಬಿಕ್ಕು' ಪುಸ್ತಕ ಕುರಿತು ಮಾತನಾಡುವ ಮೊದಲು, ತಮ್ಮ ಕಾಲೇಜಿನಲ್ಲಿ ನಡೆದ ಘಟನೆಯನ್ನು ಉಲ್ಲೇಖಿಸಿ; ನಮ್ಮ ಕಾಲೇಜು ಹುಡುಗಿ ನಾಪತ್ತೆಯಾಗಿದ್ದಳು. ಆ ಹುಡುಗಿಯ ಪೋಷಕರು, ಸಂಬಂಧಿಕರು ನಮ್ಮ ಪ್ರಾಂಶುಪಾಲರನ್ನು ಭೇಟಿ ಮಾಡಿ, ಈ ಪ್ರಕರಣದ ಕುರಿತು ಚರ್ಚೆ ನಡೆಸುತ್ತಿದ್ದರು. ಆ ಸಂದರ್ಭದಲ್ಲಿ ಅವರು ಹುಡುಗಿಯ ವಿರುದ್ಧ ಕೆಂಡ–ಮಂಡಲವಾಗಿದ್ದನ್ನು ನೆನಪಿಸಿಕೊಂಡರೆ ಈಗಲೂ ಯುವತಿಯರು ಸ್ವಂತ ನಿರ್ಧಾರ ತೆಗೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿಲ್ಲ ಎನಿಸುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಮಾತನಾಡಿ, ಒಂದು ಕಾಲಘಟ್ಟದಲ್ಲಿ ಓದುಗರು ಸಂಖ್ಯೆಗೆ ಅನುಗುಣವಾಗಿ ಪುಸ್ತಕಗಳು ರಚನೆಯಾಗುತ್ತಿದ್ದವು. ಅದೇ ಸಂಖ್ಯೆಯಲ್ಲಿ ವಿಮರ್ಶಕರು ಇದ್ದರು. ಆದರೆ, ಇತ್ತೀಚಿನ ದಿನಗಳಲ್ಲಿ ಪುಸ್ತಕದ ಸಂಖ್ಯೆಗೆ ಅನುಗುಣವಾಗಿ, ಓದುಗರಿಲ್ಲ. ಹಾಗಾಗಿಯೇ ವಿಮರ್ಶಕರ ಸಂಖ್ಯೆಯೂ ಕಡಿಮೆಯಾಗುತ್ತಿದೆ. ಅಂತೆಯೇ ಮಹಾಭಾರತ ಮತ್ತು ರಾಮಾಯಣದಲ್ಲಿ ಹಿರಿಯರ ಕುರಿತು ಚಿತ್ರಣವಿದೆ. ಇದರಲ್ಲಿ ಒಮ್ಮೆ ಕರ್ಣ ನನಗೂ ಪಟ್ಟದ ಮೇಲೆ ಆಸೆ ಇರುವುದನ್ನು ಭೀಷ್ಮರ ಬಳಿ ವ್ಯಕ್ತಪಡಿಸುತ್ತಾನೆ. ಈ ಅಂಶ ಯುವಕರಲ್ಲಿರುವ ಪ್ರತಿಭೆ ಹೊರಬರಲು ಸಹಕಾರಿಯಾಗುವ ಸಂದರ್ಭವನ್ನು ವಿವರಿಸಿದರು.

ರಿಂಗ್ ರಸ್ತೆಯಲ್ಲಿ ಸುಲಿಗೆ: ಮೂವರ ಬಂಧನ

ಮೈಸೂರು, ನ12(ಬಿಎಲ್‌ಯು)– ಮೈಸೂರಿನ ರಿಂಗ್ ರಸ್ತೆಯಲ್ಲಿ ಚಾಕು ತೋರಿಸಿ ಹಣ ದೋಚುತ್ತಿದ್ದ ಮೂವರು ಸುಲಿಗೆಕೋರರನ್ನು ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಗೌಸಿಯಾನಗರದ ಮುಹೀನ್, ಸುಹೇಲ್ ಬೇಗ್ ಹಾಗೂ ರಾಘವೇಂದ್ರ ನಗರದ ಮೊಹಮ್ಮದ್ ಶೋಹೆಬ್ ಬಂಧಿತ ಆರೋಪಿಗಳಾಗಿದ್ದಾರೆ. ಮೈಸೂರಿನ ರಿಂಗ್ ರಸ್ತೆಯ ಖಾಸಗಿ ಹೋಟೆಲ್ ಬಳಿ ನಿಂತಿದ್ದ ಕಾರು ಚಾಲಕನನ್ನು ಇವರು ಅಡ್ಡಗಟ್ಟಿ, ಚಾಕು ತೋರಿಸಿ ಕಾರು, ಆತನ ಬಳಿ ಇದ್ದ 16 ಸಾವಿರ ರೂಪಾಯಿ ನಗದು ಹಾಗೂ ಎರಡು ಮೊಬೈಲ್ ಕಸಿದು ಪರಾರಿಯಾಗಿದ್ದರು.

ಈ ಸಂಬಂಧ ಕಾರು ಚಾಲಕ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದನು. ಕಾರ್ಯಾಚರಣೆ ನಡೆಸಿದ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದು, ಆರೋಪಿಗಳಿಂದ 24,850 ನಗದು ಹಾಗೂ ಕೃತ್ಯಕ್ಕೆ ಬಳಸಿದ್ದ ಬೈಕ್ ಅನ್ನು ವಶಪಡಿಸಿಕೊಂಡಿದ್ದಾರೆ.

PUBLIC NOTICE

This is to inform the public in general that our client **Mr. MOHAMMED AMEEN and Mrs. UMMEHANI MOHAMMED** are purchasing the Schedule property from **Mr. Saifulla Mohammed Ghouse.**

If any person has any kind of Right, Title, interest, objection, claim or Enforceable charge over the schedule Property or to the proposed Sale by them they may lodge their claim/ objection with the undersigned within **15 days** from the notification with supporting documents, Due failing which my client will take it for granted that there are no claims/charges/objections whatsoever from whomsoever. Any claims/ objections received after stipulation period of 15 days will be dated have no claim and the same will be ignored.

SCHEDULE PROPERTY

All that Piece and parcel of the Immovable Property as per the records of Siddalingapura Grama Panchayath Office the Property **bearing No. 456/C,** formed in alienated land vide No. ALN(1)CR-65/2010-11 dated 27-07-2011 bearing No. Part -C, Survey No. 131/3, (old Sy No. 131/2) and **Now Situated at Belavatta Village,** Kasaba Hobli, Mysore Taluk Mysore, and Bounded on East by: 9 Mtrs Road, West by: Retained Portion of Part - B Survey No. 131/3, North By : Property bearing Survey No. 131/1, South By: 9 Mtrs Road. **Measuring East to West : 18.76 Meter (59.6+63.51)/2 Feet,: North to South: 32.94 Meter (107.6+108.6) / 2 Feet. In all 618.13 Sq Mtrs (6653.55 Sq Ft) of site**

Sd/- Asadulla Khan Saifuddin, B.Sc., LL.B, PGDM, Advocate & Notary, #13, Sadiq-Ul-Arneen Complex, Mahadevpura Main Road, Udayagiri, Mysore. **Mob. 9916586222.**

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು







14ನೇ ವರ್ಷದ ಪುಣ್ಯಸ್ಮರಣೆ



A.S ಮಹದೇವಯ್ಯ

Rtd. ASI

ನಂಜನಗೂಡು

ನೀವು ನಮ್ಮನಗಲಿ ಇಂದಿಗೆ 14 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು

ಪತ್ನಿ: ಗೌರಮ್ಮ, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಬೀಗರು ಮತ್ತು ಮೊಮ್ಮಕ್ಕಳು ಹಾಗೂ ಕುಟುಂಬದವರು.

ಕರ್ನಾಟಕ ಉಚ್ಚನ್ಯಾಯಾಲಯ ಬೆಂಗಳೂರು

(ಮೂಲ ಕಾನೂನಿನ ವ್ಯಾಪ್ತಿ)

ಕಂಪನಿಗಳ ಕಾಯಿದೆ 1956 ರ ವಿಷಯದಲ್ಲಿ

ಮತ್ತು

ಮೆ|| ಕಿರ್ಲೋಸ್ಕರ್ ಇನ್‌ವೆಸ್ಟ್‌ಮೆಂಟ್ ಅಂಡ್ ಫೈನಾನ್ಸ್ ಲಿಮಿಟೆಡ್

(ಇನ್‌ಲಿಕ್ವಿಡೇಷನ್) ಕಂಪನಿಯ ವಿಷಯದಲ್ಲಿ

ಕಂಪನಿ ಮನವಿ ಸಂ: 2/2000

ಮಾರಾಟ ಪ್ರಕಟಣೆ

ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರು ಓಎಲ್‌ಆರ್ ನಂ. 87/2023 ವಿಷಯದಲ್ಲಿ ದಿನಾಂಕ 27.09.2023 ರಂದು ಹೊರಡಿಸಿದ ಆದೇಶದ ಪ್ರಕಾರ, ಮೇಲ್ಕಾಣಿಸಿದ ಲಿಕ್ವಿಡೇಶನ್‌ನಲ್ಲಿರುವ ಕಂಪನಿಗೆ ಸಂಬಂಧಿತ ಈ ಕೆಳಗಿನ ಸ್ಥಿರಾಸ್ತಿಗಳನ್ನು **"ಹೇಗಿದೆಯೊ, ಎಲ್ಲಿದೆಯೊ ಮತ್ತು ಅಲ್ಲಿ ಏನಿದೆಯೋ ಹಾಗೆಯೇ"** ಆಧಾರದಲ್ಲಿ ಮಾರಾಟ ಮಾಡಲೆಂದು, ಮೆ. ರೈಲ್‌ಟೆಲ್ ಕಾರ್ಪೊರೇಶನ್ ಆಫ್ ಇಂಡಿಯಾ ಲಿಮಿಟೆಡ್‌ನವರು ದಿನಾಂಕ **24.11.2023** ರಂದು **14.00** ಗಂಟೆಯಿಂದ **17.00** ಗಂಟೆಯೊಳಗೆ ಕೈಗೊಳ್ಳುವ ಇ-ಹರಾಜು ವೇದಿಕೆಯಲ್ಲಿನ **(https://olauction.enivida.com)** ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಆನ್‌ಲೈನ್ ಸ್ಪರ್ಧಾತ್ಮಕ ಬಿಡ್‌ಗಳನ್ನು ಆಹ್ವಾನಿಸಲಾಗಿದೆ.

ಲಾಟ್ ನಂ.	ಸ್ವತ್ತಿನ ವಿವರ ಮತ್ತು ವಿಳಾಸ		Upset Price	EMD	Date and Time of Inspection
1	ವಸತಿ ಫ್ಲಾಟ್ ನಂ.ಡಿ-2	ಹೇಮಾವತಿ ಅಪಾರ್ಟ್‌ಮೆಂಟ್, ನಂ22/23, ದೇವಸ್ಥಾನ ರಸ್ತೆ, ಜಯಲಕ್ಷ್ಮಿಪುರಂ, ಮೈಸೂರು – 570012, ಕರ್ನಾಟಕ	Rs. 38 lakshs	Rs. 4 lakshs	17.11.2023 ರಂದು ಬೆಳಿಗ್ಗೆ 11.00 ರಿಂದ ಸಂಜೆ 5.00 ಗಂಟೆಯೊಳಗೆ
2	ವಸತಿ ಫ್ಲಾಟ್ ನಂ.ಡಿ-5		Rs. 38 lakshs	Rs. 4 lakshs	

ಮಾರಾಟಕ್ಕೆ ಸಂಬಂಧಿತ ಷರತ್ತು ಮತ್ತು ನಿಬಂಧನೆಗಳು, ಇ-ಹರಾಜಿಗೆ ಸಂಬಂಧಿತ ಕ್ರಮಗಳ ಸಂಪೂರ್ಣ ವಿವರ, ಆನ್‌ಲೈನ್ ನೋಂದಣಿಗೆ ಮಾರ್ಗಸೂಚಿ ಮತ್ತು ಸ್ಥಿರಾಸ್ತಿಗಳ ಸಂಪೂರ್ಣ ವಿವರಗಳನ್ನು ಒಳಗೊಂಡಿರುವ ಸಮಗ್ರ ಇ-ಹರಾಜು ಕೆಟಲಾಗ್ ಪ್ರತಿಯ ಮೆ. ರೈಲ್‌ಟೆಲ್ ಕಾರ್ಪೊರೇಶನ್ ಆಫ್ ಇಂಡಿಯಾ ಲಿಮಿಟೆಡ್ ರವರ **https://olauction.enivida.com** ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ ಮತ್ತು ಇದನ್ನು ಸದರಿ ಯುಆರ್‌ಎಲ್ ಕ್ಲಿಕ್ಕಿಸಿ ಕಾಣಬಹುದು: **https://olauction.enivida.com/** ಮತ್ತು ಅಫಿಷಿಯಲ್ ಲಿಕ್ವಿಡೇಟರ್‌ರ ವೆಬ್‌ಸೈಟ್ **http://olkarnataka.kar.nic.in** ಸಚಿವಾಲಯದ **www.mca.gov.in** ವೆಬ್‌ಸೈಟ್‌ನಲ್ಲಿ ಕೂಡ ಕಾಣಬಹುದು.

ಆಸಕ್ತಿಯುಳ್ಳ ಬಿಡ್‌ದಾರರು, ಇ-ಹರಾಜು ಪ್ರಕ್ರಿಯೆಗೆ ಸಂಬಂಧಿತ ತಮ್ಮ ಯಾವುದೇ ಸ್ಪಷ್ಟೀಕರಣಗಳಿಗಾಗಿ ಶ್ರೀಮತಿ ಸುಜಾತ ಸೀನಿಯರ್ ಮ್ಯಾನೇಜರ್, ಮೊಬೈಲ್ ನಂ. 8448288989 ಮತ್ತು ಶ್ರೀ. ಗಗನ್ ಮೊಬೈಲ್: 844828 8987 ಮೆ. ರೈಲ್‌ಟೆಲ್ ಕಾರ್ಪೊರೇಶನ್ ಆಫ್ ಇಂಡಿಯಾ ಬೆಂಗಳೂರು ಇವರನ್ನು ಸಂಪರ್ಕಿಸುವುದು ಮತ್ತು ಸ್ವತ್ತಿನ ವಿವರಗಳಿಗಾಗಿ ಶ್ರೀ. ವಸಂತ ಕುಮಾರ್ ಸಹಾಯಕರು, ಅಫಿಷಿಯಲ್ ಲಿಕ್ವಿಡೇಟರ್‌ರವರ ಕಚೇರಿ, ಇವರನ್ನು ಮೊಬೈಲ್ ನಂ. 99022 20304 ಸಂಖ್ಯೆಯಲ್ಲಿ ಸಂಪರ್ಕಿಸುವುದು.

ಸಹಿ/- (ಸಿ ವಿ ಸಜೀವನ್)

ಅಫಿಷಿಯಲ್ ಲಿಕ್ವಿಡೇಟರ್, ಕರ್ನಾಟಕ ಉಚ್ಚನ್ಯಾಯಾಲಯ, "ಕಾರ್ಪೊರೇಟ್ ಭವನ" ಸಂಖ್ಯೆ : 26-27, 12ನೇ ಮಹಡಿ, ರಹೇಜಾ ಟವರ್ಸ್, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560 001.

ದೂರವಾಣಿ: 080– 2559 8671/2

ಸ್ಥಳ : ಬೆಂಗಳೂರು

ದಿನಾಂಕ : 10.11.2023

ಉತ್ತರಕ್ರಿಯಾದಿ ಭೂಶಾಂತಿ ಆಹ್ವಾನ



ಶ್ರೀಮತಿ ಗಂಗಮ್ಮ

ನಿಧನ: 03.11.2023

ಭೋಜನ: ಮ: 12.30ಕ್ಕೆ

ಇವರ ಉತ್ತರಕ್ರಿಯಾದಿ ಕಾರ್ಯವನ್ನು ದಿ. 13.11.2023 ಸೋಮವಾರ ಬೆ: 10.30ಕ್ಕೆ ದೇವಯ್ಯನಹುಂಡಿಯ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದ್ದು ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ದುಃಖತಪ್ತರು: ಕುಟುಂಬವರ್ಗದವರು

ಹೆಸರಾಂತ ಕಲಾವಿದರಾದ ಶ್ರೀ ನಾಗೇಂದ್ರ ಮತ್ತು ತಂಡದವರಿಂದ ಹರಿಕಥೆ: 10 ಗಂಟೆಗೆ